ಸೋಮವಾರ, ಅಕ್ಟೋಬರ್ 3, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗರ್ಬಾ ಝಲಕ್

ಗುಜರಾತ್‌ನ ಸೂರತ್‌ನಲ್ಲಿ ನವರಾತ್ರಿ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ 'ಗರ್ಬಾ' ಕಾರ್ಯಕ್ರಮದಲ್ಲಿ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಪಾಲ್ಗೊಂಡಿದ್ದರು

ಮೈಸೂರಿನಲ್ಲಿ ರಾಹುಲ್ ಗಾಂಧಿ ಘೋಷಣೆ • ಮಳೆಯಲ್ಲೂ 'ಜೋಡೊ' ಯಾತ್ರೆ • ಉತ್ತಮ ಸ್ಪಂದನೆ

ಯಾವುದೇ ಕಾರಣಕ್ಕೂ ಪಾದಯಾತ್ರೆ ನಿಲ್ಲದು

ಪ್ರಜಾವಾಣಿ ವಾರ್ತೆ

ಮೈಸೂರು: 'ಭಾರತ್ ಜೋಡೊ' ಪಾದಯಾತ್ರೆಯು ಭಾನುವಾರ ಇಲ್ಲಿ ಜೋರು ಮಳೆಯಲ್ಲೂ ನಡೆಯಿತು. ಸಂಜೆ 6.40ರ ಸುಮಾರಿಗೆ ಪಾದಯಾತ್ರೆ ಬಂಡಿಪಾಳ್ಯ ಸಮೀಪಿಸುತ್ತಿದ್ದಂತೆಯೇ ಮಳೆ ಜೋರಾಗಿ ಸುರಿಯಲು ಆರಂಭಿಸಿತು.

ನಂಜನಗೂಡು ತಾಲ್ಲೂಕು ಕಡಕೊಳದ ಕಾಳಿಬೀರಮ್ಮ ದೇವಸ್ಥಾನದ ಬಳಿಯಿಂದ 4.46ಕ್ಕೆ ಹೊರಟ ಪಾದಯಾತ್ರೆಯಲ್ಲಿ 25 ಸಾವಿರಕ್ಕೂ ಹೆಚ್ಚು ಜನರಿದ್ದರು. ರಾಹುಲ್ ಜೊತೆ ನಾಯಕರೂ ಹೆಜ್ಜೆ ಹಾಕಿದರು. ಜಾನಪದ ಕಲಾತಂಡಗಳು ಮೆರುಗು ನೀಡಿದವು.

ಎಪಿಎಂಸಿ ಬಳಿ 'ಕಾರ್ನರ್ ಮೀಟಿಂಗ್'ನಲ್ಲಿ ಮಳೆಯಲ್ಲೇ ಭಾಷಣ ಮಾಡಿದ ರಾಹುಲ್, 'ಕೇಂದ್ರ, ರಾಜ್ಯ ಸರ್ಕಾರದ ಜನ ವಿರೋಧಿ ಧೋರಣೆ ವಿರುದ್ಧ ಧ್ವನಿ ಎತ್ತುತ್ತಲೇ ಇರುತ್ತೇನೆ. ಯಾತ್ರೆನಿಲ್ಲದು. ಮಳೆ ಬರುತ್ತಿದೆ ಎಂದು ಪಾದಯಾತ್ರೆ ನಿಲ್ಲಿಸಿದ್ದೇವೆಯೇ' ಎಂದು ಕೇಳಿದರು.

ಮೈಸೂರಿನ ಬಂಡಿಪಾಳ್ಯ ಸಮೀಪದಲ್ಲಿ ಭಾನುವಾರ ಸಂಜೆ ನಡೆದ ಕಾರ್ನರ್ ಮೀಟಿಂಗ್‌ನಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮಳೆಯಲ್ಲೂ ಭಾಷಣ ಮಾಡಿದರು

'ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನದಿಗಳು ಹರಿಯುವಂತೆಯೇ ಯಾತ್ರೆಯೂ ಮಳೆ, ಗಾಳಿ, ಬಿಸಿಲೆನ್ನದೆ ಮುಂದುವರಿಯುತ್ತದೆ. ದ್ವೇಷ–ಅಸೂಯೆ ಇಲ್ಲದೆ, ಪ್ರೀತಿ–ಸಹನೆಯ ಸಂದೇಶವನ್ನಷ್ಟೆ ನೀಡಲಾಗುತ್ತಿದೆ. ಇದೇ ನಮ್ಮ ದೇಶದ ಸಂಸ್ಕೃತಿ' ಎಂದರು.

'ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಶೇಕಡ 40ರಷ್ಟು ಕಮಿಷನ್ ಕೊಡಲಾಗದೆ ಆ ಪಕ್ಷದ ಮುಖಂಡರೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಇದು ಭ್ರಷ್ಟಾಚಾರಕ್ಕೆ ನಿದರ್ಶನ' ಎಂದು ಅವರು ಟೀಕಿಸಿದರು.

'ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ದ್ವೇಷಭಾವನೆ ಹರಡುತ್ತಿದ್ದಾರೆ. ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆ ಹೆಚ್ಚಿದೆ. ತೀವ್ರ ತೊಂದರೆ ಅನುಭವಿಸುತ್ತಿರುವ ಬಡವರ ಧ್ವನಿಯಾಗಿ ಯಾತ್ರೆ ನಡೆಸುತ್ತಿದ್ದೇವೆ. ಭಾರತವನ್ನು ಜೋಡಿಸಿಯೇ ತೀರುತ್ತೇವೆ' ಎಂದರು.

ಬಳಿಕ ದಿನದ ಯಾತ್ರೆಯು ಬಂಡಿಪಾಳ್ಯದ ಬಳಿ ಅಂತ್ಯಗೊಂಡಿತು. ನಂತರ, ಸುತ್ತೂರು ಮಠಕ್ಕೆ ಭೇಟಿ ನೀಡಿದ ರಾಹುಲ್ ಹಾಗೂ ಮುಖಂಡರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.

ಯಾತ್ರೆಯು, ಅ.3 (ಸೋಮವಾರ) ಬೆಳಿಗ್ಗೆ ಇಲ್ಲಿನ ಜಯಚಾಮರಾಜೇಂದ್ರ ವೃತ್ತದಿಂದ ಮೈಸೂರು–ಬೆಂಗಳೂರು ಹೆದ್ದಾರಿಯ ಕಡೆಗೆ ಸಂಚರಿಸಲಿದೆ.

ಸೋನಿಯಾ ಗಾಂಧಿ ಇಂದು ರಾಜ್ಯಕ್ಕೆ

ಬೆಂಗಳೂರು: ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೋಮವಾರ ರಾಜ್ಯಕ್ಕೆ ಬರಲಿದ್ದು, 'ಭಾರತ್ ಜೋಡೊ' ಪಾದಯಾತ್ರೆಯಲ್ಲಿ ಗುರುವಾರ ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸೋನಿಯಾ ಗಾಂಧಿ

'ಸೋನಿಯಾ ಗಾಂಧಿ ಅವರು ಎರಡು ದಿನಗಳ ಕಾಲ ಕೊಡಗು ಜಿಲ್ಲೆಯಲ್ಲಿ ತಂಗುವರು. ಗುರುವಾರ ಒಂದು ದಿನ ಮಾತ್ರ ಮಂಡ್ಯ ಜಿಲ್ಲೆಯಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವರು' ಎಂದು ಕೆಪಿಸಿಸಿ ಮೂಲಗಳು ಮಾಹಿತಿ ನೀಡಿವೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಕೂಡ ಗುರುವಾರವೇ ಪಾದಯಾತ್ರೆಯನ್ನು ಸೇರಿಕೊಳ್ಳಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಕಪ್ಪು ಬಾವುಟ ಪ್ರದರ್ಶನ ಸಿದ್ಧತೆ ಬಿಜೆಪಿ ನಾಯಕರಿಗೆ ಡಿಕೆಶಿ ಎಚ್ಚರಿಕೆ

ಬದನವಾಳು (ಮೈಸೂರು ಜಿಲ್ಲೆ): 'ಭಾರತ್ ಜೋಡೊ ಯಾತ್ರೆ ಅ.3ರಂದು ಮೈಸೂರಿನಲ್ಲಿ ಸಂಚರಿಸುವಾಗ ಪ್ರದರ್ಶಿಸಲು ಬಿಜೆಪಿಯವರು ಕಪ್ಪುಬಾವುಟಗಳನ್ನು ಹಂಚಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭಾನುವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದನ್ನು ನಗರ ಪೊಲೀಸ್ ಆಯುಕ್ತರ ಗಮನಕ್ಕೆ ತಂದಿದ್ದೇನೆ. ಕಪ್ಪುಬಾವುಟ ಪ್ರದರ್ಶನ, ಮೊಟ್ಟೆ, ಕಲ್ಲು ಎಸೆಯುವುದರ ಫಲವನ್ನು ಮುಂದೆ ತಿಳಿಸುತ್ತೇನೆ' ಎಂದು ಬಿಜೆಪಿ ನಾಯಕರಿಗೆ ಎಚ್ಚರಿಸಿದರು.

'ಎಲ್ಲಿ ನೋವು, ಶ್ರಮ ಇದೆಯೋ ಅಲ್ಲಿ ಫಲವಿದೆ ಎಂದು ನಂಬಿ ಯಾತ್ರೆ ನಡೆಸುತ್ತಿದ್ದೇವೆ. ಬದನವಾಳುವಿನಲ್ಲಿ ಮನಸ್ಸುಗಳನ್ನು ಜೋಡಿಸುವ ಕೆಲಸ ಆಗಿದೆ. ಇದೇ ಯಾತ್ರೆಯ ಮೂಲ ಉದ್ದೇಶ' ಎಂದರು.

'ಯಂಗ್ ಇಂಡಿಯಾ ಹಾಗೂ ನ್ಯಾಷನಲ್ ಹೆರಾಲ್ಡ್ ಪ್ರಕರಣ ವಿಚಾರವಾಗಿ ಅ.7ರಂದು ವಿಚಾರಣೆಗೆ ಹಾಜರಾಗಲು ನನಗೆ, ಸಹೋದರ ಡಿ.ಕೆ.ಸುರೇಶ್‌ಗೆ ಜಾರಿ ನಿರ್ದೇಶನಾಲಯ ನೋಟಿಸ್ ನೀಡಿದೆ. ಅಂದು ರಾಹುಲ್ ಅವರೊಂದಿಗೆ ಆದಿಚುಂಚನಗಿರಿ ಮಠಕ್ಕೆ ತೆರಳಿ ಸ್ವಾಮೀಜಿ ಭೇಟಿ ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಲೇಬೇಕು. ಕಾಲಾವಕಾಶ ಕೇಳುತ್ತೇನೆ' ಎಂದರು.

ನೇಕಾರ ಮಹಿಳೆಯರ ಬವಣೆ ಆಲಿಸಿದ ರಾಹುಲ್ ಗಾಂಧಿ

ಬದನವಾಳು (ಮೈಸೂರು ಜಿಲ್ಲೆ): ಇಲ್ಲಿನ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಕಾರ್ಯನಿರ್ವಹಿಸುವವರು ಹಾಗೂ ಹತ್ತಿ ಕೊರತೆಯಿಂದ ಕೆಲಸ ಕಳೆದುಕೊಂಡಿರುವ 40 ಮಹಿಳೆಯರ ಬವಣೆಯನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆಲಿಸಿದರು.

'ನೂಲುವುದು ಹೇಗೆ, ಕೈಯಲ್ಲಿ ಮಾಡುತ್ತೀರೋ, ಯಂತ್ರದಲ್ಲೋ, ಎಷ್ಟು ಮೀಟರ್ ಬಟ್ಟೆ ಮಾಡಬಹುದು ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರು. 'ಇದರಿಂದ ಎಷ್ಟು ಗಳಿಸುತ್ತೀರಿ' ಎಂದೂ ಕೇಳಿದರು.

ಪ್ರಶ್ನೆಗಳನ್ನು ಕನ್ನಡಕ್ಕೆ ಅನುವಾದಿಸಿದ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, 'ಕೆಲಸಕ್ಕೆ ತಕ್ಕಂತೆ ಗಳಿಕೆ ಸಿಗುತ್ತಿಲ್ಲ. ಸರ್ಕಾರ ಸರಿಯಾಗಿ ಹತ್ತಿ ಪೂರೈಸದಿದ್ದರಿಂದ ಕೆಲಸ ಕಡಿಮೆಯಾಗಿದೆ. ಬಹಳಷ್ಟು ಮಂದಿಗೆ ಕೆಲಸವೇ ಇಲ್ಲದಂತಾಗಿದೆ' ಎಂದರು.

ದನಿಗೂಡಿಸಿದ ಮಹಿಳೆಯರು, 'ಆರು ತಿಂಗಳಿಂದ ಕೆಲಸವಿಲ್ಲದೆ ಜೀವನ ಕಷ್ಟವಾಗಿದೆ. ಸಂಬಂಧಿಸಿದವರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಕೆಲಸ ಕೊಡಿಸಿ' ಎಂದು ಕೋರಿದರು.

ಆಗ ರಾಹುಲ್ ಗಾಂಧಿ, 'ಇನ್ನಾರು ತಿಂಗಳು ಕಾಯಿರಿ. ನಮ್ಮದೇ ಸರ್ಕಾರ ಬರುತ್ತದೆ. ಮಾರುಕಟ್ಟೆ ದರಕ್ಕನುಗುಣವಾಗಿ ವೇತನ ಸಿಗುವಂತೆ ಮಾಡುತ್ತೇವೆ' ಎಂದು ಭರವಸೆ ನೀಡಿದರು. ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅದಕ್ಕೆ ದನಿಗೂಡಿಸಿದರು.

'ಕೇಂದ್ರದಲ್ಲಿ 50 ಮಂದಿ ಇದ್ದು, ಈಗ ಹತ್ತು ಮಂದಿಗಷ್ಟೆ ಕೆಲಸವಿದೆ. ನಮ್ಮ ನೋವು ಆಲಿಸಿದ ರಾಹುಲ್ ಸ್ಪಂದಿಸುವ ಭರವಸೆ ನೀಡಿದ್ದಾರೆ. ಎಲ್ಲರಿಗೂ ಕೊಟ್ಟಂತೆ ಇವರಿಗೂ ಮನವಿ ನೀಡಿದ್ದೇವೆ. ಏನಾಗುತ್ತದೆಯೋ ನೋಡಬೇಕು' ಎಂದು ರತ್ನಮ್ಮ ಮತ್ತು ಸುಧಾಮಣಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಜೋಡಿ'ಸಿದ ರಸ್ತೆ, ವೈಷಮ್ಯ ನಿವಾರಣೆ ಯತ್ನ

• ಎಂ.ಮಹೇಶ

ಮುಖ್ಯಾಂಶಗಳು

- ವಿವಿಧ ಸಮಾಜದವರ ಜೊತೆಗೆ ಸಹಭೋಜನ
- ನಂಜುಂಡೇಶ್ವರನಿಗೆ ನಮನ
- ಮೈಸೂರು ನಗರದಲ್ಲಿ ಯಾತ್ರೆ ವಾಸ್ತವ್ಯ

ಬದನವಾಳು (ಮೈಸೂರು ಜಿಲ್ಲೆ): ಭಾರತ್ ಜೋಡೊ ಯಾತ್ರೆಯಲ್ಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇಲ್ಲಿನ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿ ಆಚರಿಸಿದರು. ಸಹಚಿಂತನ, ಸಹಭೋಜನ, ಶ್ರಮದಾನದಿಂದ ಗಮನ ಸೆಳೆದರು.

1993ರಲ್ಲಿ ನಡೆದಿದ್ದ ಗಲಭೆಯಿಂದ ವೀರಶೈವ ಲಿಂಗಾಯತ–ದಲಿತರ ನಡುವೆ ಉಂಟಾಗಿದ್ದ ವೈಷಮ್ಯ ನಿವಾರಣೆಗೆ ಪ್ರಯತ್ನಿಸಿದರು. ಅವರ ಭೇಟಿಯ ನೆನಪಿಗೆ ಕೆಲ ಸೇವಾ ಕಾರ್ಯಗಳೂ ನಡೆದವು. ಕೆಲ ಮನೆಗಳಿಗೆ ಆಯೋಜಕರು ಸುಣ್ಣ–ಬಣ್ಣ ಮಾಡಿಸಿಕೊಟ್ಟಿದ್ದಾರೆ.

ರಾಜ್ಯದಲ್ಲಿ ಯಾತ್ರೆಯ 3ನೇ ದಿನವಾದ ಭಾನುವಾರ ಬೆಳಿಗ್ಗೆ ತಾಂಡವಪುರದ ವಾಸ್ತವ್ಯ ಸ್ಥಳದಿಂದ, 1927ರಲ್ಲಿ ಗಾಂಧೀಜಿ ಭೇಟಿ ನೀಡಿದ್ದ ಖಾದಿ ಗ್ರಾಮೋದ್ಯೋಗ ಕೇಂದ್ರದ ಆವರಣಕ್ಕೆ ಬಂದ ರಾಹುಲ್, ರಾಷ್ಟ್ರಪಿತನ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು.

ಬಳಿಕ ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ ಪ್ರಸ್ತುತಪಡಿಸಿದ ಗಾಂಧೀಜಿಗೆ ಪ್ರಿಯವಾದ ಭಜನೆಗಳನ್ನು ಆಲಿಸಿದರು.

ಭೇಟಿಯ ಸ್ಮರಣೆಗಾಗಿ ಕೇಂದ್ರದಲ್ಲಿ ತೆಂಗಿನಸಸಿ ನೆಟ್ಟರು. ಯಾತ್ರೆಯಲ್ಲಿರುವ 'ಭಾರತ ಯಾತ್ರಿ'ಗಳೂ ಗಿಡಗಳನ್ನು ನೆಟ್ಟರು.

ಗ್ರಾಮದಲ್ಲಿ ಪ್ರದಕ್ಷಿಣೆ: ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಅವರನ್ನು ನೋಡಲು ಗ್ರಾಮಸ್ಥರು ಮುಗಿಬಿದ್ದರು. ಮಹಿಳೆಯರು, ಮಕ್ಕಳನ್ನು ಮಾತನಾಡಿಸಿದರು. ಜೊತೆಯಾದ ಬಾಲಕಿಯರೊಂದಿಗೆ ನಡೆದರು. 'ಯಾತ್ರೆ ಸ್ಮರಣಾರ್ಥ' ಶಾಲೆ–ಅಂಗನವಾಡಿ ಕೇಂದ್ರದ ಕಾಂಪೌಂಡ್‌ಗೆ ಬಣ್ಣ ಹಚ್ಚಿದ್ದ ಜಾಗದಲ್ಲಿ ಬಣ್ಣದಿಂದ ಹಸ್ತದ ಗುರುತು ಮೂಡಿಸಿದರು. ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್ ಇದ್ದರು.

ಸಹ ಭೋಜನ: ವೀರಶೈವ ಲಿಂಗಾಯತರು, ಹಿಂದುಳಿದವರು, ದಲಿತರೊಂದಿಗೆ ರಾಹುಲ್ ಮತ್ತು ನಾಯಕರು ಸಹಭೋಜನ ಮಾಡಿದರು. 'ವಿವಿಧ ಸಮಾಜದವರು ಸಹಪಂಕ್ತಿಯಲ್ಲಿ ಊಟ ಮಾಡಿದ್ದು 29 ವರ್ಷಗಳ ನಂತರ ಇದೇ ಮೊದಲು' ಎಂದು ಮುಖಂಡರು ತಿಳಿಸಿದರು.

ಆಯಾ ಸಮಾಜದ ಮೂರ್ನಾಲ್ಕು ಪ್ರತಿನಿಧಿಗಳ ನಡುವೆ ತಲಾ ಒಬ್ಬ ನಾಯಕರು ಕುಳಿತು ಭೋಜನ ಸವಿದರು. ರಾಹುಲ್ ಮಕ್ಕಳೊಂದಿಗೆ ಕುಳಿತಿದ್ದರು.

ಬಳಿಕ ನಂಜನಗೂಡಿನಲ್ಲಿ ನಂಜುಂಡೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ರಾಹುಲ್ ಅವರು ಪಾದಯಾತ್ರೆ ಮುಂದುವರಿಸಿದರು.

'ಭಾರತ್ ಜೋಡೊ' ರಸ್ತೆ

ಗ್ರಾಮದಲ್ಲಿ ನಡೆದಿದ್ದ ಗಲಭೆಯ ನಂತರ ವೈಷಮ್ಯ ಏರ್ಪಟ್ಟು, ಎರಡು ಬೀದಿಗಳ ಸಂಪರ್ಕ ರಸ್ತೆ ಬಳಕೆ ಆಗುತ್ತಿರಲಿಲ್ಲ. 'ಯಾತ್ರೆ' ಹಿನ್ನೆಲೆಯಲ್ಲಿ ಎರಡೂ ಬೀದಿಗಳನ್ನು ಜೋಡಿಸಲು ರಸ್ತೆ ನಿರ್ಮಿಸಲಾಗಿದ್ದು, ಅದಕ್ಕೆ ಪೇವರ್ಸ್ ಅಳವಡಿಸಲಾಗಿದೆ. 'ಭಾರತ್ ಜೋಡೊ ರಸ್ತೆ' ಎಂಬ ಹೆಸರಿಟ್ಟು ಫಲಕ ಅಳವಡಿಸಲಾಗಿದೆ.

ಪೇವರ್ಸ್ ಜೋಡಿಸುವ ಮೂಲಕ 180 ಮೀಟರ್ ಉದ್ದದ ರಸ್ತೆಯನ್ನು ರಾಹುಲ್ ಉದ್ಘಾಟಿಸಿ ಸ್ಥಳೀಯರೊಂದಿಗೆ ನಡೆದರು. ದಲಿತರ ಕೇರಿಯಲ್ಲಿದ್ದ ಮಹಾತ್ಮಗಾಂಧಿ ಪ್ರತಿಮೆಗೆ ನಮಿಸಿದರು.

'ಗಲಭೆ ನಂತರ ಹೆಚ್ಚು ಬಳಕೆಯಾಗದೇ ಗಿಡ–ಗಂಟಿ ಬೆಳೆದಿದ್ದ ರಸ್ತೆಯನ್ನು, ಎರಡೂ ಸಮುದಾಯದ ಮುಖಂಡರ ಮನವೊಲಿಸಿ ದುರಸ್ತಿಪಡಿಸಿ, ಪೇವರ್ಸ್ ಅಳವಡಿಸಿದ್ದೇವೆ. ಸ್ಥಳೀಯರೇ ಹಣ ನೀಡಿದ್ದಾರೆ. ಒಡೆದಿದ್ದ ಮನಸ್ಸುಗಳು ಒಂದಾಗಿವೆ' ಎಂದು ಮುಖಂಡರಾದ ಬಸವರಾಜ, ಕಳಲೆ ಕೇಶವಮೂರ್ತಿ ತಿಳಿಸಿದರು.

ಬದನವಾಳು ಗ್ರಾಮದಲ್ಲಿ ನಿರ್ಮಾಣಗೊಂಡಿರುವ 'ಭಾರತ್ ಜೋಡೊ' ರಸ್ತೆ

'ವಿದ್ಯುತ್ ದರ ಏರಿಕೆ ನಿಯಮ ವಾಪಸ್ ಚಿಂತನೆ'

ಉಡುಪಿ: 'ಅಗತ್ಯಬಿದ್ದರೆ ವಿದ್ಯುತ್ ದರ ಏರಿಕೆ ನಿಯಮಾವಳಿ ಹಿಂಪಡೆಯಲಾಗುವುದು' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಭಾನುವಾರ ತಿಳಿಸಿದರು.

'ವಿದ್ಯುತ್ ದರ ಏರಿಕೆಗೆ ಸರ್ಕಾರ ಹೊಸ ನಿಯಮಾವಳಿ ರೂಪಿಸಿಲ್ಲ. 2014ರಲ್ಲಿ ಕಲ್ಲಿದ್ದಲಿನ ಬೆಲೆ ಹೊಂದಾಣಿಕೆಗೆ ರೂಪಿಸಿದ್ದ ನಿಯಮಾವಳಿಯೇ ಮುಂದುವರಿದಿದೆ. ವಿದ್ಯುತ್ ದರ ಏರಿಕೆಯಿಂದ ಜನರಿಗೆ ಹೊರೆ ಆಗುತ್ತಿದೆ ಎಂಬುದರ ಅರಿವಿದೆ. ಈ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು' ಎಂದು ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಭಾರತ್ ಜೋಡೊ ಯಾತ್ರೆ: ಕರ್ನಾಟಕದಲ್ಲಿ ಕಾಂಗ್ರೆಸ್ ಜೋಡಿಸುವುದೇ?
ಭಾಗವಹಿಸುವವರು
ಸಂವಾದ
ರಮೇಶ್ ಬಾಬು, ಕಾಂಗ್ರೆಸ್
ಎಂ.ಜಿ. ಮಹೇಶ್, ಮುಖ್ಯ ವಕ್ತಾರ, ಬಿಜೆಪಿ
ಎಲ್. ಗಂಗಾಧರ ಮೂರ್ತಿ, ಪ್ರಧಾನ ಕಾರ್ಯದರ್ಶಿ, ಜೆಡಿಎಸ್
ಉಷಾ ಮೋಹನ್, ವಕ್ತಾರೆ, ಆಮ್ ಆದ್ಮಿ ಪಕ್ಷ
ಮಧ್ಯಾಹ್ನ 12 ರಿಂದ 1

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8. ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಅರ್ಪಿಸುವ
ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 PREMIER
ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು
ಅಕ್ಟೋಬರ್ 5, 2022ರ ವರೆಗೆ ಪ್ರತಿ ಸಂಜೆ 4 ರಿಂದ
ನವರಾತ್ರಿ ನವರೂಪಿಣಿ
ರಘು ಲೀಲಾ ಸಂಗೀತ ಶಾಲೆ, ಮೈಸೂರು ವತಿಯಿಂದ ಸಮೂಹ ಗಾಯನ. ನಿರ್ದೇಶನ: ಸುನೀತಾ ಚಂದ್ರ ಕುಮಾರ್
ನಿರ್ವಹಣೆ: ನಾಗರಾಜ್ ಕಪನಿ

ನಾಳೆ
ಶ್ರೀ ಚಾಮುಂಡೇಶ್ವರಿ ಪಾಲಯಮಾಂ
ಅಂತರರಾಷ್ಟ್ರೀಯ ಗಾಯಕಿಯರಾದ ಡಾ.ರಮಾ ಪುಸ್ತಕಂ, ದೀಪ್ತಿ ಶ್ರೀನಾಥ್, ಹರಿಣಿ ಶ್ರೀಧರ್, ಸಾಕ್ಷಿ ಜಗದೀಶ್ ನೇತೃತ್ವದ ಗೋಷ್ಠಿ ಗಾಯನ
ವಯಲಿನ್: ಆರ್.ದಯಾಕರ್, ಮೃದಂಗಂ: ವಿದ್ವಾನ್ ಪಿ.ಜನಾರ್ದನ ರಾವ್, ರಿದಂ ಪ್ಯಾಡ್: ವಿದ್ವಾನ್ ಎನ್. ಎಸ್.ಮಂಜುನಾಥ್. ನಿರ್ವಹಣೆ: ರವಿ ಕೋಮಿ ಶೆಟ್ಟಿ

ಮೈಸೂರಿನಿಂದ ದಸರಾ ಲೈವ್ LIVE
ಮೈಸೂರು ಅರಮನೆ ವೇದಿಕೆಯಲ್ಲಿ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ನೇರ ಪ್ರಸಾರ ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ಪ್ರತಿದಿನ ಸಂಜೆ 5.30ರಿಂದ

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3LYsDtU

ಪಿಲಿ ಪರ್ಬ ಮಂಗಳೂರಿನಲ್ಲಿ ಕುಡ್ಲ ಸಾಂಸ್ಕೃತಿಕ ಪ್ರತಿಷ್ಠಾನವು ಭಾನುವಾರ ಏರ್ಪಡಿಸಿದ್ದ 'ಕುಡ್ಲದ ಪಿಲಿ ಪರ್ಬ 2022' ಹುಲಿವೇಷ ಸ್ಪರ್ಧಾ ಕೂಟದಲ್ಲಿ ಕಂಡುಬಂದ ರೋಮಾಂಚಕಾರಿ ಕಸರತ್ತು –ಪ್ರಜಾವಾಣಿ ಚಿತ್ರ

ಪರಿಶಿಷ್ಟ ಕುಟುಂಬಕ್ಕೆ ಬಹಿಷ್ಕಾರದ ಆರೋಪ

ಪ್ರಜಾವಾಣಿ ವಾರ್ತೆ

ಕುಷ್ಟಗಿ: ಜಗಳಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಕಲ್ಲಗೋನಾಳದಲ್ಲಿ ಪರಿಶಿಷ್ಟ ಕುಟುಂಬವೊಂದಕ್ಕೆ ಕೆಲ ದಿನಗಳ ಹಿಂದೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಶರಣಪ್ಪ ಮಾದರ ಎಂಬುವವರ ದೂರಿನ ಅನ್ವಯ ಹನುಮಸಾಗರ ಪೊಲೀಸ್ ಠಾಣೆಯಲ್ಲಿ ಭಾನುವಾರ (ಅ.2) 20 ಜನರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲಾಗಿದೆ.

ಗಂಗಾವತಿ ಉಪ ವಿಭಾಗದ ಡಿವೈಎಸ್‌ಪಿ ಆರ್.ಎಸ್. ಉಜ್ಜನಕೊಪ್ಪ, ಸರ್ಕಲ್ ಇನ್‌ಸ್ಪೆಕ್ಟರ್ ಎನ್.ಆರ್. ನಿಂಗಪ್ಪ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಗಿದ್ದೇನು: 'ಕಳೆದ ತಿಂಗಳು ಕುರುಬ ಸಮುದಾಯದ ಮಾರ್ತಾಂಡಪ್ಪ ಪೊಲೀಸ್ ಪಾಟೀಲ ಸಾಕಿದ್ದ ನಾಯಿ ಮೇಕೆಯನ್ನು ಕಚ್ಚಿತ್ತು. ನಾಯಿ ಕಟ್ಟಿಹಾಕಿಕೊಳ್ಳಿ ಎಂದು ದೂರುದಾರ ಶರಣಪ್ಪ ಅವರ ಅಣ್ಣ ವೀರಣ್ಣ ಹೇಳಿದ್ದರು. ಕುಪಿತಗೊಂಡ ಮಾರ್ತಾಂಡಪ್ಪ ಮತ್ತವರ ಕುಟುಂಬದವರು ವೀರಣ್ಣ ಮತ್ತು ಮಹಿಳೆಯರು, ಮಕ್ಕಳ ಮೇಲೆ ಹಲ್ಲೆ ನಡೆಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಬಳಿಕ ರಾಜಿಸಂಧಾನ ಆಗಿದ್ದರೂ ಮಾರ್ತಾಂಡಪ್ಪ ಕುಟುಂಬ ದ್ವೇಷ ಸಾಧಿಸುತ್ತಿತ್ತು. ನಮ್ಮ ಕುಟುಂಬದ ಜೊತೆ ಸಂಪರ್ಕ ಇಟ್ಟುಕೊಳ್ಳದಂತೆ ಧ್ವನಿವರ್ಧಕದಲ್ಲಿ ಕೆಲವರು ಹೇಳಿದ್ದರು. ಯಾರು ಮಾತನಾಡುತ್ತಿಲ್ಲ. ಬ್ಯಾರಲ್‌ನಲ್ಲಿದ್ದ ನೀರು ತೆಗೆದುಕೊಂಡು ಕುಡಿದಿದ್ದಕ್ಕೆ ಹೋಟೆಲ್‌ನವರೂ ನಿಂದಿಸಿದರು. ಊರಿನ ಒಳಗೆ ಬರದಂತೆ ಬೆದರಿಕೆ ಒಡ್ಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ತನಿಖೆ ಬಳಿಕ ನಿರ್ಧಾರ'

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಡಿವೈಎಸ್‌ಪಿ ಆರ್.ಎಸ್.ಉಜ್ಜನಕೊಪ್ಪ 'ದೂರು ದಾಖಲಾಗಿದ್ದು ಪರಿಶೀಲಿಸಲಾಗುತ್ತಿದೆ. ಆದರೆ, ಪರಿಶಿಷ್ಟ ಜಾತಿಗೆ ಸೇರಿದ ಇನ್ನೊಂದು ಕುಟುಂಬದವರು ಊರಿನಲ್ಲಿ ಕಿರಾಣಿ ಅಂಗಡಿ ಮತ್ತಿತರ ಸ್ಥಳಗಳಿಗೆ ಹೋಗಿ ಬರುತ್ತಿರುವ ಮಾಹಿತಿ ಇದೆ' ಎಂದರು.

ಕೊಚ್ಚಿಹೋಗಿದ್ದ ನಾಲ್ವರು ಮಹಿಳೆಯರ ಶವಪತ್ತೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಹೊಲದಲ್ಲಿ ಕೆಲಸ ಮುಗಿಸಿ ವಾಪಸಾಗುವಾಗ ಶನಿವಾರ ರಾತ್ರಿ ಯಲಬುರ್ಗಾ ತಾಲ್ಲೂಕಿನ ಸಂಕನೂರು ಬಳಿ ಹಳ್ಳದಲ್ಲಿ ಕೊಚ್ಚಿ ಹೋಗಿದ್ದ ನಾಲ್ವರು ಮಹಿಳೆಯರ ಮೃತದೇಹಗಳು ಭಾನುವಾರ ಪತ್ತೆಯಾಗಿವೆ.

ಸಂಕನೂರಿನ ಪಾಟೀಲ ಕುಟುಂಬದ ಗಿರಿಜಾ (28), ಭುವನೇಶ್ವರಿ (32), ವೀಣಾ (22) ಮತ್ತು ರೇಖಾ (40) ಮೃತಪಟ್ಟವರು. ಅಂತ್ಯಕ್ರಿಯೆ ಗ್ರಾಮದಲ್ಲಿ ನೆರವೇರಿತು. ಕುಟುಂಬದವರಿಗೆ ಸರ್ಕಾರ ತಲಾ ₹ 5 ಲಕ್ಷ ಪರಿಹಾರ ಘೋಷಿಸಿದೆ.

'ಮಳೆಯಿಂದ ಸಂಕನೂರು ಹಳ್ಳಿ ಭರ್ತಿಯಾಗಿತ್ತು. ಆಳದ ಅರಿವಿಲ್ಲದೇ ನಡೆದುಹೋಗಲು ಮುಂದಾದಾಗ ಕೊಚ್ಚಿಕೊಂಡು ಹೋಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ್ದ ಸಚಿವ ಹಾಗೂ ಸ್ಥಳೀಯ ಶಾಸಕ ಹಾಲಪ್ಪ ಆಚಾರ್ ಅವರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡು ಸೇತುವೆ ನಿರ್ಮಿಸಲು ಆಗ್ರಹಪಡಿಸಿದರು. 'ಸೇತುವೆ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ' ಎಂದು ಸಚಿವರು ಹೇಳಿದರು.

ಹುಬ್ಬಳ್ಳಿ ವರದಿ: ಹುಬ್ಬಳ್ಳಿ–ಧಾರವಾಡ ಅವಳಿ ನಗರ, ಬೆಳಗಾವಿ, ವಿಜಯಪುರ ಸೇರಿದಂತೆ ಹಲವೆಡೆ ಭಾನುವಾರ ಮಳೆಯಾಗಿದೆ. ಹುಬ್ಬಳ್ಳಿಯಲ್ಲಿ ಸಾಯಂಕಾಲ ಧಾರಾಕಾರವಾಗಿ ಮಳೆಯಾಗಿದೆ.

ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮೊರಬ,ಚಿಂಚಲಿ,ನಿಡಗುಂದಿ, ಭಿರಡಿ ಗ್ರಾಮಗಳಲ್ಲಿ ಕಟಾವಿಗೆ ಬಂದ ಕಬ್ಬು, ಗೋವಿನ ಜೋಳ, ಹುರುಳಿ ಬೆಳೆಗಳಿಗೆ ಹಾನಿಯಾಗಿದೆ.

ವಿಜಯಪುರ ಜಿಲ್ಲೆ ಕೆಸಾಪುರದಲ್ಲಿ ಶನಿವಾರ ರಾತ್ರಿ ಸಿಡಿಲು ಬಡಿದು ಹಸು ಸಾವನ್ನಪ್ಪಿದೆ. ಬಳ್ಳಾರಿಜಿಲ್ಲೆ ಸಂಡೂರು ತಾಲ್ಲೂಕು ಕಾಟಿನಕಂಬ ಗ್ರಾಮದಲ್ಲಿ ಮನೆಯ ಗೋಡೆ ಕುಸಿದಿದೆ.

ವಿಜಯನಗರದ ಹರಪನಹಳ್ಳಿ ತಾಲ್ಲೂಕಿನ ಹಗರಿಹಳ್ಳ ಭರ್ತಿಯಾಗಿದೆ. ಜಮೀನುಗಳಿಗೆ ನೀರು ನುಗ್ಗಿದ್ದು, ನಾಲ್ಕು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಜಲಾವೃತವಾಗಿದೆ.

ಇಂದು, ನಾಳೆ ಕೆಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ, ಉತ್ತರ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಸೋಮವಾರ ಹಾಗೂ ಮಂಗಳವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆ ಆಗಬಹುದು. ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗುತ್ತದೆ ಎಂದು ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.64	5,341	7,034
ಹಾರಂಗಿ	2,859	2,856.12	475	1,650
ಕಬಿನಿ	2284	2,282.66	1,654	1,000
ಹೇಮಾವತಿ	2,922	2,921.68	2,172	3,225
ಲಿಂಗನಮಕ್ಕಿ	1,819	1,815	1,839	7,908
ಸೂಪಾ (ಮೀ)	564	553.79	1,301	3,838
ಮಾಣಿ	595	590	137	724
ತುಂಗಭದ್ರಾ	1,633	1,632	48,670	24,484
ಮಲಪ್ರಭಾ	2079.5	2,079.50	694	694
ಘಟಪ್ರಭಾ	2175	2,174.767	1,168	2,609
ಭದ್ರಾ	186	184	2,922	3,200
ಆಲಮಟ್ಟಿ (ಮೀ)	519.6	519.60	14,043	14,043
ನಾರಾಯಣಪುರ (ಮೀ)	492.25	492.08	18,000	12,200

* ನೆಲಮಟ್ಟದಿಂದ

ಭಾಲ್ಕಿ ಶ್ರೀಗಳಿಗೆ ರಾಷ್ಟ್ರೀಯ ಪ್ರಶಸ್ತಿ

ಗದಗ: 'ತೋಂಟದ ಸಿದ್ಧಲಿಂಗ ಸ್ವಾಮೀಜಿ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ'ಯನ್ನು ಪ್ರಸಕ್ತ ಸಾಲಿನಲ್ಲಿ ಬೀದರ್‌ನ ಭಾಲ್ಕಿ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದ್ದೇವರು ಅವರಿಗೆ ಪ್ರದಾನ ಮಾಡಲಾಗುವುದು' ಎಂದು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್.ಪಟ್ಟಣಶೆಟ್ಟಿ ತಿಳಿಸಿದ್ದಾರೆ. ಪ್ರಶಸ್ತಿಯು ₹ 5 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

ಡಾ.ಬಸವಲಿಂಗ ಪಟ್ಟದ್ದೇವರು

ಅ.6ರಂದು ಇಲ್ಲಿ ನಡೆಯುವ ಲಿಂ. ಡಾ.ತೋಂಟದ ಸಿದ್ಧಲಿಂಗಸ್ವಾಮೀಜಿಯವರ ನಾಲ್ಕನೇ ಪುಣ್ಯಸ್ಮರಣೆ, 'ಮರಣವೇ ಮಹಾನವಮಿ' ಕಾರ್ಯಕ್ರಮದಲ್ಲಿ ಸಚಿವ ಸಿ.ಸಿ.ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ತಿದ್ದುಪಡಿ ಪ್ರಮಾಣಪತ್ರ ಸಲ್ಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಶಿರಸಿ: 'ಅರಣ್ಯವಾಸಿಗಳ ಪರ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ತಿದ್ದುಪಡಿ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಈ ಬಗ್ಗೆ ವಿಧಾನಸಭಾಧ್ಯಕ್ಷರು ಸರ್ಕಾರಕ್ಕೆ ಒತ್ತಡ ಹಾಕಬೇಕು' ಎಂದು ಆಗ್ರಹಿಸಿ ಅರಣ್ಯ ಭೂಮಿ ಹಕ್ಕು ಹೋರಾಟಗಾರರು ಭಾನುವಾರ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಕಚೇರಿ ಎದುರು ಪ್ರತಿಭಟಿಸಿದರು.

ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆ ಕಾಗೇರಿ ಅವರ ಕಚೇರಿವರೆಗೆ ಸಾಗಿತು. ಒಂದು ತಾಸಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಯಿತು.

ಮನವಿ ಆಲಿಸಿದ ಕಾಗೇರಿ ಅವರು,, 'ಸುಪ್ರೀಂಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸುವ ಜತೆಗೆ ಅರಣ್ಯವಾಸಿಗಳ ಪರ ಪ್ರಮಾಣಪತ್ರ ಸಲ್ಲಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

ಸ್ಪಷ್ಟ ಭರವಸೆ ನೀಡಬೇಕು, ಪ್ರಮಾಣ ಪತ್ರ ಸಲ್ಲಿಕೆಯ ಕಾಲ ಮಿತಿ ತಿಳಿಸಬೇಕು ಎಂದು ಪಟ್ಟುಹಿಡಿದರು. ಇದಕ್ಕೆ ಸ್ಪಷ್ಟ ಉತ್ತರ ಸಿಗದಿದ್ದಾಗ ಕೆಲ ಹೊತ್ತು ಧರಣಿ ನಡೆಸಿದರು. ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಅವರು, '15 ದಿನದಲ್ಲಿ ತಿದ್ದುಪಡಿ ಪ್ರಮಾಣಪತ್ರ ಸಲ್ಲಿಕೆಯಾಗದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಸಿದರು.

ಅರಣ್ಯ ಭೂಮಿ ಹಕ್ಕು ಹೋರಾಟಗಾರರು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಶಿರಸಿಯ ಕಚೇರಿ ಎದುರು ಭಾನುವಾರ ಪ್ರತಿಭಟಿಸಿದರು.

ತಹಶೀಲ್ದಾರ್ ವೈಯಕ್ತಿಕ ಮಾಹಿತಿ ಕೋರಿ ಆರ್‌ಟಿಐ ಅರ್ಜಿ, ಕಾರ್ಯಕರ್ತನ ಬಂಧನ

ಕೋಲಾರ: ತಹಶೀಲ್ದಾರ್‌ಗೆ ಎಷ್ಟು ಮದುವೆ ಆಗಿದೆ? ಎಷ್ಟು ಗಂಡಂದಿರನ್ನು ಬಿಟ್ಟಿದ್ದಾರೆ? ವಿಚ್ಛೇದನ ನೀಡಿದ್ದಾರೆಯೇ ಎಂದು ಮಾಹಿತಿ ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ್ದ ಆರ್‌ಟಿಐ ಕಾರ್ಯಕರ್ತನನ್ನು ಮುಳಬಾಗಿಲು ನಗರ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಮುಳಬಾಗಿಲು ತಾಲ್ಲೂಕಿನ ಮಂಡಿಕಲ್ ನಾಗರಾಜ್ ಬಂಧಿತ ವ್ಯಕ್ತಿ. ತಹಶೀಲ್ದಾರ್ ದೂರು ಆಧರಿಸಿ ಪೊಲೀಸರು, ಆರ್‌ಟಿಐ ಕಾರ್ಯಕರ್ತನನ್ನು ಬಂಧಿಸಿದರು. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಎಷ್ಟು ವಿವಾಹಗಳಾಗಿವೆ, ಎಷ್ಟು ಗಂಡಂದಿರು? ಅವರು ಯಾವ ಕೆಲಸ ಮಾಡುತ್ತಾರೆ? ಲಗ್ನ ಪತ್ರಿಕೆ, ಕಲ್ಯಾಣ ಮಂಟಪದ ವಿವರ ಕೊಡಿ' ಎಂಬ ಮಾಹಿತಿ ನೀಡುವಂತೆ ನಾಗರಾಜ್ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದ.

'ವೈಯಕ್ತಿಕ ಮಾಹಿತಿ ಕೋರಿ ತೇಜೋವಧೆ ಮಾಡುತ್ತಿದ್ದಾನೆ. ಕಚೇರಿಗೂ ಬಂದು ಮಾಹಿತಿ ನೀಡಲು ಒತ್ತಡ ಹಾಕಿದ್ದಾನೆ. ಕರ್ತವ್ಯಕ್ಕೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾನೆ' ಎಂದು ತಹಶೀಲ್ದಾರ್ ದೂರು ನೀಡಿದ್ದರು.

ಸೋಮವಾರ, ಅಕ್ಟೋಬರ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 274 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ ಮಂಕಡಿಂಗ್ ರನೌಟ್ ಆದರಷ್ಟೇ ಸಾಕೇ?

ಇಂದು ಶಿಕ್ಷಣ 4

ಅಡುಗೆ ಎಣ್ಣೆ: ಸುಂಕ ವಿನಾಯಿತಿ ಮುಂದುವರಿಕೆ 8

ಕೇಂದ್ರ ಪುರಸ್ಕೃತ ಯೋಜನೆ: ಅನುಷ್ಠಾನದಲ್ಲಿ ಹಿನ್ನಡೆಯಾಗುವ ಆತಂಕ

ಗುಜರಾತ್‌ನಲ್ಲಿ ಬಿಜೆಪಿ ಸ್ಥಾನ ಭದ್ರ: ಸಿ–ವೋಟರ್ 9

ಬಿಡುಗಡೆಯಾಗದ ₹4,218 ಕೋಟಿ 5



ಮಂಗಳ ಹಾಡಿದ ಕಕ್ಷೆಗಾಮಿ

ಬೆಂಗಳೂರು: ಮಂಗಳ ಗ್ರಹದ ಕಕ್ಷೆಯಲ್ಲಿ ಪರಿಭ್ರಮಣ ನಡೆಸಿ ಅಪರೂಪದ ಮಾಹಿತಿಗಳನ್ನು ಸಂಗ್ರಹಿಸಿ ಭೂಮಿಗೆ ಕಳುಹಿಸು-ತ್ತಿದ್ದ ಇಸ್ರೊದ 'ಮಂಗಳಯಾನ' ಕಕ್ಷೆಗಾಮಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದೆ. 5

ಟಿ20: ಭಾರತಕ್ಕೆ ಸರಣಿ

ಗುವಾಹಟಿ (ಪಿಟಿಐ): ಭಾರತ ತಂಡ ದಕ್ಷಿಣ ಆಫ್ರಿಕಾ ವಿರುದ್ಧ ಭಾನುವಾರ ನಡೆದ ಎರಡನೇ ಟಿ20 ಪಂದ್ಯವನ್ನು 16 ರನ್‌ಗಳಿಂದ ಗೆದ್ದಿತು. ಮೂರು ಪಂದ್ಯಗಳ ಸರಣಿಯಲ್ಲಿ 2–0 ರಲ್ಲಿ ಮುನ್ನಡೆ ಸಾಧಿಸಿತು. 9

ಒಳ ಪುಟ

7 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಕ್ರಮ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಗಣಿಗಾರಿಕೆಯಿಂದ ನಾಶವಾಗಿದ್ದ ಕರ್ನಾಟಕ– ಆಂಧ್ರ ಗಡಿ • 'ಸುಪ್ರೀಂ' ಆದೇಶ

ಗಡಿ ಗುರುತಿಗೆ 6 ವಾರ ಗಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಮೀಸಲು ಅರಣ್ಯದ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆಯಿಂದ ನಾಶವಾಗಿರುವ ಕರ್ನಾಟಕ ಮತ್ತು ಆಂಧ್ರಪ್ರದೇಶದ ನಡುವಣ ಅಂತರ ರಾಜ್ಯ ಗಡಿಯ ಗುರುತುಗಳನ್ನು ಆರು ವಾರಗಳ ಒಳಗೆ ಸ್ಥಳದಲ್ಲೇ ನಿಖರವಾಗಿ ಗುರುತಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಧಾರವಾಡದ ಸಮಾಜ ಪರಿವರ್ತನಾ ಸಮುದಾಯ (ಎಸ್‌ಪಿಎಸ್) ಮತ್ತು ಇತರರು 2009 ರಲ್ಲಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಅನಿರುದ್ಧ ಬೋಸ್ ಮತ್ತು ಹೃಷಿಕೇಶ್ ರಾಯ್ ಅವರಿದ್ದ ತ್ರಿಸದಸ್ಯ ಪೀಠ, ಸೆಪ್ಟೆಂಬರ್ 28 ರಂದು ಈ ಆದೇಶ ಹೊರಡಿಸಿದೆ.

ಬಳ್ಳಾರಿ ಜಿಲ್ಲೆಯ ತುಮಟಿ, ವಿಠಲಾಪುರ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಎಚ್. ಸಿದ್ದಾಪುರ ಹಾಗೂ ಮಲಪನಗುಡಿ ಗ್ರಾಮಗಳು ಸಂಧಿಸುವ 'ಟ್ರೈ ಜಂಕ್ಷನ್' ಬಿಂದುವಿನಲ್ಲಿ ಅಂತರ ರಾಜ್ಯ ಗಡಿ ಹಾದು ಹೋಗಿದೆ. ಗಡಿಯ ಎರಡೂ ಭಾಗದಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಣಿ ಪ್ರದೇಶಗಳಿವೆ. ಗಣಿ ಪ್ರದೇಶದ ಮಧ್ಯೆ ಹಾದು ಹೋಗಿದ್ದ ಗಡಿಯ ಗುರುತುಗಳು ನಾಶವಾಗಿರುವುದು ವರದಿಯಾಗಿ 15 ವರ್ಷಗಳು ಕಳೆದಿವೆ. ಈಗ ಸುಪ್ರೀಂ ಕೋರ್ಟ್ ಆದೇಶದಿಂದಾಗಿ ಅಲ್ಲಿ ಅಂತರ ರಾಜ್ಯ ಗಡಿಯನ್ನು ಮರು ಗುರುತಿಸುವ ಪ್ರಕ್ರಿಯೆ ಅಂತಿಮಗೊಳ್ಳಲಿದೆ.

ಪ್ರಜಾವಾಣಿ ವಿಶೇಷ

ಆಂಧ್ರಪ್ರದೇಶದಲ್ಲಿ-ರುವ ಓಬಳಾಪುರಂ ಗಣಿ ಕಂಪನಿಯ ಗಣಿ ಗುತ್ತಿಗೆ ಪ್ರದೇಶಗಳನ್ನು ಖರೀದಿಸಿದ್ದ ರಾಜ್ಯದ ಆಗಿನ ಸಚಿವ ಜಿ. ಜನಾರ್ದನ ರೆಡ್ಡಿ ಕುಟುಂಬ, ಅಂತರ ರಾಜ್ಯ ಗಡಿ ಗುರುತುಗಳನ್ನೇ ಸ್ಫೋಟಿಸಿ, ರಾಜ್ಯದ ಭೂಪ್ರದೇಶವನ್ನು ಅತಿಕ್ರಮಿಸಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ 2007 ರಲ್ಲಿ ಕೇಳಿಬಂದಿತ್ತು. ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಹಿಂದಿನ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅವರು, 'ಅಂತರ ರಾಜ್ಯ ಗಡಿ ಗುರುತು ನಾಶದ ಕುರಿತು ಉಭಯ ರಾಜ್ಯಗಳ ಸಹಭಾಗಿತ್ವದಲ್ಲಿ ತನಿಖೆ ನಡೆಸುವ ಅಗತ್ಯವಿದೆ' ಎಂದು ಶಿಫಾರಸು ಮಾಡಿದ್ದರು.

ಸುಪ್ರೀಂ ಕೋರ್ಟ್ ಆದೇಶದಂತೆ ತನಿಖೆ ನಡೆಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಅಕ್ರಮ ಗಣಿಗಾರಿಕೆಯಿಂದ ಅಂತರ ರಾಜ್ಯ ಗಡಿ ಗುರುತುಗಳು ನಾಶವಾಗಿರುವುದನ್ನು ದೃಢಪಡಿಸಿತ್ತು. ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳ ಸಹಭಾಗಿತ್ವದೊಂದಿಗೆ ಅಂತರ ರಾಜ್ಯ ಗಡಿಯನ್ನು ಗುರುತಿಸುವಂತೆ ಸರ್ವೆ ಆಫ್ ಇಂಡಿಯಾಕ್ಕೆ ಸುಪ್ರೀಂ ಕೋರ್ಟ್ 2010 ರಿಂದ ಹಲವು ಬಾರಿ ಆದೇಶಿಸಿತ್ತು. ಆದರೆ, ಹತ್ತು ವರ್ಷಗಳ ಬಳಿಕ 2020ರ ಅಕ್ಟೋಬರ್‌ನಲ್ಲಿ ಗಡಿ ಗುರುತಿಸುವ ಪ್ರಕ್ರಿಯೆ ಆರಂಭವಾಗಿತ್ತು.

ಗಡಿ ಗುರುತಿಸುವ ಪ್ರಕ್ರಿಯೆ ಆರಂಭವಾದ ಬಳಿಕವೂ ಕರ್ನಾಟಕ ಮತ್ತು ಆಂಧ್ರಪ್ರದೇಶ ಅಧಿಕಾರಿಗಳ ತಂಡಗಳ ನಡುವೆ ಹಲವು ಬಾರಿ ಒಮ್ಮತ ಮೂಡಿರಲಿಲ್ಲ. 2021ರ ಫೆಬ್ರುವರಿಯಲ್ಲಿ ಸಮೀಕ್ಷೆ ಪೂರ್ಣಗೊಳಿಸಿ, ಅಂತಿಮಗೊಳಿಸಿದ್ದ ನಕ್ಷೆಗೆ ಸರ್ವೆ ಆಫ್ ಇಂಡಿಯಾ ಹಾಗೂ ಆಂಧ್ರಪ್ರದೇಶದ ಅಧಿಕಾರಿಗಳು ಸಹಿ ಮಾಡಿದ್ದರು. 'ಕರ್ನಾಟಕದ ಪರವಾಗಿ ನಕ್ಷೆಗೆ ಸಹಿ ಪಡೆಯಲು ಇನ್ನೂ ಸಾಧ್ಯವಾಗಿಲ್ಲ' ಎಂದು ಕೇಂದ್ರ ಸರ್ಕಾರದ ಪರ ವಕೀಲರು ಜುಲೈ 21 ರಂದು ನಡೆದ ವಿಚಾರಣೆಯಲ್ಲಿ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದರು.

ಸೆ.28 ರಂದು ರಾಜ್ಯದ ಪರವಾಗಿ ವಿಚಾರಣೆಗೆ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಖಿಲ್ ಗೋಯಲ್, ಕರ್ನಾಟಕ– ಆಂಧ್ರಪ್ರದೇಶ ಅಂತರರಾಜ್ಯ ಗಡಿ ಹಾದುಹೋಗಿರುವ ಸ್ಥಳದಲ್ಲಿ ಗುರುತುಗಳನ್ನು ಅಳವಡಿಸಲು ಆರು ವಾರಗಳ ಕಾಲಾವಕಾಶ ಕೋರಿದ್ದರು. ಅದನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿದೆ.

ಏಳು ಗಣಿಗಳ ಸರ್ವೆಗೆ ಆದೇಶ

ಕರ್ನಾಟಕ– ಆಂಧ್ರಪ್ರದೇಶ ಅಂತರ ರಾಜ್ಯ ಗಡಿಗೆ ಹೊಂದಿಕೊಂಡಂತೆ ರಾಜ್ಯದ ಭೂ ಭಾಗದಲ್ಲಿರುವ ಏಳು ಗಣಿಗಳನ್ನು ಸಮಗ್ರವಾಗಿ ಸರ್ವೆ ಮಾಡಿ, ವರದಿ ಸಲ್ಲಿಸುವಂತೆ ಈ ಹಿಂದೆ ಸುಪ್ರೀಂ ಕೋರ್ಟ್ ನೇಮಿಸಿದ್ದ 'ಜಂಟಿ ತಂಡ'ಕ್ಕೆ ತ್ರಿಸದಸ್ಯ ಪೀಠ ನಿರ್ದೇಶನ ನೀಡಿದೆ. ಸಿಇಸಿ ಶಿಫಾರಸಿನಂತೆ 'ಬಿ–1' ದರ್ಜೆಯಲ್ಲಿ ಗುರುತಿಸಿರುವ ಈ ಗಣಿಗಳ ಗುತ್ತಿಗೆ ಪ್ರದೇಶ, ಗಣಿಗಾರಿಕೆ, ಅತಿಕ್ರಮಣದ ಕುರಿತು ಅಂತರ ರಾಜ್ಯ ಗಡಿ ಗುರುತಿಸಿದ ದಿನದಿಂದ ಮೂರು ತಿಂಗಳೊಳಗೆ ಸರ್ವೆ ಪೂರ್ಣಗೊಳಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲು ಕರೆದೊಯ್ಯಲಾಯಿತು – ಎಎಫ್‌ಪಿ ಚಿತ್ರ

ಇಂಡೊನೇಷ್ಯಾ: ಫುಟ್‌ಬಾಲ್ ಪಂದ್ಯದ ವೇಳೆ ಹಿಂಸಾಚಾರ

ಕಾಲ್ತುಳಿತ: 125 ಮಂದಿ ಸಾವು

ಮಾಲಾಂಗ್, ಇಂಡೊನೇಷ್ಯಾ (ರಾಯಿಟರ್ಸ್/ಎಎಫ್‌ಪಿ): ಇಲ್ಲಿ ನಡೆದ ಸ್ಥಳೀಯ ಫುಟ್‌ಬಾಲ್ ಪಂದ್ಯದ ವೇಳೆ ಸಂಭವಿಸಿದ ಹಿಂಸಾಚಾರ ಮತ್ತು ಕಾಲ್ತುಳಿತದಲ್ಲಿ 125 ಮಂದಿ ಸಾವಿಗೀಡಾಗಿದ್ದು, 320ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಕ್ರೀಡಾಕ್ಷೇತ್ರದಲ್ಲಿ ಸಂಭವಿಸಿದ ಭೀಕರ ದುರಂತಗಳಲ್ಲಿ ಇದೂ ಒಂದು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸ್ಥಳೀಯ ಅರೆಮಾ ಎಫ್‌ಸಿ ತಂಡ ಸೋತಿತ್ತು. ಇದರಿಂದ ರೊಚ್ಚಿಗೆದ್ದ ತಂಡದ ಅಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗಿದ್ದಾರೆ. ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಷೆಲ್ ಸಿಡಿಸಿದಾಗ ಉಂಟಾದ ಕಾಲ್ತುಳಿತದಿಂದಾಗಿ ದುರಂತ ಸಂಭವಿಸಿದೆ' ಎಂದು ಪೂರ್ವ ಜಾವಾ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥ ನಿಕೊ ಅಫಿಂಟಾ ತಿಳಿಸಿದ್ದಾರೆ.

ಘಟನೆಯ ಕುರಿತು ತನಿಖೆ ನಡೆಸುವಂತೆ ಸ್ಥಳೀಯ ಫುಟ್‌ಬಾಲ್ ಸಂಸ್ಥೆಗೆ ಫಿಫಾ ಸೂಚಿಸಿದೆ.

ಇನ್ನಷ್ಟು ಸುದ್ದಿಗಳು 10

ದೂರವಾಣಿ ಕರೆ ಸ್ವೀಕರಿಸುವಾಗ ಬಳಸಲು ಸೂಚನೆ: ಟೀಕೆ

'ಹಲೋ' ಬದಲು 'ವಂದೇ ಮಾತರಂ'

ಪ್ರಜಾವಾಣಿ ವಾರ್ತೆ

ಮುಂಬೈ: ಸರ್ಕಾರಿ ನೌಕರರು ಇನ್ನು ಮುಂದೆ ದೂರವಾಣಿ ಕರೆಗಳನ್ನು ಸ್ವೀಕರಿಸುವಾಗ 'ಹಲೋ' ಬದಲು 'ವಂದೇ ಮಾತರಂ' ಎಂದು ಹೇಳಬೇಕೆಂಬ ನಿರ್ಣಯವನ್ನು ಏಕನಾಥ ಶಿಂದೆ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಕೈಗೊಂಡಿದ್ದು, ಈ ಕುರಿತು ಶನಿವಾರ ಸುತ್ತೋಲೆಯನ್ನೂ ಹೊರಡಿಸಿದೆ. ಇದಕ್ಕೆ ವಿರೋಧ ಪಕ್ಷಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ.

'ರಾಜ್ಯದ ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಅನುದಾನಿತ ಶಾಲೆ, ಕಾಲೇಜು ಮತ್ತು ಇತರ ಸಂಸ್ಥೆಗಳ ನೌಕರರು, ಕಚೇರಿ ಅಥವಾ ವೈಯಕ್ತಿಕ ಮೊಬೈಲ್ ಸಂಖ್ಯೆಗಳಿಗೆ ಬರುವ ಕರೆಗಳನ್ನು ಸ್ವೀಕರಿಸುವಾಗ 'ಹಲೋ' ಬದಲು 'ವಂದೇ ಮಾತರಂ' ಎಂದೇ ಹೇಳಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

5ನೇ ಪುಟ ನೋಡಿ

15 ಲಘು ಯುದ್ಧ ಹೆಲಿಕಾಪ್ಟರ್ ಇಂದು ಸೇನೆಗೆ ಸೇರ್ಪಡೆ

ನವದೆಹಲಿ(ಪಿಟಿಐ): ಆಗಸದಿಂದಲೇ ಕ್ಷಿಪಣಿಗಳು ಮತ್ತು ಇನ್ನಿತರ ಅಸ್ತ್ರಗಳನ್ನು ಹಾರಿಸಿ ವೈಮಾನಿಕ ಗುರಿಗಳನ್ನು ಧ್ವಂಸಗೊಳಿಸುವ ಜತೆಗೆ ಬಹುವಿಧದ ಪಾತ್ರ ವಹಿಸುವ ಸಾಮರ್ಥ್ಯದ ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು (ಎಲ್‌ಸಿಎಚ್) ಭಾರತೀಯ ವಾಯುಪಡೆಯು ಸೋಮವಾರ ಅಧಿಕೃತವಾಗಿ ಸೇರ್ಪಡೆ ಮಾಡಿಕೊಳ್ಳಲಿದೆ. 5

ಮುಲಾಯಂ ಐಸಿಯುಗೆ ದಾಖಲು

ಗುರುಗ್ರಾಮ: ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಯಾದವ್ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು ಅವರನ್ನು ಭಾನುವಾರ ಇಲ್ಲಿನ ಮೇದಾಂತ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ. 9

ಸಹಮತದ ಅಭ್ಯರ್ಥಿ: ಖರ್ಗೆ ಒಲವು

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರು ಸಹಮತದ ಅಭ್ಯರ್ಥಿ ಆಯ್ಕೆಯ ಬಗ್ಗೆ ಒಲವು ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬ ಅಭ್ಯರ್ಥಿ ಶಶಿ ತರೂರ್ ಇತ್ತೀಚೆಗೆ ಕರೆ ಮಾಡಿದ ಸಂದರ್ಭದಲ್ಲಿ ಖರ್ಗೆ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ. ಆದರೆ ಪ್ರಜಾಸತ್ತಾತ್ಮಕ ಸ್ಪರ್ಧೆ ನಡೆಯಬೇಕು ಎಂದು ತರೂರ್ ಹೇಳಿದ್ದಾರೆ. ತರೂರ್ ಅವರನ್ನು ತಮ್ಮ ಎಂದು ಖರ್ಗೆ ಬಣ್ಣಿಸಿದ್ದಾರೆ. 9



ಹೂವಿನ ದರ ಏರಿಕೆ: ಕನಕಾಂಬರ ಕೆ.ಜಿಗೆ ₹2000 • ಬೂದುಗುಂಬಳ ಮತ್ತು ಬಾಳೆ ಕಂದುಗಳ ಖರೀದಿ ಜೋರು

ದಸರಾ ಸಂಭ್ರಮ: ಮಾರುಕಟ್ಟೆಗೆ ರಂಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬವನ್ನು ಸಂಭ್ರಮ-ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧವಾಗಿದ್ದು, ಭಾನುವಾರ ಹೂವು ಮತ್ತು ಹಣ್ಣಿನ ಖರೀದಿ ಜೋರಾಗಿತ್ತು.

ನವರಾತ್ರಿ ಆಚರಣೆಯ ವೇಳೆ ಪ್ರತಿ ವರ್ಷ ಹೂವುಗಳ ದರ ಏರಿಕೆಯಾಗುತ್ತದೆ. ಎರಡು ವಾರಗಳವರೆಗೆ ಧಾರ್ಮಿಕ ಆಚರಣೆಗಳು ನಡೆಯುವುದರಿಂದ ಈ ಸಮಯದಲ್ಲಿ ಹೂವಿಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

'ದಸರಾ ಹಬ್ಬದಲ್ಲಿ ಸೇವಂತಿಗೆ, ಕನಕಾಂಬರ, ಗುಲಾಬಿ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಆಯುಧ ಪೂಜೆಯಂದು ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಅಲಂಕರಿಸಿ ಪೂಜೆ ಮಾಡಲಾಗುತ್ತದೆ. ವಾಹನ ಗಳ ಅಲಂಕಾರಕ್ಕೆ ಹೂವು ಹೆಚ್ಚಾಗಿ ಮಾರಾಟವಾಗುತ್ತದೆ. ಗುಣಮಟ್ಟದ ಹೂವಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚು. ಆಗ ಬೆಲೆಯೂ ಏರಿಕೆಯಾಗುವುದು ಸಾಮಾನ್ಯ' ಎಂದು ಕೆ.ಆರ್.ಮಾರು ಕಟ್ಟೆಯ ಹೂವಿನ ವರ್ತಕ ಗಂಗಾ ಮಾಹಿತಿ ನೀಡಿದರು.

ಮಾರುಕಟ್ಟೆಯ ಎಲ್ಲೆಡೆಯೂ ಜೋರಾಗಿತ್ತು. ಆಯುಧ ಪೂಜೆಯ ದಿನ ಮನೆ, ವಾಹನ, ಅಂಗಡಿ, ಕಾರ್ಖಾನೆ ಬಳಿ ಒಡೆಯುವ ಬೂದು ಗುಂಬಳ ಕೆ.ಜಿಗೆ ₹50ರಂತೆ ಮತ್ತು ಗಾತ್ರದ ಆಧಾರದ ಮೇಲೆ ಒಂದಕ್ಕೆ ₹150-200ರಂತೆ ಮಾರಾಟವಾಗಿದೆ.

ನಗರದ ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ ಮಾರು ಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ಅಲಂಕಾರಿಕ ವಸ್ತುಗಳು, ದಿನಸಿ, ಬೂದು ಗುಂಬಳ, ಬಾಳೆಕಂದು ಖರೀದಿ ಜೋರಾಗಿತ್ತು.

'ಬೀನ್ಸ್, ಕ್ಯಾರೆಟ್, ಹಿರೇಕಾಯಿ, ಹಾಗಲಕಾಯಿ, ಕ್ಯಾಪ್ಸಿಕಮ್ ಮತ್ತು ಬಿಟ್‌ರೂಟ್ ದರಗಳು ಪ್ರತಿ ಕೆ.ಜಿ.ಗೆ ₹60–70ರ ವರೆಗೆ ಮಾರಾಟ ಮಾಡಲಾಗುತ್ತಿದೆ. ಮೆಣಸಿನಕಾಯಿ ಪ್ರತಿ ಕೆ.ಜಿಗೆ ₹80 ಮಾರಾಟವಾಗುತ್ತಿದೆ' ಎಂದು ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ಕುಮಾರ್, ತಬ್ರೇಜ್ ಮತ್ತು ವೆಂಕಟೇಶ್ ಅವರು ಮಾಹಿತಿ ನೀಡಿದರು.

ಹೂವಿನ ದರಪಟ್ಟಿ (ಪ್ರತಿ ಕೆ.ಜಿಗೆ ₹ಗಳಲ್ಲಿ)	
ಮಲ್ಲಿಗೆ	800
ಕನಕಾಂಬರ	2000
ಕಾಕಡ	500
ಗುಲಾಬಿ	250
ಸುಗಂಧರಾಜ	300
ಸೇವಂತಿಗೆ (ಪಾಲಿಹೌಸ್)	300
ಚೆಂಡುಹೂವು	100

ದಸರಾ ವಿಶೇಷ	
ಬಾಳೆ ಕಂದು	50(ಜೋಡಿಗೆ)
ದೊಡ್ಡ ಗಾತ್ರದ ಬಾಳೆ ಕಂದು	120(ಜೋಡಿಗೆ)
ಬೂದುಗುಂಬಳ	50(ಕೆ.ಜಿಗೆ)
ನಿಂಬೆ ಹಣ್ಣು	20(ಐದಕ್ಕೆ)
ಮಾವಿನ ಎಲೆಯ ತೋರಣ ಜೋಡಿಗೆ	50

ಹಣ್ಣು	ಚಿಲ್ಲರೆ ದರ
ಸೇಬು	80-100
ದಾಳಿಂಬೆ	70-80
ಮೂಸಂಬಿ	50-60
ಏಲಕ್ಕಿ ಬಾಳೆ	50-60

ತರಕಾರಿ	ಕಳೆದ ವಾರದ ದರ	ಈ ವಾರದ ದರ (ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ)
ಬಟಾಣಿ	80	108
ಬೆಳ್ಳುಳ್ಳಿ	30	40
ಟೊಮೆಟೊ	20	30
ಕ್ಯಾರೆಟ್	80	60
ಶುಂಠಿ	40	
ಈರುಳ್ಳಿ	35	30
ಬೀನ್ಸ್	80	60
ಬದನೆ	40	30
ಮೆಣಸಿನಕಾಯಿ	50	80
ಬೆಂಡೆಕಾಯಿ	30	35
ಆಲೂಗಡ್ಡೆ	30	30
ಹೀರೆಕಾಯಿ	50	60
ಚವಳಿಕಾಯಿ	40	30
ಕ್ಯಾಪ್ಸಿಕಮ್	40	50
ಹಾಗಲಕಾಯಿ	50	60

ಸೊಪ್ಪು	ಚಿಲ್ಲರೆ(ಕಟ್ಟಿಗೆ)ದರ
ಮೆಂತ್ಯೆ	30
ಕೊತ್ತಂಬರಿ	20
ಸಬ್ಬಕ್ಕಿ	20
ಪಾಲಕ್	20

ಕೆ.ಆರ್. ಮಾರುಕಟ್ಟೆಯಲ್ಲಿ ಭಾನುವಾರ ಹಣ್ಣು–ಹೂವು, ಬಾಳೆ ಕಂಬ ಮತ್ತು ಇತರ ವಸ್ತುಗಳನ್ನು ಖರೀದಿಸಲು ಸೇರಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

ತಾತ್ಕಾಲಿಕ ಮಾರುಕಟ್ಟೆಗಳು ಸೃಷ್ಟಿ

ಮಲ್ಲೇಶ್ವರ, ಬಸವನಗುಡಿ, ಹೆಬ್ಬಾಳ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಗಾಯತ್ರಿನಗರ, ಗಾಂಧಿ ಬಜಾರ್, ವೈಟ್‌ಫಿಲ್ಡ್, ಇಂದಿರಾನಗರದಂತಹ ಪ್ರಮುಖ ರಸ್ತೆಯ ಪಾದಚಾರಿ ಮಾರ್ಗ, ಮೆಟ್ರೊ ಸೇತುವೆಯ ಕೆಳಭಾಗ, ಮೇಲ್ಸೇತುವೆಗಳ ಕೆಳಗಡೆ ತಾತ್ಕಾಲಿಕ ಮಾರುಕಟ್ಟೆಗಳು ಸೃಷ್ಟಿಯಾಗಿವೆ. ಗ್ರಾಮೀಣ ಭಾಗದ ರೈತರು, ವ್ಯಾಪಾರಿಗಳು ಬಂದು ಬೂದುಗುಂಬಳ, ಮಾವಿನ ಎಲೆ, ತರಕಾರಿ, ಹೂವು ಮತ್ತು ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿತು.

'ಒತ್ತುವರಿ ನಿರ್ಲಕ್ಷ್ಯ: ಕ್ರಿಮಿನಲ್ ಮೊಕದ್ದಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೆರೆ, ರಾಜಕಾಲುವೆ ಮತ್ತು ಇತರೆ ಜಲಮೂಲಗಳ ರಕ್ಷಣೆ ಕರ್ತವ್ಯದಲ್ಲಿ ಉದಾಸೀನ ತೋರುವ ಸರ್ಕಾರಿ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ ಎಂದು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಎಚ್ಚರಿಸಿದ್ದಾರೆ.

ಕೆರೆ, ಕುಂಟೆ, ರಾಜಕಾಲುವೆ, ಹಳ್ಳ, ಕಟ್ಟೆ ಮುಂತಾದ ನೀರಿನ ಮೂಲಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಕಂದಾಯ, ಸರ್ವೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಅಧಿಕಾರಿಗಳ ಜಂಟಿ ತಂಡ ರಚಿಸಲಾಗಿದೆ. ಈ ತಂಡದಲ್ಲಿರುವ ಗ್ರಾಮ ಪಂಚಾಯಿತಿ, ಕಂದಾಯ ಇಲಾಖೆ ಹಾಗೂ ಭೂ ಮಾಪಕರ ಹೆಸರನ್ನು ನಮೂದಿಸಿ, ಅ.3ರಿಂದ ಕಾರ್ಯಾಚರಣೆ ನಡೆಸಬೇಕು ಎಂದು ಆದೇಶ ಹೊರಡಿಸಿದ್ದಾರೆ.

ನಗರದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ, ರಾಜಕಾಲುವೆ, ಕೆರೆ, ಕುಂಟೆ, ಹಳ್ಳ ಒತ್ತುವರಿಯಾಗಿರುವುದರಿಂದ ಜಲಮೂಲಗಳಲ್ಲಿ ಹರಿಯಬೇಕಿದ್ದ ನೀರು ರಸ್ತೆ ಮತ್ತು ಬಡಾವಣೆಗಳಿಗೆ ನುಗ್ಗಿ ರಸ್ತೆ, ಆಸ್ತಿಗೆ ಹಾನಿ ಉಂಟಾಗಿದೆ. ಹೀಗಾಗಿ ಒತ್ತುವರಿ ತೆರವು ಮಾಡುವುದು ಅತ್ಯಗತ್ಯ. ಈ ಬಗ್ಗೆ ಹೈಕೋರ್ಟ್ ಕೂಡ ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಅ.1ರಂದು ನಡೆದ ಬಿಬಿಎಂಪಿ- ಕೆರೆ ವಿಭಾಗದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು, ರಾಜಸ್ವ ನಿರೀಕ್ಷಕರು ಹಾಗೂ ಮೋಜಿಣಿದಾರರ ಸಭೆಯಲ್ಲಿ ಒತ್ತುವರಿ ತೆರವಿಗೆ ವಿಶೇಷ ಕಾರ್ಯಾಚರಣೆ ನಡೆಸಲು ಚರ್ಚಿಸಿ ತೀರ್ಮಾನಿಸಲಾಗಿದೆ.

ದಕ್ಷಿಣ ತಾಲ್ಲೂಕಿನ ಅಗರ, ಚಿಕ್ಕನಹಳ್ಳಿ, ಚೋಳನಾಯಕನಹಳ್ಳಿ, ಚುಂಚನಕುಪ್ಪೆ, ದೊಡ್ಡತೋಗೂರು, ಎಚ್. ಗೊಲ್ಲಹಳ್ಳಿ, ಕೆ. ಗೊಲ್ಲಹಳ್ಳಿ, ಕಗ್ಗಲೀಪುರ, ಕೋನಪ್ಪನ ಅಗ್ರಹಾರ, ಕುಂಬಳಗೋಡು, ರಾಮೋಹಳ್ಳಿ, ಸೋಮನಹಳ್ಳಿ, ಸೂಲಿಕೆರೆ, ತರಳು, ತಾವರೆಕೆರೆ, ಅಜ್ಜನಹಳ್ಳಿ, ಚನ್ನೇನಹಳ್ಳಿ, ನೆಲಗುಳಿ ಗ್ರಾಮ ಪಂಚಾಯಿತಿಗೆ ಪ್ರತ್ಯೇಕವಾದ ತಂಡ ರಚಿಸಿ, ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ.

ಷರತ್ತುಗಳು: ಜಲಮೂಲಗಳ ಒತ್ತುವರಿ ತೆರವಿಗೆ ಅಗತ್ಯವಾದ ಜೆಸಿಬಿ ಮತ್ತು ಇಟಿಎಸ್ ಯಂತ್ರೋಪಕರಣಗಳ ವ್ಯವಸ್ಥೆಯನ್ನು ಪಿಡಿಒ ಮಾಡಬೇಕು. ಅದಕ್ಕೆ ತಗುಲುವ ವೆಚ್ಚವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ನಿಧಿಯಿಂದ ಭರಿಸಬೇಕು. ಭೂ ಮಾಪಕರು ಕೆರೆ, ಕುಂಟೆ, ರಾಜಕಾಲುವೆ, ಹಳ್ಳ, ಕಟ್ಟೆ ಮುಂತಾದ ನೀರಿನ ಮೂಲಗಳ ಪ್ರದೇಶ ಹಾಗೂ ಸರ್ಕಾರಿ ಜಾಗದಲ್ಲಿ ಒತ್ತುವರಿ ಗುರುತಿಸಬೇಕು. ಒತ್ತುವರಿ ತೆರವುಗೊಂಡ ನಂತರ ಗಡಿ ನಿರ್ಧರಣೆ ಮಾಡಬೇಕು ಎಂದು ಆದೇಶದಲ್ಲಿ ಷರತ್ತುಗಳ ವರ್ಗದಲ್ಲಿ ಸೂಚಿಸಲಾಗಿದೆ.

ಒತ್ತುವರಿ ತೆರವು...

'ದಕ್ಷಿಣ ತಾಲ್ಲೂಕಿನಲ್ಲಿ ಬರುವ ಬಿಬಿಎಂಪಿ ವ್ಯಾಪ್ತಿಯ ಕೆರೆ, ಕುಂಟೆ, ಹಳ್ಳ, ರಾಜಕಾಲುವೆ ಒತ್ತುವರಿ ತೆರವಿಗೆ ಅಧಿಕಾರಿಗಳ ತಂಡವನ್ನು ವಾರ್ಡ್‌ವಾರು ರಚಿಸಲು ಆಲೋಚಿಸಲಾಗಿದೆ. ಈ ಬಗ್ಗೆ ಜಂಟಿ ತಂಡವನ್ನು ಅ.3ರಂದು ರಚಿಸಲಾಗುತ್ತದೆ. ಈ ಮೂಲಕ ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ದಿನೇಶ್ ತಿಳಿಸಿದರು.

ಸುದ್ದಿ 2 ನಿಮಿಷ

ಬಿಬಿಎಂಪಿಗೆ ₹350 ಕೋಟಿ ಪರಿಹಾರ ನಿಧಿ ಬಿಡುಗಡೆ

ಬೆಂಗಳೂರು: ಅತಿಹೆಚ್ಚು ಮಳೆಯಿಂದ ಉಂಟಾದ ಹಾನಿಗೆ ಪರಿಹಾರ ನೀಡಬೇಕೆಂಬ ಬಿಬಿಎಂಪಿ ಮನವಿಗೆ ಸ್ಪಂದಿಸಿರುವ ಸರ್ಕಾರ ₹350 ಕೋಟಿ ನೀಡಲು ಸಮ್ಮತಿಸಿದೆ.

ಬಿಬಿಎಂಪಿ ಮನವಿ ಸಲ್ಲಿಸಿದ 10 ದಿನದ ನಂತರ ನಗರಾಭಿವೃದ್ಧಿ ಇಲಾಖೆ ಸೆ.28ರಂದು ಪರಿಹಾರ ಮೊತ್ತಕ್ಕೆ ಅನುಮೋದನೆ ನೀಡಿದೆ. ಕೆರೆಗಳ ನಡುವಿನ ಸಂಪರ್ಕ ಜಾಲವನ್ನು (ರಾಜಕಾಲುವೆ) ದುರುಸ್ತಿಪಡಿಸಲು ₹317 ಕೋಟಿ ವೆಚ್ಚ ಮಾಡಬೇಕು ಎಂದು ಸೂಚಿಸಲಾಗಿದೆ.

ಮಳೆಯಿಂದ ತೀವ್ರಹಾನಿಯಾಗಿರುವ ಮಹದೇವಪುರ ವಿಧಾನಸಭೆ ಕ್ಷೇತ್ರಕ್ಕೆ ₹160 ಕೋಟಿ ಮಂಜೂರಾಗಿದೆ. ಕೆ.ಆರ್. ಪುರ– ₹40 ಕೋಟಿ, ಬೊಮ್ಮನಹಳ್ಳಿ– ₹65 ಕೋಟಿ, ಬೆಂಗಳೂರು ದಕ್ಷಿಣ– ₹27.25 ಕೋಟಿ ಹಾಗೂ ಯಲಹಂಕ ಮತ್ತು ಬ್ಯಾಟರಾಯನಪುರ ತಲಾ ₹10 ಕೋಟಿ ನೀಡಲಾಗಿದೆ. ಉಳಿದ ₹33 ಕೋಟಿಯಲ್ಲಿ ನಗರದ 148 ಕೆರೆಗಳಿಗೆ ತೂಬು ಗೇಟ್‌ಗಳನ್ನು ಅಳವಡಿಸಲು ವಿನಿಯೋಗಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ

ಕೆ.ಆರ್.ಪುರ: ಶಿಕ್ಷಕರು ಕನ್ನಡ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭರೆಡ್ಡಿ ಹೇಳಿದರು.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ಭಾಷಾ ಶಿಕ್ಷಕರಿಗೆ ಹಾಗೂ ಕನ್ನಡದಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡದ ಸಾಂಸ್ಕೃತಿಕ ಹಿನ್ನೆಲೆ, ಭೌಗೋಳಿಕ ಚಾರಿತ್ರಿಕ ಮಹತ್ವ, ದಾರ್ಶನಿಕರ ಇತಿಹಾಸ ಮುಂತಾದ ಅನೇಕ ಅಂಶಗಳನ್ನು ಶಾಲಾ ಮಕ್ಕಳಿಗೆ ಬೋಧನೆಯ ಸಮಯದಲ್ಲಿ ಹೇಳಿ ಕನ್ನಡ ಉಳಿಸುವ ಕಾರ್ಯಕ್ಕೆ ಮುಂದಾಗಿರುವುದರಿಂದ ಅವರಿಗೆ ನಿಜವಾಗಿ ಅಭಿನಂದನೆ ಸಲ್ಲಬೇಕಿದೆ ಎಂದರು.

ಕಸಾಪ ಅಧ್ಯಕ್ಷ ಯೋಗ ವರ್ಧಮಾನ ಕಳಸೂರು ಮಾತನಾಡಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ ವಿಜ್ಞಾನ, ವೈದ್ಯಕೀಯ, ಎಂಜಿನಿಯರಿಂಗ್ ಪದವಿಗಳಲ್ಲೂ ಕನ್ನಡ ಐಚ್ಛಿಕ ಭಾಷೆಯಾಗಿ ತೆಗೆದುಕೊಳ್ಳಲು ಅವಕಾಶವಿದೆ ಎಂದರು. ಕನ್ನಡದಲ್ಲಿ ಹೆಚ್ಚು ಅಂಕ ಪಡೆದ 288 ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ 48 ಶಾಲೆಯ ಕನ್ನಡ ಭಾಷಾ ಶಿಕ್ಷಕರು ಮತ್ತು 13 ಸ್ಕೌಟ್ ಅಂಡ್ ಗೈಡ್ಸ್ ಶಿಕ್ಷಕರನ್ನು ಅಭಿನಂದಿಸಲಾಯಿತು.

‘ನಾಡಗೀತೆ: ಅನಗತ್ಯ ವಿವಾದ ಸೃಷ್ಟಿ’

ಬೆಂಗಳೂರು: ‘ರಾಷ್ಟ್ರಕವಿ ಕುವೆಂಪು ವಿರಚಿತ ‘ಜಯ ಭಾರತ ಜನನಿಯ ತನುಜಾತೆ’ ನಾಡಗೀತೆಯ ಧಾಟಿ, ಸಮಯಕ್ಕೆ ಸಂಬಂಧಿಸಿದ ವಿವಾದ 18 ವರ್ಷಗಳ ಬಳಿಕ ನಿವಾರಣೆಯಾಗಿತ್ತು. ಈಗ ಮತ್ತೆ ವಿವಾದ ಸೃಷ್ಟಿಸಿ, ನ್ಯಾಯಾಲಯದ ಮೆಟ್ಟಿಲು ಏರಿರುವುದು ದುರದೃಷ್ಟಕರ’ ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

‘ರಾಜ್ಯದ ಅಸ್ಮಿತೆಯಾಗಿರುವ ನಾಡಗೀತೆಯನ್ನು ವಿವಾದಗೊಳಿಸುವುದು ಸರಿಯಲ್ಲ. ‘ಮೈಸೂರು ಅನಂತಸ್ವಾಮಿ ಅವರು ಒಂದು ಪಲ್ಲವಿ ಮತ್ತು ಎರಡು ಚರಣಗಳಿಗೆ ಮಾತ್ರ ರಾಗ ಸಂಯೋಜನೆ ಮಾಡಿದ್ದಾರೆ. ಪೂರ್ಣ ನಾಡಗೀತೆಗೆ ಸ್ವರ ಸಂಯೋಜನೆ ಮಾಡಿರುವ ಸಿ. ಅಶ್ವತ್ಥ್ ಅವರ ಧಾಟಿಯಲ್ಲಿಯೇ ಹಾಡಬೇಕು’ ಎನ್ನುವುದು ಸರಿಯಲ್ಲ. ಮೈಸೂರು ಅನಂತಸ್ವಾಮಿ ಮತ್ತು ಅಶ್ವತ್ಥ್ ಇಬ್ಬರೂ ಕನ್ನಡ ಸುಗಮ ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಗಾಯಕರು. ನಾಡಗೀತೆಯ ಧಾಟಿಗೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯನ್ನು ವಾಪಸ್ ಪಡೆಯುವುದು ಸೂಕ್ತ’ ಎಂದು ಹೇಳಿದ್ದಾರೆ.

‘ಇಡೀ ದೇಶದಲ್ಲಿ ಯಾವ ರಾಜ್ಯಕ್ಕೂ ಇಲ್ಲದ ನಾಡಗೀತೆಯ ಗೌರವ ಕರ್ನಾಟಕಕ್ಕೆ ಇದೆ. ಧಾಟಿ ಮತ್ತು ಸಮಯ ನಿಗದಿಗೆ 2021ರ ಸೆಪ್ಟೆಂಬರ್‌ನಲ್ಲಿ ಎಚ್.ಆರ್. ಲೀಲಾವತಿ ಅಧ್ಯಕ್ಷತೆಯಲ್ಲಿ 18 ಮಂದಿಯ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಮೈಸೂರು ಅನಂತಸ್ವಾಮಿ ರಾಗಸಂಯೋಜನೆಯಲ್ಲಿ 2.30 ನಿಮಿಷದಲ್ಲಿ ನಾಡಗೀತೆ ಹಾಡಬೇಕು ಎಂದು ಶಿಫಾರಸು ಮಾಡಿತ್ತು. ಅದರಂತೆ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಮತ್ತೆ ವಿವಾದ ಹುಟ್ಟು ಹಾಕುವುದು ಸರಿಯಲ್ಲ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಚರ್ಮ ಗಂಟು ರೋಗ: ಪರಿಹಾರಕ್ಕೆ ₹ 2 ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರ್ಮ ಗಂಟು ರೋಗದಿಂದ ಮೃತಪಡುವ ಜಾನುವಾರುಗಳ ಮಾಲೀಕರಿಗೆ ಪರಿಹಾರ ವಿತರಿಸಲು ₹ 2 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

‘ಆಗಸ್ಟ್ 1ರಿಂದ ಈಚೆಗೆ ಚರ್ಮ ಗಂಟು ರೋಗದಿಂದ ಮೃತಪಟ್ಟಿರುವ ಪ್ರತಿ ರಾಸುಗಳಿಗೆ ತಲಾ ₹ 20,000, ಎತ್ತುಗಳಿಗೆ ತಲಾ ₹ 30,000 ಮತ್ತು ಕರುಗಳಿಗೆ ತಲಾ ₹ 5,000 ಪರಿಹಾರ ನೀಡಲಾಗುವುದು. ಇದಕ್ಕಾಗಿ ಅನುದಾನ ಬಿಡುಗಡೆ ಮಾಡಿ ಶನಿವಾರ ಆದೇಶ ಹೊರಡಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ಈವರೆಗೆ 23,784 ರಾಸುಗಳು ಚರ್ಮ ಗಂಟು ರೋಗದಿಂದ ಬಳಲುತ್ತಿರುವುದು ವರದಿಯಾಗಿದೆ. 11,494 ರಾಸುಗಳು ಚೇತರಿಸಿಕೊಂಡಿವೆ. 680 ಜಾನುವಾರುಗಳು ಮೃತಪಟ್ಟಿವೆ. ಉಳಿದ ಜಾನುವಾರುಗಳು ಚೇತರಿಸಿಕೊಳ್ಳುತ್ತಿವೆ. 2.65 ಲಕ್ಷ ಜಾನುವಾರುಗಳಿಗೆ ಈವರೆಗೆ ಲಸಿಕೆ ನೀಡಲಾಗಿದೆ. ಈಗ 3.42 ಲಕ್ಷ ಡೋಸ್ ಲಸಿಕೆ ಲಭ್ಯವಿದ್ದು, ಇದೇ ವಾರ 35,000 ಡೋಸ್ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.

Karnataka Golf Association
No.1, Golf Avenue, Kodihalli, Bengaluru - 560 008.

NOTICE

Notice is hereby given under Rule 19.7 of the Karnataka Golf Association read in conjunction with section 11 (3) of the Karnataka Societies Registration Act 1960 that a Special General Meeting of the Karnataka Golf Association will be held on **Saturday** the **29th October 2022** at **5:00 PM** at the KGA Club House to consider and pass certain resolutions circulated to Members individually.

Date: 03.10.2022
Place: Bengaluru

Sd/-
Adith Kumar Bhandari
Hon. Secretary

72198 21111 | BAJAJ FINANCE LTD - AF | BAJAJ SECURE • AMC • ROAD SIDE ASSISTANCE

ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಆಯ್ದ ವಲಯಗಳಲ್ಲಿ ಆಯ್ದ ಮಾಡೆಲ್‌ಗಳ ಮೇಲೆ ಕೊಡುಗೆ ಲಭ್ಯವಿದೆ. #CT 125X ಡ್ರಮ್ ಶ್ರೇಣಿಯ ಮೇಲೆ ಕರ್ನಾಟಕದಲ್ಲಿ ಎಕ್ಸ್‌ಶೋರೂಮ್‌ನ ಬೆಲೆಯಾಗಿದೆ. ##ಡೌನ್ ಪೇಮೆಂಟ್ CT 125X ಡ್ರಮ್ ಶ್ರೇಣಿಯದ್ದಾಗಿದೆ. ಡಿಸಿಸಿ ಶುಲ್ಕಗಳು, ಪ್ರೋಸೆಸಿಂಗ್ ಫೀಗಳು ಮತ್ತು ಇತರ ಶುಲ್ಕಗಳನ್ನು ಹೊರತುಪಡಿಸಿ ಡೌನ್ ಪೇಮೆಂಟ್ ಇದೆ. ಹಣಕಾಸು ಸೌಲಭ್ಯವು ಫೈನಾನ್ಶಿಯರ್ ವಿವೇಚನೆಗೆ ಒಳಪಟ್ಟಿರುತ್ತದೆ. ಮೊದಲೇ ಸೂಚನೆ ನೀಡದೇ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಹಿಂಪಡೆಯಲು ಬಜಾಜ್ ಆಟೋ ಹಕ್ಕು ಕಾಯ್ದಿರಿಸಿದೆ. RSA ಮತ್ತು MMCಗಾಗಿ ಬಜಾಜ್ ಆಟೋ ಡೀಲರ್ ಬಳಿ ಪರಿಶೀಲಿಸಿ. RSA ಅನ್ನು ತೃತೀಯ ಪಕ್ಷಗಳು ಒದಗಿಸುತ್ತವೆ ಮತ್ತು ಇದು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. *ಡಿಸ್ಕ್ ಬ್ರೇಕ್ ಐಚ್ಛಿಕ ಸೌಲಭ್ಯವಾಗಿದ್ದು, CT 125X ಡಿಸ್ಕ್ ವೇರಿಯಂಟ್‌ನೊಂದಿಗೆ ಮಾತ್ರ ಇರುತ್ತದೆ. ಡ್ರಮ್ ಬ್ರೇಕ್ ವೇರಿಯಂಟ್ ಕೂಡಾ ಲಭ್ಯವಿದೆ.

Authorised Dealers For Bajaj Auto Ltd.: Bangalore Bommanahalli Amba Bajaj 9535411100 • **HSR Layout** Amba Bajaj 8884333732 • **Sarjapur** Amba Bajaj 7406688884 • **BTM Layout** Amba Bajaj 9513926221 • **Madiwala** Amba Bajaj 9945000048 • **Electronic City** Amba Bajaj 8971711118 • **Nayandahalli Mysore Rd** RV Bajaj 6360308373 • **Chandra Layout Moodalapalya** RV Bajaj 9740444545 • **Kengeri** RV Bajaj 7353763305 • **Giri Nagar** RV Bajaj 7353763302 • **Vijaynagar** RV Bajaj 7353763307 • **Banashankari** Popular Bajaj 9945111874 • **Rajajinagar** Popular Bajaj 6366554001 • **Koramangala** Popular Bajaj 9845589079 • **Konankunte** Popular Bajaj 7760967834 • **Ramnagara** Popular Bajaj 7760967832 • **Kanakpura** Popular Bajaj 9972533890 • **Channapatna** Popular Bajaj 9901947666 • **Uttarahalli** Popular Bajaj 9972095890 • **Gottigere** Popular Bajaj 7760996891 • **Mekhri Circle** Kalyani Bajaj 8884413595 • **Yelahanka** Kalyani Bajaj 9449849618 • **Mathikere** Kalyani Bajaj 8884430126 • **Chickbellapur** Kalyani Bajaj 8884413594 • **Devenhalli** Kalyani Bajaj 9449849624 • **Marathahalli** Khivraj Bajaj 9036091986 • **Kasturba Rd** Khivraj Bajaj 9035060140 • **Indiranagar** Khivraj Bajaj 9035060139 • **Hennur** Khivraj Bajaj 9742155225 • **Banaswadi** Khivraj Bajaj 9035060147 • **Yeshwanthpur** Khivraj Bajaj 9449404098 • **Hesargatta** Khivraj Bajaj 9035060148 • **Whitefield** Khivraj Bajaj 8618840097 • **Hoskote** Khivraj Bajaj 9035005075 • **Magadi Rd** Anant Bajaj 9980009166 • **Laggere** Anant Bajaj 7022984402 • **Hubli** Channamma Bajaj 9620614106 • **Arvind Nagar Branch** 8884771881 • **Gadag** Channamma Bajaj 9620747153 • **Sirsi** Channamma Bajaj 8884645609 • **Haveri** Channamma Bajaj 8151884422 • **Belgaum** Jagajampi Bajaj 988690116 • **Jagashree Bajaj** 7349773962 • **Chikodi** Jagajampi Bajaj 9449736406 • **Gokak** Jagajampi Bajaj 7022425616 • **Bellary** AADI Bajaj 9606050246 • **Raichur** Shree Balaji Automobiles 9964626515 • **Koppal** I A Bajaj 8123712938 • **Hospet** AADI Bajaj 9731361414 • **Hagaribommanahalli** AADI Bajaj 9900363010 • **Siruguppa** AADI Bajaj 9110217558 • **Bijapur** Bijjargi Bajaj Blde Road 6362877793 • **Bus Stand Road** 8884000970 • **Bagalkot** Bijjargi Bikes 9148448324 • **Sindagi** Bijjargi Bajaj 8861946802 • **Bidar** Sindol Bajaj 9513226555 • **Chitradurga** BTV Bajaj 8310553554 • **Hiriyur** BTV Bajaj 8310553554 • **Challakere** BTV Bajaj 8310553554 • **Davangere** Jain Bajaj 9343636805 • **Harihara** Jain Bajaj 9632300444 • **Gulbarga** VKG Bajaj 9632018700 • **Yadgir** VKG Bajaj 8722182492 • **Humnabad** VKG Bajaj 8050889160 • **Shimoga** Supreme Bajaj 8105000999 • **Sagar** Supreme Bajaj 9008339799 • **Bhadravathi** Supreme Bajaj 9008352799 • **Chikkamagalur** Supreme Bajaj 9008379799 • **Tarikere** Supreme Bajaj 9008569799 • **Hosanagar** Supreme Bajaj 9731767799 • **Anandpura** Supreme Bajaj 9663501499 • **Hassan** Arpita Bajaj 9902439255 • **Arsikere** Arpita Bajaj 9964094535 • **Kolar** Shree Kamakshi Bajaj 9845784351 • **Malur** Shree Kamakshi Bajaj 9665524409 • **KGF** Shree Kamakshi Bajaj 9900235758 • **Mulbagalu** Shree Kamakshi Bajaj 8892616586 • **Bangarapet** Shree Kamakshi Bajaj 8970688361 • **Tumkur** Akshaya Bajaj 7259040212 • **Tiptur** Akshaya Bajaj 7259040226 • **Sira** Akshaya Bajaj 7259040328 • **Kunigal** Akshaya Bajaj 7338662706 • **Madhugiri** Akshaya Bajaj 7259040340 • **BH Road** 7338662687 • **Mysore Saraswathipuram** Popular Bajaj 9148101113 • **Chamarajapuram** Popular Bajaj 7259786271 • **Vontikoppal** Star Bajaj 9886959722 • **Mandya** Popular Bajaj 7760967900 • **Chamarajanagara** Patel Bajaj 9480494888 • **Hunsur** Star Bajaj 8884374777 • **Kushalnagar** Popular Bajaj 7259786276 • **Nanjangud** Star Bajaj 9742100252 • **NR Mohalla** Star Bajaj 8095777706 • **Balmatta** Supreme Bajaj 9606973192 **Kuloor** Supreme Bajaj 9606237547 • **Surathkal** Supreme Bajaj 9606973193 • **Thokottu** 9606702429 • **B C Road** 7618715273 • **Bidar** Sindol Bajaj 9513226555 • **Udupi** Saanvi Bajaj 8861135225.

ಕಿತ್ತೂರು ಚನ್ನಮ್ಮ ವಿಜಯ ಜ್ಯೋತಿ ಯಾತ್ರೆಗೆ ಮುಖ್ಯಮಂತ್ರಿ ಬೊಮ್ಮಾಯಿ ಚಾಲನೆ

ಚನ್ನಮ್ಮ, ರಾಯಣ್ಣ ಪ್ರತಿಮೆ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 50 ಕೋಟಿ ಅನುದಾನ ಒದಗಿಸಲಾಗಿದ್ದು, ಇದೇ ವರ್ಷ ಬೆಳಗಾವಿಯ ಸುವರ್ಣಸೌಧದಲ್ಲಿ ರಾಣಿ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆ ಪ್ರತಿಷ್ಠಾಪಿಸಲಾಗುವು-ದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಳಗಾವಿ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಕಿತ್ತೂರು ಚನ್ನಮ್ಮಾಜಿ ವಿಜಯ ಜ್ಯೋತಿ ಯಾತ್ರೆ'ಗೆ ಚಾಲನೆ ನೀಡಿ, ಮಾತನಾಡಿದರು.

'ಕಿತ್ತೂರು ಉತ್ಸವ ಪ್ರಾರಂಭವಾಗಿ 25-30 ವರ್ಷಗಳಾಗಿವೆ. ಕುಂಟುತ್ತಿದ್ದ ಈ ಉತ್ಸವವನ್ನು ನಮ್ಮ ಸರ್ಕಾರ ರಾಜ್ಯ ಮಟ್ಟದಲ್ಲಿ ಆಚರಿಸುತ್ತಿದೆ. ಹಿಂದೆ ಬೆಳಗಾವಿ ಉಸ್ತುವಾರಿ ಸಚಿವನಾಗಿದ್ದ ಸಂದರ್ಭ ಈ ಉತ್ಸವಕ್ಕೆ ಹೆಚ್ಚಿನ ಅನುದಾನ ಒದಗಿಸಿದ್ದೆ. ಆಗ ಜ್ಯೋತಿಯು ಕಿತ್ತೂರಿನಿಂದ ಬೆಂಗಳೂರಿಗೆ ಚನ್ನಮ್ಮಳ ಸಂದೇಶ ಹೊತ್ತು ಬರುತ್ತಿತ್ತು. ಈಗ ರಾಜಧಾನಿ ಬೆಂಗಳೂರಿನಿಂದ ಕಿತ್ತೂರು ಸಂಸ್ಥಾನದ ರಾಜಧಾನಿ ಕಿತ್ತೂರಿಗೆ ಜ್ಯೋತಿ ಯಾತ್ರೆ ನಡೆಯುತ್ತಿದೆ' ಎಂದು ಹೇಳಿದರು.

'ಈಗಾಗಲೇ ಸಂಗೊಳ್ಳಿ ರಾಯಣ್ಣ ಹೆಸರಿನಲ್ಲಿ ಸೈನಿಕ ಶಾಲೆ ಪ್ರಾರಂಭ ಮಾಡಿದ್ದೇವೆ. ಮುಂದಿನ ತಿಂಗಳು ಸೈನಿಕ ಶಾಲೆ ಉದ್ಘಾಟನೆ ಮಾಡುತ್ತೇವೆ. ಇದರ ಜತೆಗೆ ರಾಯಣ್ಣನನ್ನು ನೇಣುಗಂಬಕ್ಕೆ ಹಾಕಿದ ನಂದಗಡ ಸಮಾಧಿ ಸ್ಥಳವನ್ನೂ ಅಭಿವೃದ್ಧಿ ಮಾಡಲಾಗುತ್ತಿದೆ' ಎಂದು ಹೇಳಿದರು.

ಇದಕ್ಕೂ ಮೊದಲು ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರು ನಗರದ ಸರ್ವ ಸಂಘಟನೆಗಳ ಒಕ್ಕೂಟದ ಪರವಾಗಿ ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ ಅವರು ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿ, 'ವಿಧಾನಸೌಧದ ಮುಂದೆ ಕಿತ್ತೂರು ಚನ್ನಮ್ಮ ಅವರ ಪ್ರತಿಮೆ ಪ್ರತಿಷ್ಠಾಪಿಸಬೇಕು. ಚನ್ನಮ್ಮ ಅವರ ಜನ್ಮದಿನ ನ.14 ಅದೇ ದಿನ ಜನ್ಮ-ದಿನಾಚರಣೆ ಆಚರಿಸಬೇಕು. ಕಿತ್ತೂರು ನಗರವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕು. ಚನ್ನಮ್ಮ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಥಮ ಮಹಿಳೆ ಎಂದು ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪ್ರಾರಂಭವಾದ ವಿಜಯ ಜ್ಯೋತಿ ಯಾತ್ರೆ ಇದೇ 23 ರಂದು ಕಿತ್ತೂರು ತಲುಪಲಿದೆ. ಬೆಳಗಾವಿ ಜಿಲ್ಲೆ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ, ಸಚಿವ ಎಂ.ಟಿ.ಬಿ. ನಾಗರಾಜ್, ಶಾಸಕ ಮಹಾಂತೇಶ ದೊಡ್ಡಗೌಡರ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಇದ್ದರು.

ಕಿತ್ತೂರು ಚನ್ನಮ್ಮಾಜಿ ವಿಜಯ ಜ್ಯೋತಿ ಯಾತ್ರೆಗೆ ಚಾಲನೆ ನೀಡುವ ವೇಳೆ ರಾಮನಗರದ ಜಾನಪದ ಕಲಾವಿದರು ಸುಗ್ಗಿ ಕುಣಿತ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

'ಹೊಸ ಅರಮನೆ ನಿರ್ಮಾಣ'

'ಸ್ವಾತಂತ್ರ್ಯ ಹೋರಾಟದ ಮೊದಲ ವೀರ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ ಎಂಬುದಾಗಿ ಕರ್ನಾಟಕ ವಿಶ್ವವಿದ್ಯಾಲಯ ಗೆಜೆಟಿಯರ್‌ನಲ್ಲಿ ಪ್ರಕಟಗೊಂಡಿದೆ. ಇದನ್ನು 'ಭಾರತೀಯ ರಾಷ್ಟ್ರೀಯ ಅಭಿಲೇಖಾಗಾರ' ಸಂಸ್ಥೆಗೆ ಕಳಿಸಿಕೊಟ್ಟು, ನೋಂದಣಿ ಮಾಡಿಸುತ್ತೇವೆ. ಕಿತ್ತೂರಿನಲ್ಲಿ ಶಿಥಿಲಗೊಂಡಿರುವ ಅರಮನೆಯನ್ನು ಗಟ್ಟಿಗೊಳಿಸಿ, ಪಕ್ಕದಲ್ಲೇ ಹೊಸ ಅರಮನೆಯನ್ನೂ ಕಟ್ಟಿಸಲು ತೀರ್ಮಾನ ಮಾಡಲಾಗಿದೆ' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

'ಕಿತ್ತೂರನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೈಲಹೊಂಗಲ, ಸಂಗೊಳ್ಳಿ ಸೇರಿ ಕಿತ್ತೂರು ಸಂಸ್ಥಾನದ ಪ್ರಾಚೀನ ಕುರುಹುಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಹೇಳಿದರು.

ಓದುಗರು ಕಂಡಂಥ ರಸ್ತೆಗುಂಡಿ

ನೀವೂ ಕಂಡಿರಾ ರಸ್ತೆ ಗುಂಡಿ...

ಬಿಬಿಎಂಪಿ ನಗರದ ರಸ್ತೆಗಳನ್ನು ಗುಂಡಿಮುಕ್ತವನ್ನಾಗಿಸಲು ಕಾರ್ಯಪಡೆ ರಚಿಸಿದೆ. ಆದರೆ, ಹಲವು ತಿಂಗಳಿಂದ ಸಾಕಷ್ಟು ರಸ್ತೆಗಳಲ್ಲಿ ಗುಂಡಿ ಉಳಿದೇ ಇರುತ್ತದೆ. ಇಂತಹ ರಸ್ತೆ ಗುಂಡಿಗಳು ನಿಮ್ಮ ಬಡಾವಣೆ ಅಥವಾ ನೀವು ಸಂಚರಿಸುವ ರಸ್ತೆಯಲ್ಲಿ ಕಂಡರೆ ಅದರ ಫೋಟೊ ತೆಗೆದು, ಅದು ಎಲ್ಲಿದೆ, ಯಾವ ಪ್ರದೇಶ ಎಂಬ ಮಾಹಿತಿಯ ಸಹಿತ ಕಳುಹಿಸಿ. 'ಪ್ರಜಾವಾಣಿ' ಅವನ್ನು ಪ್ರಕಟಿಸಿ, ಬಿಬಿಎಂಪಿ ಗಮನ ಸೆಳೆಯಲಿದೆ.

ಪ್ರಜಾವಾಣಿ 96060 38256

ಬೆಮಲ್ ಮುಖ್ಯರಸ್ತೆಯ ಆರ್‌ಆರ್ ನಗರ ಬಸ್ ನಿಲ್ದಾಣದಿಂದ ಪೊಲೀಸ್ ಠಾಣೆಗೆ ಸಂಪರ್ಕ ಕಲ್ಪಿಸುವ ರಸ್ತೆ

'ಎಲ್ಲಿ ನೋಡಿದರೂ ಗುಂಡಿಗಳೇ'

ಇಂದಿರಾನಗರದ 12ನೇ ಮುಖ್ಯರಸ್ತೆಯಲ್ಲಿ ಎಲ್ಲಿ ನೋಡಿದರೂ ಗುಂಡಿಗಳೇ ಕಾಣುತ್ತವೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇದರಿಂದ ಸಂಚಾರ ದಟ್ಟಣೆ ಉಂಟಾಗುತ್ತದೆ. ಕೂಡಲೇ ಗುಂಡಿಗಳನ್ನು ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವಪ್ರಸಾದ್.ಎಸ್., ಸ್ಥಳೀಯ ನಿವಾಸಿ



ಇಂದಿರಾನಗರದ 2ನೇ ಹಂತದ 12ನೇ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿರುವುದು

'ಗುಂಡಿ ಮುಚ್ಚಿ'

ಬೆಮಲ್ ಮುಖ್ಯರಸ್ತೆಯ ಆರ್.ಆರ್ ನಗರ ಬಸ್ ನಿಲ್ದಾಣದಿಂದ ಪೊಲೀಸ್ ಠಾಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದೆ. ಪ್ರತಿನಿತ್ಯ ವಾಹನ ಸವಾರರು ಇದರಿಂದ ಸಮಸ್ಯೆ ಅನುಭವಿಸುತ್ತಿದ್ದಾರೆ. ಮಳೆ ಬಂದಾಗ ರಸ್ತೆ ಯಾವುದು ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕೂಡಲೇ ಗುಂಡಿಗಳನ್ನು ಮುಚ್ಚಬೇಕು.

ದೇವರಾಜು, ವಾಹನ ಸವಾರ

'ಅಗೆದ ರಸ್ತೆ ಮುಚ್ಚಿ'

ಬೊಮ್ಮನಹಳ್ಳಿ ವ್ಯಾಪ್ತಿಯ ಆರ್.ಎಂ.ಆರ್. ಬಿಟಿಎಂ 4ನೇ ಹಂತದ 3ನೇ ಕ್ರಾಸ್‌ನ ರಸ್ತೆಯನ್ನು ದುರಸ್ತಿಗೊಳಿಸಲು ಮೂರು ತಿಂಗಳ ಹಿಂದೆ ಅಗೆದು ಹಾಗೆ ಬಿಡಲಾಗಿದೆ. ಇದರಿಂದ ವಾಹನ ಸವಾರರು ಪರದಾಡುವ ಪರಿಸ್ಥಿತಿ ಎದುರಾಗಿದೆ. ಈ ಕುರಿತು ಬಿಬಿಎಂಪಿ ಬೊಮ್ಮನಹಳ್ಳಿಯ ವ್ಯಾಪ್ತಿ ಕಮಿಷನರ್‌ಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಸಿ. ಮುರಳೀಧರ್, ಸ್ಥಳೀಯ ನಿವಾಸಿ

ಬೊಮ್ಮನಹಳ್ಳಿ ವ್ಯಾಪ್ತಿಯ ಆರ್.ಎಂ.ಆರ್. ಬಿಟಿಎಂ 4ನೇ ಹಂತದ 3ನೇ ಕ್ರಾಸ್‌ನ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

'ರಾಜ್ಯೋತ್ಸವ ಪ್ರಶಸ್ತಿಗಾಗಿ 9,823 ಅರ್ಜಿಗಳು'

ಪ್ರಜಾವಾಣಿ ವಾರ್ತೆ

ಉಡುಪಿ: 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ 9,823 ಅರ್ಜಿಗಳು ಬಂದಿದ್ದು, ತೆರೆಮರೆಯ ಅರ್ಹ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಆದಿ ಉಡುಪಿಯಲ್ಲಿ ₹5 ಕೋಟಿ ವೆಚ್ಚದದಲ್ಲಿ ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ಪ್ರಶಸ್ತಿ ಪುರಸ್ಕೃತರ ಆಯ್ಕೆಗೆ ಸಮಿತಿ ರಚನೆಯಾಗಿದ್ದು, ಮೊದಲ ಸಭೆಯೂ ಮುಗಿದಿದೆ' ಎಂದರು.

'ಮಾತಾಡು ಮಾತಾಡು ಕನ್ನಡ' ಅಭಿಯಾನ ನಡೆಸಲು ಸಿದ್ಧತೆ ನಡೆದಿದೆ. 13 ಜಿಲ್ಲೆಗಳಲ್ಲಿ ರಂಗಮಂದಿರ ನಿರ್ಮಾಣಕ್ಕೆ ತಲಾ ₹5 ಕೋಟಿ, ತಾಲ್ಲೂಕು ರಂಗಮಂದಿರಗಳ ನಿರ್ಮಾಣಕ್ಕೆ ₹2 ಕೋಟಿ ನೀಡಲಾಗುವುದು ಎಂದರು.

ಸಿಪಿವೈ ಕಾರಿಗೆ ಕಲ್ಲು ಎಸೆತ: ಜೆಡಿಎಸ್ ಕಾರ್ಯಕರ್ತರ ವಿರುದ್ಧ ಪ್ರಕರಣ

ರಾಮನಗರ: ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಕಾರಿನ ಮೇಲೆ ಕಲ್ಲು, ಮೊಟ್ಟೆ ತೂರಿದ ಆರೋಪದಡಿ ಜೆಡಿಎಸ್ ಪಕ್ಷದ 14 ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ ಚನ್ನಪಟ್ಟಣ ಗ್ರಾಮೀಣ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಯೋಗೇಶ್ವರ್ ಕಾರು ಚಾಲಕ ವೆಂಕಟೇಶ ದೂರು ಆಧರಿಸಿ ಐಪಿಸಿ ಸೆಕ್ಷನ್ 353, 427 ಅಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೆ, ಭದ್ರತೆಗೆ ನಿಯೋಜಿಸಿದ್ದ ಕಾನ್‌ಸ್ಟೆಬಲ್ ಹನುಮಂತ ಶೆಟ್ಟಿ ಅವರೂ ಮತ್ತೊಂದು ದೂರು ದಾಖಲಿಸಿದ್ದಾರೆ. 'ಯೋಗೇಶ್ವರ್ ಅವರಿಗೆ ಭದ್ರತೆ ನೀಡುವಾಗ ಜೆಡಿಎಸ್ ಕಾರ್ಯಕರ್ತರು ನನ್ನ ಮೇಲೆ ಕಲ್ಲು ಎಸೆದರು' ಎಂದು ದೂರಿದ್ದಾರೆ.

ಕಾಮಗಾರಿಗೆ ಚಾಲನೆ ನೀಡಿ ಮರಳುವಾಗ ಶನಿವಾರ ಚನ್ನಪಟ್ಟಣದ ಬೈರಾಪಟ್ಟಣ ಬಳಿ ವೇಳೆ ಜೆಡಿಎಸ್ ಕಾರ್ಯಕರ್ತರು ಯೋಗೇಶ್ವರ್ ಅವರಿದ್ದ ಕಾರಿಗೆ ಮುತ್ತಿಗೆ ಹಾಕಿ ಕಲ್ಲು, ಮೊಟ್ಟೆ ಎಸೆದಿದ್ದರು. ಭೂಮಿಪೂಜೆ ಕಾರ್ಯಕ್ರಮಗಳಿಗೂ ಅಡ್ಡಿಪಡಿಸಿದ್ದರು.

ಪ್ರಕರಣ ದಾಖಲಾದ ಬೆನ್ನಲ್ಲೇ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭಾನುವಾರ ಚನ್ನಪಟ್ಟಣಕ್ಕೆ ಭೇಟಿ ನೀಡಿದರು.

ಚುನಾವಣಾ ಪ್ರಕಟಣೆ

ಬಿ.ಎಸ್.ಎನ್.ಎಲ್. ಸೆಂಟ್ರಲ್ ಅಂಡ್ ಸ್ಟೇಟ್ ಗೌರ್ನಮೆಂಟ್, ಐಟಿ / ಬಿಟಿ ಎಂಪ್ಲಾಯೀಸ್ (ವರ್ಕಿಂಗ್ ಅಂಡ್ ರಿಟೈರ್ಡ್) ಹೌಸ್ ಬಿಲ್ಡಿಂಗ್ ಕೋ. ಆಪರೇಟಿವ್ ಸೊಸೈಟಿ ಲಿಮಿಟೆಡ್.
ನಂ. 115, 1ನೇ ಮಹಡಿ ಕ್ರೆಸೆಂಟ್ ಪ್ಲಾಜಾ, ಪುಷ್ಪಾಂಜಲಿ ಚಿತ್ರ ಮಂದಿರದ ಎದುರು, ದಿಣ್ಣೂರು ಮುಖ್ಯರಸ್ತೆ, ಆರ್.ಟಿ. ನಗರ ಅಂಚೆ, ಬೆಂಗಳೂರು–560032

ಈ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳ ಸಾಮಾನ್ಯ ಚುನಾವಣೆ.

ಪ್ರಕಟಣೆ

ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಸಂಘದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಚುನಾಯಿಸಲು ರಿಟರ್ನಿಂಗ್ ಅಧಿಕಾರಿಯನ್ನಾಗಿ ಶ್ರೀ ವೈ ಪಿ ವೆಂಕಟೇಶ್ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಇವರನ್ನು ನೇಮಿಸಲಾಗಿದ್ದು ಚುನಾವಣೆಯನ್ನು ದಿನಾಂಕ 16.10.2022ರ ಭಾನುವಾರದಂದು ಶ್ರೀ ವೀನಸ್ ಪಾರ್ಟಿ ಹಾಲ್, ನ್ಯೂ ಶಾಂತಿ ಸಾಗರ್ ಹೋಟೆಲ್ ಎದುರು, ಆರ್. ಟಿ. ನಗರ, ಬೆಂಗಳೂರು–560032 ಇಲ್ಲಿ ನಿಗದಿಪಡಿಸಿರುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ: 06.10.2022 ಮತ್ತು ಅಂತಿಮ ದಿನಾಂಕ 08.10.2022 ರಂದು 02.30 ಘಂಟೆಯವರೆಗೆ ಸಲ್ಲಿಸಲು ಅವಕಾಶ ಇರುತ್ತದೆ. ಚುನಾವಣಾ ವೇಳಾ ಪಟ್ಟಿಯನ್ನು ಈಗಾಗಲೇ ಸಂಘದ ಎಲ್ಲಾ ಅರ್ಹ ಮತದಾರ ಸದಸ್ಯರಿಗೆ ಅಂಚೆಯ ಮೂಲಕ ರವಾನಿಸಿದ್ದು, ಸಂಘದ ಸೂಚನಾ ಫಲಕದಲ್ಲಿ ಕೂಡ ಪ್ರಕಟಿಸಲಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಚುನಾವಣಾ ವೇಳಾ ಪಟ್ಟಿ ತಲುಪದಿದ್ದಲ್ಲಿ ಇದನ್ನೇ ತಿಳುವಳಿಕೆ ಪತ್ರವೆಂದು ತಿಳಿಯತಕ್ಕದ್ದು. ಈವರೆಗೂ ಗುರುತಿನ ಚೀಟಿ ಪಡೆಯದೇ ಇರುವ ಅರ್ಹ ಮತದಾರ ಸದಸ್ಯರು ತಮ್ಮ 02 ಭಾವ ಚಿತ್ರಗಳೊಂದಿಗೆ ಸಂಘಕ್ಕೆ ಖುದ್ದಾಗಿ ಭೇಟಿ ನೀಡಿ ಗುರುತಿನ ಚೀಟಿಯನ್ನು ಪಡೆಯಲು ಈ ಮೂಲಕ ಕೋರಿದೆ.
ಮತಚಲಾಯಿಸಲು ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಬಿ.ಎಸ್.ಎನ್.ಎಲ್. ಸೆಂಟ್ರಲ್ ಅಂಡ್ ಸ್ಟೇಟ್ ಗೌರ್ನಮೆಂಟ್, ಐಟಿ/ಬಿಟಿ ಎಂಪ್ಲಾಯೀಸ್ (ವರ್ಕಿಂಗ್ ಅಂಡ್ ರಿಟೈರ್ಡ್) ಹೆಚ್.ಬಿ.ಸಿ.ಎಸ್ ಲಿ.
ಆರ್.ಟಿ. ನಗರ, ಬೆಂಗಳೂರು 560032.

ಸ್ಥಳ: ಬೆಂಗಳೂರು
ದಿನಾಂಕ: 03.10.2022

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, "ಜಲಭವನ" ವಿಭಾಗ, 3ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029.

ಟೆಂಡರ್ ಅಧಿಸೂಚನೆ –2ನೇ ಕರೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

NO. KWB/EE/BNG/NAG-HSK/1258/2022-23 Date:01.10.2022

ಕಾಮಗಾರಿಯ ವಿವರ : ನಗರೋತ್ಥಾನ ಎಸ್.ಸಿ.ಪಿ. ಅನುದಾನದಡಿ ಹೊಸಕೋಟೆ ನಗರಕ್ಕೆ 3 ಸಂಖ್ಯೆ ಸೂಕ್ತ ಸಾಮರ್ಥ್ಯದ ಸಬ್‌ಮರ್ಸಿಬಲ್ ಪಂಪುಗಳನ್ನು ಒದಗಿಸಿ, ಅಳವಡಿಸಿ, ವಿದ್ಯುತ್ತೀಕರಿಸಿ ಚಾಲನೆಗೊಳಿಸುವ ಕಾಮಗಾರಿ. (ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ 3217/Call 2)
ಟೆಂಡರಗಿಟ್ಟ ಮೊತ್ತ : 24,25,070/– (ಜಿ.ಎಸ್.ಟಿ. ಹೊರತುಪಡಿಸಿ). ಭದ್ರತಾ ಠೇವಣಿ : ರೂ. : 49,000/– ಗುತ್ತಿಗೆ ಕಾಲಾವಧಿ : 4 ತಿಂಗಳು (ಮಳೆಗಾಲ ಸೇರಿದಂತೆ).

1	ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ	03.10.2022 ರ ಬೆಳಿಗ್ಗೆ 11.00 ಗಂಟೆಯ ನಂತರ.
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.10.2022 ರ ಸಂಜೆ 5.30 ರ ವರೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	13.10.2022 ರ ಬೆಳಿಗ್ಗೆ 11.00 ಗಂಟೆಯ ನಂತರ.

ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ ದೂರವಾಣಿ 080–41106536 ನಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ ವಿಭಾಗ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/2498/2022–23

ಶಂಕರ್ ಬಿದರಿ ಆತ್ಮಚರಿತ್ರೆ 'ಸತ್ಯಮೇವ ಜಯತೇ' ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಡಿಜಿ- ಐಜಿಪಿ ಶಂಕರ ಬಿದರಿ ಅವರ ಆತ್ಮಚರಿತ್ರೆ 'ಸತ್ಯಮೇವ ಜಯತೇ' ಕೃತಿಯನ್ನು ಶಾಸಕ ಜಗದೀಶ ಶೆಟ್ಟರ್ ಭಾನುವಾರ ಬಿಡುಗಡೆಗೊಳಿಸಿದರು.

ಬಸವ ಸಮಿತಿ ವತಿಯಿಂದ ನಗರದಲ್ಲಿ ಗಾಂಧಿ ಜಯಂತಿ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಜಗದೀಶ ಶೆಟ್ಟರ್ ಮಾತನಾಡಿ, 'ಅಧಿಕಾರಿಗಳು, ರಾಜಕೀಯ ಮುಖಂಡರು, ರಾಜಕೀಯದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಸೇರಿದಂತೆ ಜನರಿಗಾಗಿ ಕೆಲಸ ಮಾಡುವ ಪ್ರತಿ-ಯೊಬ್ಬರಿಗೂ ಈ ಕೃತಿ ಮಾರ್ಗದರ್ಶಕವಾಗಿದೆ' ಎಂದರು.

'ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮಧ್ಯೆ ಸಂಬಂಧ ಹೇಗಿರುತ್ತದೆ? ಆಡಳಿತ ವ್ಯವಸ್ಥೆ ಹಾಗೂ ವೀರಪ್ಪನ್ ಕಾರ್ಯಾಚರಣೆ ಸೇರಿದಂತೆ ಹತ್ತಾರು ಕುತೂಹಲಕಾರಿ ಸಂಗತಿಗಳು ಕೃತಿಯಲ್ಲಿವೆ' ಎಂದರು.

ಸಾಹಿತಿ ಡಾ. ಗುರುಲಿಂಗ ಕಾಪಸೆ ಮಾತನಾಡಿ, 'ಶಂಕರ ಬಿದರಿ ಅವರದ್ದು ಐಎಎಸ್-ಐಪಿಎಸ್ ಕುಟುಂಬ. ಹೊರ ರಾಜ್ಯದಲ್ಲೂ ಕುಟುಂಬ ಹೆಸರು ಮಾಡಿದೆ. ಜೀವನದುದ್ದಕ್ಕೂ ಹೋರಾಟ ನಡೆಸಿದ್ದ ಶಂಕರ ಬಿದರಿ ಅವರಿಗೆ ಜ್ಞಾನಬಲದ ಜೊತೆಗೆ ದೈವಬಲವೂ ಇದೆ' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಅನಿಲ ಗೋಕಾಕ್ ಮಾತನಾಡಿದರು.

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಇದ್ದರು.

'ಸತ್ಯಮೇವ ಜಯತೇ' ಕೃತಿಯನ್ನು ಶಾಸಕ ಜಗದೀಶ ಶೆಟ್ಟರ್ ಭಾನುವಾರ ಬಿಡುಗಡೆಗೊಳಿಸಿದರು. ಶಂಕರ ಬಿದರಿ (ಎಡಗಡೆಯವರು), ಅನಿಲ ಗೋಕಾಕ್, ಅರವಿಂದ ಜತ್ತಿ, ಡಾ. ಗುರುಲಿಂಗ ಕಾಪಸೆ, ವಿಶ್ವೇಶ್ವರ ಭಟ್ ಇದ್ದರು — ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ
ಪುಸ್ತಕ ಹೆಸರು: ಶಂಕರ ಮಹಾದೇವ ಬಿದರಿ ಆತ್ಮಚರಿತ್ರೆ- 'ಸತ್ಯಮೇವ ಜಯತೇ'
ಪುಟಗಳು: 730
ಬೆಲೆ: ₹ 850

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಗರದಲ್ಲಿ ಇಂದು

ನವರಾತ್ರಿ ವಿಶೇಷ ಕಾರ್ಯಕ್ರಮಗಳು

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರ್ಮ್ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30
ವಚನ ನವರಾತ್ರಿ ವಿಜಯದಶಮಿ: ಆಶಯ ನುಡಿ: ಎಸ್. ಪಿನಾಕಪಾಣಿ, ಉಪನ್ಯಾಸ: ಶಿಲ್ಪಾ ಚಂದ್ರಪ್ಪಯ್ಯ, ವಚನ ಗಾಯನ: ಮಾದೇಶ್ವರಿ ಮತ್ತು ತಂಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನ ಮನೆಯಂಗಳ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5.30
ನವರಾತ್ರಿ ಉತ್ಸವ: ದೇವಿಗೆ ಕನಕದುರ್ಗಾ ಅಲಂಕಾರ, ಭಜನೆ: ಡಾ.ಜಿ.ವಿ. ಆಚಾರ್ ಮತ್ತು ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6
ಶರನ್ನವರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ಹರಿನಾಮ ಸಂಕೀರ್ತನೆ: ರೂಪಾ ಪ್ರಭಂಜನ, ರಮ್ಯಾ ಸುಧೀರ್ ತಂಡದಿಂದ, ತಬಲಾ: ಶ್ರೀನಿವಾಸ ಕಾಖಂಡಕಿ ಕೀ-ಬೋರ್ಡ್: ಅಮಿತ್ ಶರ್ಮಾ, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30
ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ಗೆಜ್ಜೆ ಸ್ಕೂಲ್ ಆಫ್ ಒಡಿಸ್ಸಿ ಡಾನ್ಸ್ ಕಲಾವಿದರಿಂದ ಒಡಿಸ್ಸಿ ನೃತ್ಯ, ನಿರ್ದೇಶನ: ಶ್ವೇತಾ ಕೃಷ್ಣ, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30
ನವರಾತ್ರಿ ಉತ್ಸವ: ದರ್ಗಾಷ್ಟಮಿ, ದುರ್ಗಾ ನಮಸ್ಕಾರ ಪೂಜೆ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30
ನವರಾತ್ರಿ ಸಾಂಸ್ಕೃತಿಕ ಉತ್ಸವ: ಕರ್ನಾಟಕ ಸಂಗೀತ ಪ್ರಸ್ತುತಿ: ಜಲಜಾ ಪ್ರಸಾದ್ ಮತ್ತು ವಿದ್ಯಾರ್ಥಿಗಳಿಂದ, ಆಯೋಜನೆ ಮತ್ತು ಸ್ಥಳ: ಪದ್ಮಾವತಿ ಕಲಾನಿಕೇತನ, ಆವರಣ, ಮತ್ತಿಕೆರೆ ಲೇಔಟ್, ಸಂಜೆ 6.30
ಶರನ್ನವರಾತ್ರಿ ಉತ್ಸವ: ದೇವಿಗೆ ತರಕಾರಿ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ
ಶರನ್ನವರಾತ್ರಿ ಉತ್ಸವ: ದೇವಿಗೆ ಶ್ರೀಗಂಧದ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ
ನವರಾತ್ರಿ ಉತ್ಸವ: ಶಾಂತ ಚಂಡಿ ಹೋಮ, ಆಯೋಜನೆ: ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ.ಸಿಎಓ/ಸಿಎನ್/ಬಿಎನ್‌ಸಿ/79/2022
ದಿನಾಂಕ : 22–09–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು – ಹಾಸನ ಸೆಕ್ಷನ್‌ನಲ್ಲಿ ಹೊಳೆನರಸೀಪುರದ ಹತ್ತಿರ ರೈಲ್ವೆ ಕಿ.ಮೀ. ಸಂ.87/800–900ನಲ್ಲಿ ಎಲ್‌ಸಿ ಸಂ.78ರ ಬದಲಿಗೆ ರೈಲ್ ಮೇಲ್ಸೇತುವೆಯ ನಿರ್ಮಾಣದೊಂದಿಗೆ ಸಬ್‌ವೇ / ರೈಲ್ ಕೆಳಸೇತುವೆಯ ಉದ್ದೇಶಿತ ನಿರ್ಮಾಣವನ್ನು ಸುಗಮಗೊಳಿಸಲು ಹಾಲಿ ಇರುವ ಹೆಚ್‌ಟಿ/ಎಲ್‌ಟಿ ಓವರ್‌ಹೆಡ್ ಪವರ್ ಲೈನ್ ಅಲೈನ್‌ಮೆಂಟ್‌ನ ಸ್ಥಳಾಂತರ / ಮಾರ್ಪಾಡುಗೊಳಿಸುವ ಹೆಚ್ಚುವರಿ ಕಾಮಗಾರಿ. (ಟೆಂಡರ್ ಸಂ. ಇಸಿಎನ್–18–2022)	ರೂ. 86,28,961/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20–10–2022 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಯಾವುದೇ ತಿದ್ದುಪಡಿಗಳಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ (ನಿರ್ಮಾಣ) ಬೆಂಗಳೂರು ದಂಡು
ಪಿಯುಬಿ/397/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಉ.ನಿ/44/2022–23 ದಿನಾಂಕ: 01.10.2022

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಬಿ. ಜ್ಯೋತಿಪ್ರಸಾದ್ ಬಿನ್ ಬಿ. ಕೃಷ್ಣಯ್ಯಚೆಟ್ಟಿ ಮತ್ತು ಶ್ರೀ ಬಿ. ಕಿಶೋರ್ ಕುಮಾರ್ ಬಿನ್ ಬಿ. ಜ್ಯೋತಿಪ್ರಸಾದ್	ಆನೇಕಲ್	ಜಿಗಣಿ	ಹಾರಗದ್ದೆ	44/1	01–00	ಉದ್ಯಾನವನ	ವಸತಿ	
2		ಆನೇಕಲ್	ಜಿಗಣಿ	ಹಾರಗದ್ದೆ	53/1	03–08	ಉದ್ಯಾನವನ	ವಸತಿ	
3		ಆನೇಕಲ್	ಜಿಗಣಿ	ಹಾರಗದ್ದೆ	53/3	0–32	ಉದ್ಯಾನವನ	ವಸತಿ	
					ಒಟ್ಟು	05–00			

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/2495/2022–23

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/82/2022
ದಿನಾಂಕ : 28–09–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು : ವಂದೇಭಾರತ್ ಛೇರ್‌ಕಾರ್ ರೈಲುಗಳ ನಿರ್ವಹಣೆಗಾಗಿ ವಿದ್ಯುತ್ (ಸಾಮಾನ್ಯ) ಮತ್ತು ಟಿಆರ್‌ಡಿ ಕಾಮಗಾರಿಗಳನ್ನು ಒಳಗೊಂಡು 4ನೇ ಪಿಟ್‌ಲೈನ್‌ಗಳು, 4 ಪಿಟ್‌ಲೈನ್‌ಗಳ ಮೇಲೆ ಕವರ್ಡ್ ಶೆಡ್, ಸೇವಾ ಕಟ್ಟಡದ ನಿರ್ಮಾಣ, ವಾಷಿಂಗ್ ಪ್ರದೇಶವನ್ನು ಒಳಗೊಂಡಂತೆ ಹಾಲಿ ಇರುವ ಮೆಮು ಶೆಡ್ ವಿಸ್ತರಣೆ. (ಸಂಯೋಜಿತ ಕಾಮಗಾರಿ). (ಟೆಂಡರ್ ಉಲ್ಲೇಖ ಸಂ. ಎಸ್‌ಎಂವಿಬಿ–ವಂದೇಭಾರತ್–01)	ರೂ. 49,19,20,922/–
2	ಗದಗ – ಹೊಟಗಿ ಡಬ್ಲಿಂಗ್ ಯೋಜನೆ : ಕುಡಗಿ, ವಿಜಯಪುರ ಮತ್ತು ಅಲಿಯಾಬಾದ್ ನಿಲ್ದಾಣಗಳಲ್ಲಿ ಫಾರ್ಮೇಶನ್ ಮತ್ತು ಕಟ್ಟಿಂಗ್‌ಗಾಗಿ ಭೂಕಾಮಗಾರಿ, ಆರ್‌ಸಿಸಿ ರೀಟೇನಿಂಗ್ ಗೋಡೆಯ ನಿರ್ಮಾಣ, ಪಿಎಫ್‌ನ ವಿಸ್ತರಣೆ ಮತ್ತು ಪಿಎಫ್ ಶೆಲ್ಟರ್‌ಗಳ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಹೆಚ್‌ಐಜಿಎ–088)	ರೂ. 14,87,48,790/–
3	ಪಿಇಟಿ – ಗಂಗಾವತಿಯಿಂದ ಬಾಗಲಕೋಟೆ (157.0 ಕಿ.ಮೀ) ಮತ್ತು ಗಂಗಾವತಿಯಿಂದ ದರೋಜಿ (36.00 ಕಿ.ಮೀ) ನಿಲ್ದಾಣಗಳ ನಡುವೆ ಒಟ್ಟು – 193 ಕಿ.ಮೀ. ಹೊಸ ಬಿಜಿ ಮಾರ್ಗಕ್ಕಾಗಿ ಸರ್ವೇ. (ಟೆಂಡರ್ ಉಲ್ಲೇಖ ಸಂ. ಜಿಜಿವಿಟಿ–ಬಿಜಿಕೆ–ಜಿಜಿವಿಟಿ–ಡಿಎಜೆ–ಪಿಇಟಿ)	ರೂ. 69,80,750/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19–10–2022 ರಂದು 15:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು
ಪಿಯುಬಿ/399/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಪ್ರಜಾವಾಣಿ
DH DECCAN HERALD

ಭೂಮಿಕಾ ಕ್ಲಬ್
ಸಂತಸ ಮತ್ತು ಸಂಭ್ರಮ
ಹೊಸ ಸ್ನೇಹಿತರ ಸಂಗಮ, ಹೊಸ ವಿಷಯಗಳ ಕಲಿಕೆ ಮತ್ತು ಮೋಜಿನ ಸಂಜೆಯ ಕಾಲಕ್ಷೇಪಕ್ಕೆ ಭೂಮಿಕಾ ಕ್ಲಬ್‌ನ ಫೆಸ್ಟಿವ್ ಎಡಿಷನ್ನಲ್ಲಿ ಭಾಗವಹಿಸಿ.
ಉದ್ಘಾಟನೆ - ಶಮಿತಾ ಮಲ್ನಾಡ್
15th Oct 2022
2:30 pm onwards
St. Joseph Institute of Management, Off M.G Road, Bengaluru
ನೋಂದಾಯಿತರಿಗೆ ಮಾತ್ರ ಅವಕಾಶ.
QR code ಅನ್ನು ಸ್ಕ್ಯಾನ್ ಮಾಡಿ ಅಥವಾ bit.ly/pvbhumikaclub ಗೆ ಲಾಗ್ ಆನ್ ಮಾಡಿ.
ಸಮ್ಮೋಹಕ ಸಂಗೀತ ಪ್ರದರ್ಶನ - ಶಮಿತಾ ಮಲ್ನಾಡ್
ಆರೋಗ್ಯಕರ ಆಹಾರ ಪದ್ಧತಿ - ಡಾ. ಪ್ರಿಯಾಂಕ ರೋಹಟ್ಗಿ
ಹಬ್ಬದ ಫ್ಯಾಷನ್ ಸ್ಟೈಲಿಂಗ್ ಸೆಷನ್ - ನಿಚಿತಾ ಪ್ರಿಯ
ಮನೆ ಅಲಂಕಾರಿಕ ಸಲಹೆಗಳು - ಸ್ನೇಹ ಪಾಟೀಲ್
ಬೆರಗುಗೊಳಿಸುವ ಫ್ಯಾಷನ್ ಶೋ - ಸಾಂಪ್ರದಾಯಿಕ ಉಡುಗೆ
ಹೈ-ಟೀ ಮತ್ತು ನೆಟ್‌ವರ್ಕಿಂಗ್ | ಅತ್ಯಾಕರ್ಷಕ ಸ್ಪರ್ಧೆಗಳು | ಎಲ್ಲರಿಗೂ ಗಿಫ್ಟ್ ಹ್ಯಾಂಪರ್
ಗಿಫ್ಟ್ ಪಾರ್ಟ್ನರ್ INDIA SWEET HOUSE
ಫ್ಯಾಶನ್ ಶೋ ಪಾರ್ಟ್ನರ್ STILE STRADA events & more...
ಇಂದೇ ನೋಂದಾಯಿಸಿಕೊಳ್ಳಿ
T&C apply

ಬೆಂಗಳೂರಿನ ರಾಜಭವನದ ಗ್ಲಾಸ್ ಹೌಸ್‌ನಲ್ಲಿ ಭಾನುವಾರ ಗಾಂಧಿ ಜಯಂತಿ ಸತ್ಯ ಮತ್ತು ಅಹಿಂಸಾ ಮಹೋತ್ಸವ ಕಾರ್ಯಕ್ರಮದಲ್ಲಿ ಆಳ್ವಾಸ್ ಎಜುಕೇಶನ್ ಫೌಂಡೇಶನ್ ತಂಡದವರು ಬಂಜಾರ ಶೈಲಿಯಲ್ಲಿ ನೃತ್ಯ ರೂಪಕ ಪ್ರದರ್ಶಿಸಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ. (ಎಡ ಚಿತ್ರ). ಡಾಲರ್ಸ್ ಕಾಲೊನಿಯ ಬುಲೆವಾರ್ಡ್ ಪಾರ್ಕ್‌ನಲ್ಲಿ ನೂರಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್‌. ಶಿವಣ್ಣ ಅವರು ಸೀರೆ ಮತ್ತು ಸಿಹಿ ವಿತರಿಸಿದರು. –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

‘ಗಾಂಧೀಜಿ ದೇಶಕ್ಕೆ ಪ್ರೇರಣಾಶಕ್ತಿ’

ಬೆಂಗಳೂರು: ‘ಮಹಾತ್ಮ ಗಾಂಧೀಜಿ ಅವರ ವಿಚಾರಗಳು ದೇಶಕ್ಕೆ ಪ್ರೇರಣಾಶಕ್ತಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧ ಬಳಿ ನಡೆದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಗಾಂಧೀಜಿ ಬದುಕಿನಲ್ಲಿ ಅವಮಾನ ಸಹಿಸಿಕೊಂಡು ಅದರ ವಿರುದ್ಧ ಗಟ್ಟಿಯಾಗಿ ನಿಂತು ಹೋರಾಟ ಮಾಡಿದವರು’ ಎಂದರು. ‘ಸತ್ಯ, ಅಹಿಂಸಾ ಮಾರ್ಗವನ್ನು ಕೊನೆಯವರೆಗೂ ಗಾಂಧಿ ಅನುಸರಿಸಿದರು. ಇಂದಿಗೂ ಗಾಂಧೀಜಿ ದೇಶಕ್ಕೆ ಅಂತಃಸತ್ವದ ಆತ್ಮ ಮತ್ತು ಪ್ರೇರಣೆಯಾಗಿದ್ದಾರೆ. ಅವರ ವಿಚಾರಗಳು ಇಂದಿಗೂ ಪ್ರಸ್ತುತ’ ಎಂದರು.

ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ನಡುವಿನ ಸಾಮ್ಯಗಳು ಬಹಳ. ಅವರ ಜನ್ಮ ದಿನಾಂಕ ಒಂದೇ ಆಗಿರುವುದು ಕೂಡ ಸಾಮ್ಯತೆಗಳ ಪ್ರತೀಕ. ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಸಹ ಇಂದಿಗೂ ನಮ್ಮ ಜನಮಾನಸದಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿದ್ದಾರೆ ಎಂದು ನುಡಿದರು.

‘ಶಾಸ್ತ್ರಿ ಅವರು ಜೀವನ-ದುದ್ದಕ್ಕೂ ಪ್ರಾಮಾಣಿಕ ಜೀವನ ನಡೆಸಿದರು. ದೇಶವನ್ನು ಅತ್ಯಂತ ದಕ್ಷ ಹಾಗೂ ಸಮರ್ಥವಾಗಿ ನಡೆಸಿದರು’ ಎಂದು ಹೇಳಿದರು.

ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ: ಬೈಕ್ ಜಾಥಾ, ಸ್ಮರಣಾಂಜಲಿ ಕಾರ್ಯಕ್ರಮ

ಅಹಿಂಸಾವಾದಿ, ಶಾಂತಿದೂತನ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ನಗರದಲ್ಲಿ ಭಾನುವಾರ ಆಚರಿಸಲಾಯಿತು.

ನಗರದ ಪಿಇಎಸ್ ವಿಶ್ವವಿದ್ಯಾಲಯ-ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಡಾ.ಜೆ.ಸೂರ್ಯಪ್ರಸಾದ್ ಮಾತನಾಡಿ, ‘ಮಹಾತ್ಮ ಗಾಂಧೀಜಿ ಅವರು ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಅಹಿಂಸೆ ಚಳವಳಿ ಆರಂಭಿಸಿದ್ದರು. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪರಂಪರೆಯು ಇಂದಿನ ಪೀಳಿಗೆಗೂ ಸ್ಫೂರ್ತಿಯಾಗಿದೆ’ ಎಂದು ಹೇಳಿದರು.

ವಿಶ್ವವಿದ್ಯಾಲಯದ ಮ್ಯೂಸಿಕ್ ಕ್ಲಬ್‌ನ ವಿದ್ಯಾರ್ಥಿಗಳು ‘ಸ್ಮರಣಾಂಜಲಿ’ ಕಾರ್ಯಕ್ರಮ ನಡೆಸಿಕೊಟ್ಟರು.

ಕುಲಸಚಿವ ಡಾ.ಕೆ.ಎಸ್. ಶ್ರೀಧರ್, ಡಾ.ವಿ.ಕೃಷ್ಣ, ಪ್ರೊ. ಎಂ.ವಿ.ಸತ್ಯನಾರಾಯಣ, ಡಾ.ಸಿ. ನಾರಾಯಣರೆಡ್ಡಿ, ಪ್ರೊ.ಎಚ್.ಎನ್. ದೇವರಾಜು ಇದ್ದರು.

ಬೆಂಗಳೂರು ನಗರ ವಿ.ವಿ: ಬೆಂಗಳೂರು ನಗರ ವಿಶ್ವವಿದ್ಯಾನಿಲಯ-ದಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯ-ಕ್ರಮದಲ್ಲಿ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅವರು ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

‘ಮಹಾತ್ಮ ಗಾಂಧಿಯವರ ತತ್ವಗಳು ದೇಶದ ಜನರಿಗೆ ಮಾದರಿಯಾಗಿದ್ದಾ-ರೆ. ಅವರು ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸುವ ಮೂಲಕ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ-ರು. ಗಾಂಧೀಜಿ ಮಹಾನ್ ಚಿಂತಕ. ಸತ್ಯ, ಅಹಿಂಸೆಯ ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ’ ಎಂದು ಲಿಂಗರಾಜು ನುಡಿದರು.

ನಾಲ್ಕು ತತ್ವಗಳು ನಿರಂತರ: ‘ಗಾಂಧೀಜಿ ಅವರ ಸ್ವದೇಶಿ, ಸ್ವರಾಜ್, ಸತ್ಯಾಗ್ರಹ ಹಾಗೂ ಅಹಿಂಸೆಯ ತತ್ವಗಳು ಎಲ್ಲ ಕಾಲಕ್ಕೂ ಪ್ರಸ್ತುತವಾದ ಪರಿಕಲ್ಪನೆ-ಗಳು’ ಎಂದು ವಕೀಲ ಪ್ರೊ.ರವಿವರ್ಮ-ಕುಮಾರ್ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದಲ್ಲಿ ನಡೆದ ಗಾಂಧಿ ಜಯಂತಿಯಲ್ಲಿ ವಕೀಲ ಪ್ರೊ.ರವಿವರ್ಮ ಕುಮಾರ್ ಅವರು ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

‘ಗಾಂಧೀಜಿ ಅವರು ರಾಜಕಾರಣ ಹಾಗೂ ಚಳವಳಿಗಳನ್ನು ಹೊಸ ರೀತಿಯಲ್ಲಿ ವಿವರಿಸಿದರು. ದೈಹಿಕ ಶ್ರಮದ ಸಮುದಾಯವನ್ನು ಭಾರತದ ನಿಜವಾದ ಶ್ರಮಜೀವನದ ಪ್ರತೀಕವೆಂದು ಬಿಂಬಿಸಿದರು. ಭಾರತದ ಚರಕವನ್ನು ಮರುವಿವರಿಸಿದ ಗಾಂಧೀಜಿ, ಭಾರತದ ಹಳ್ಳಿಗಳನ್ನು ಮರುರೂಪಿಸಲು ಯತ್ನಿಸಿದರು. ಗಾಂಧೀಜಿ ಅವರ ಶಿಷ್ಯರಾದ ಲೋಹಿಯಾ ಸಹ ಗಾಂಧಿ ಹಾದಿಯಲ್ಲೇ ಚಳವಳಿ ರಾಜಕಾರಣ ಮಾಡಿದರು. ಜೆ.ಪಿ ಸಂಪೂರ್ಣ ಕ್ರಾಂತಿಯನ್ನು ರೂಪಿಸಿದರು’ ಎಂದರು.

ಕುಲಪತಿ ಪ್ರೊ.ಎಸ್.ಎಂ.ಜಯಕರ ಮಾತನಾಡಿ, ‘ಗಾಂಧೀಜಿ ಅಹಿಂಸೆಯ ಪ್ರತೀಕ. ನಡೆ-ನುಡಿಗಳನ್ನು ಬೆಸೆದ ಮಹಾತ್ಮರು’ ಎಂದು ಬಣ್ಣಿಸಿದರು.

ಚಲನಚಿತ್ರ ನಟ ಅಚ್ಯುತ್ ಕುಮಾರ್ ಮಾತನಾಡಿ, ‘ಸದಾ ನಮ್ಮೊಳಗಿನ ಗಾಂಧಿಯನ್ನು ಹುಡುಕಿಕೊಳ್ಳುತ್ತಿರ-ಬೇಕು ಎಂದರು.

ಸೈಕಲ್, ಬೈಕ್ ಜಾಥಾ: ಕನಕಪುರ ರಸ್ತೆಯ ಮ್ಯಾಗ್ನಿಫಿಕ್ ಪಬ್ಲಿಕ್ ಸ್ಕೂಲ್, ವರ್ಲ್ಡ್ ಪೀಸ್ ಮ್ಯೂಸಿಯಂ ಟ್ರಸ್ಟ್ ಮತ್ತು ಬ್ರೀಥ್ ಎಂಟರ್‌ಟೈನ್‌ಮೆಂಟ್ ಆಶ್ರಯದಲ್ಲಿ ಶಾಂತಿ ದಿನ ಆಚರಣೆ ಮಾಡಲಾಯಿತು. ಶಾಂತಿ ದಿನದ ಅಂಗವಾಗಿ ಸೈಕಲ್ ಮತ್ತು ಬೈಕ್ ಜಾಥಾ, ಗಾಯನ, ನೃತ್ಯ ನಡೆಯಿತು.

ಬೆಳಿಗ್ಗೆ 8.30ಕ್ಕೆ ಲಾಲ್‌ಬಾಗ್ ಮುಖ್ಯ ಪ್ರವೇಶದ್ವಾರದಿಂದ ಬೈಕ್ ಹಾಗೂ ಸೈಕಲ್ ಜಾಥಾ ಆರಂಭವಾಯಿತು. ನಗರದಾದ್ಯಂತ ಸಂಚರಿಸಿ ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಎದುರಿನ ಮ್ಯಾಗ್ನಿಫಿಕ್ ಪಬ್ಲಿಕ್ ಸ್ಕೂಲ್‌ನಲ್ಲಿ ಮುಕ್ತಾಯವಾಯಿತು.

ವರ್ಲ್ಡ್ ಪೀಸ್ ಮ್ಯೂಸಿಯಂ ಸಂಸ್ಥಾಪಕ ಜಾನ್ ದೇವರಾಜ್, ಕಿಶೋರ್ ಜೋಸೆಫ್, ಶಿಕ್ಷಣ ತಜ್ಞ ಮೊಯಿನುದ್ದೀನ್, ಡಾ.ಬಿ.ಎನ್. ಸತ್ಯನಾರಾಯಣ ಇದ್ದರು.

ಪೌರಕಾರ್ಮಿಕರಿಗೆ ಸನ್ಮಾನ

ಬೆಂಗಳೂರು: ಗಾಂಧಿ ಜಯಂತಿ ಹಾಗೂ ಸತ್ಯ ಮತ್ತು ಅಹಿಂಸಾ ಮಹೋತ್ಸವದಲ್ಲಿ ಬಿಬಿಎಂಪಿಯ ಆರು ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸ್ವಚ್ಛತಾ ಕಾರ್ಯದಲ್ಲಿ ಕಾರ್ಯನಿರತರಾದ ಪಶ್ಚಿಮ ವಲಯದ ನಾಗೇಂದ್ರ, ಬೊಮ್ಮನಹಳ್ಳಿ ವಲಯದ ರತ್ನಮ್ಮ, ಆರ್.ಆರ್.ನಗರ ವಲಯ್ ವೀರೇಶ್, ಪೂರ್ವ ವಲಯದ ಜಿ.ರ್. ವರಲಕ್ಷ್ಮೀ, ಮಹದೇವಪುರ ವಲಯದ ಮಹದೇವಪ್ಪ, ದಾಸರಹಳ್ಳಿ ವಲಯದ ಸುಜಾತ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ರಾಜಭವನದ ಗಾಜಿನಮನೆಯಲ್ಲಿ ಹಮ್ಮಿಕೊಂಡಿದ್ದ ‘ಗಾಂಧಿ ಜಯಂತಿ - ಸತ್ಯ ಮತ್ತು ಅಹಿಂಸಾ ಮಹೋತ್ಸವ’ದ ಪ್ರಯುಕ್ತ ನೃತ್ಯ ಹಾಗೂ ಗೀತನಮನ ಕಾರ್ಯಕ್ರಮಕ್ಕೆ ವಸತಿ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು. ರಾಜಭವನ, ಬಿಬಿಎಂಪಿ, ದೂರ ದರ್ಶನ ಮತ್ತು ವಾರ್ತಾ ಇಲಾಖೆ ಸಹಯೋಗದೊಂದಿಗೆ ರಾಜ್ಯದ ಪ್ರಖ್ಯಾತ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ವಿಧಾನಪರಿಷತ್ ಸದಸ್ಯರಾದ ಅ.ದೇವೇಗೌಡ, ನಾಗರಾಜ್ ಯಾದವ್, ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್, ವಿಶೇಷ ಆಯುಕ್ತ ರಂಗಪ್ಪ ಇದ್ದರು.

ಅಗ್ಗದ ಬೆಲೆಗೆ ಜಿಯೊ ಲ್ಯಾಪ್‌ಟಾಪ್?

ನವದೆಹಲಿ (ರಾಯಿಟರ್ಸ್): ರಿಲಯನ್ಸ್ ಜಿಯೊ ಕಂಪನಿಯು ‘ಜಿಯೊಬುಕ್’ ಹೆಸರಿನಲ್ಲಿ ₹ 15 ಸಾವಿರಕ್ಕೆ ಲ್ಯಾಪ್‌ಟಾಪ್ ಬಿಡುಗಡೆ ಮಾಡಲಿದೆ. ಇದರಲ್ಲಿ 4ಜಿ ಸಿಮ್ ಕೂಡ ಇರಲಿದೆ.

ಈ ಲ್ಯಾಪ್‌ಟಾಪ್ ತಯಾರಿಕೆಗೆ ಕಂಪನಿಯು ಕ್ವಾಲ್ಕಾಮ್ ಮತ್ತು ಮೈಕ್ರೊಸಾಫ್ಟ್ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಈ ಲ್ಯಾಪ್‌ಟಾಪ್ ಸರ್ಕಾರಿ ಸಂಸ್ಥೆಗಳಿಗೆ ಮತ್ತು ಶಾಲೆಗಳಿಗೆ ಈ ತಿಂಗಳಿನಿಂದಲೇ ಲಭ್ಯವಾಗಲಿದೆ. ಇತರರಿಗೆ ಇನ್ನು ಮೂರು ತಿಂಗಳಲ್ಲಿ ಲಭ್ಯವಾಗಲಿದೆ. ಮುಂದಿನ ದಿನಗಳಲ್ಲಿ 5ಜಿ ಆವೃತ್ತಿಯೂ ಸಿಗಲಿದೆ.

ಜಿಯೊಬುಕ್ ತಯಾರಿಕೆ ಭಾರತ ದಲ್ಲಿಯೇ ಆಗಲಿದೆ. ‘ಈ ಲ್ಯಾಪ್‌ಟಾಪ್ ಬಿಡುಗಡೆ ಆದ ನಂತರದಲ್ಲಿ ದೇಶದ ಲ್ಯಾಪ್‌ಟಾಪ್ ಮಾರುಕಟ್ಟೆಯು ಶೇಕಡ 15ರಷ್ಟು ವಿಸ್ತರಿಸಬಹುದು’ ಎಂದು ಕೌಂಟರ್‌ಪಾಯಿಂಟ್ ಸಂಸ್ಥೆಯ ವಿಶ್ಲೇಷಕ ತರುಣ್ ಪಾಠಕ್ ಹೇಳಿದ್ದಾರೆ.

ಜಿಯೊ ಒಎಸ್ ಕಾರ್ಯಾಚರಣೆ ವ್ಯವಸ್ಥೆ ಇದರಲ್ಲಿ ಇರಲಿದ್ದು, ಜಿಯೊ ಸ್ಟೋರ್‌ನಿಂದ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

ನಿಧನ ಸುದ್ದಿ

ಸುಜ್ಲಾನ್ ಎನರ್ಜಿ ಸಂಸ್ಥಾಪಕ ತುಳಸಿ ತಂತಿ

ನವದೆಹಲಿ (ಪಿಟಿಐ): ಸುಜ್ಲಾನ್ ಎನರ್ಜಿ ಕಂಪನಿಯ ಸಂಸ್ಥಾಪಕ ತುಳಸಿ ತಂತಿ (64) ಅವರು ಹೃದಯ ಸ್ತಂಭನದಿಂದಾಗಿ ಶನಿವಾರ ಸಂಜೆ ಮೃತಪಟ್ಟರು ಎಂದು ಕಂಪನಿ ತಿಳಿಸಿದೆ. ತಂತಿ ಅವರು ‘ಭಾರತದ ಪವನ ಮಾನವ’ ಎಂದೇ ಖ್ಯಾತರಾಗಿದ್ದರು.

ಪವನ ವಿದ್ಯುತ್ ಉತ್ಪಾದನಾ ಉದ್ಯಮ ಕ್ಷೇತ್ರದಲ್ಲಿ ಅವರು ಮುಂಚೂಣಿ ಉದ್ಯಮಿಗಳಲ್ಲಿ ಒಬ್ಬರಾಗಿದ್ದರು. ನವೀಕರಿಸಬಹು-ದಾದ ಇಂಧನ ವಲಯಗಳಲ್ಲಿನ ವಹಿವಾಟಿನಲ್ಲಿ ಇರುವ ಅವಕಾ-ಶಗಳನ್ನು ಅವರು 1995ರಲ್ಲಿಯೇ ಕಂಡುಕೊಂಡಿದ್ದರು.

ತಂತಿ ಅವರ ನಾಯಕತ್ವದಲ್ಲಿ ಸುಜ್ಲಾನ್ ಎನರ್ಜಿ ಕಂಪನಿಯು ದೇಶದ ಅತಿದೊಡ್ಡ ಪವನ ವಿದ್ಯುತ್ ಉತ್ಪಾದನಾ ಕಂಪನಿಯಾಗಿ ಬೆಳೆಯಿತು. ಕಂಪನಿಯು ದೇಶದ ಪವನ ವಿದ್ಯುತ್ ಉತ್ಪಾದನಾ ಮಾರುಕಟ್ಟೆಯಲ್ಲಿ ಶೇಕಡ 33ರಷ್ಟು ಪಾಲು ಹೊಂದಿದೆ, 17 ದೇಶಗಳಲ್ಲಿ ವಹಿವಾಟು ಹೊಂದಿದೆ. ತಂತಿ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ಸೂಚಿಸಿದ್ದಾರೆ.

‘ಸ್ವಚ್ಛತಾ ಹಿ ಸೇವಾ’: ಹಾವೇರಿ ರಾಜ್ಯದಲ್ಲೇ ಪ್ರಥಮ

ಹಾವೇರಿ: ‘ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್‌ಗೆ ಹೆಚ್ಚಿನ ಸಾರ್ವಜನಿಕ ಸಹಭಾಗಿತ್ವವನ್ನು ಸೃಷ್ಟಿಸುವ ‘ಸ್ವಚ್ಛತಾ ಹಿ ಸೇವಾ’ ಅಭಿಯಾನದಲ್ಲಿ ಹಾವೇರಿ ಜಿಲ್ಲೆಯು ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದು, ಪ್ರಶಸ್ತಿಗೆ ಭಾಜನವಾಗಿದೆ.

ನವದೆಹಲಿ ರಾಷ್ಟ್ರಪತಿ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮ-ದಲ್ಲಿ ಪ್ರಶಸ್ತಿಯನ್ನು ಹಾವೇರಿ ಜಿಲ್ಲಾ ಪಂಚಾಯ್ತಿ ಸಿಇಒ ಮಹ್ಮದ ರೋಷನ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅತಿಕ್. ಎಲ್. ಕೆ. ಅವರು ಭಾನುವಾರ ಪ್ರಶಸ್ತಿ ಸ್ವೀಕರಿಸಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



‘ದುರಸ್ತಿ ಕಾಣದ ರಸ್ತೆಗಳು’

ಅಂದ್ರಳ್ಳಿಯ ಶ್ರೀಚಕ್ರಾನಗರ ಬಡಾವಣೆಯು ದೊಡ್ಡಬಿದರುಕಲ್ಲು ಬಿಬಿಎಂಪಿ ವಾರ್ಡ್‌ಗೆ ಸೇರಿದೆ. ಈ ಬಡಾವಣೆಯ ದೊಡ್ಡ ಮೋರಿ ಕೊನೆಯ ರಸ್ತೆ, ಗೋಲ್ಡನ್ ವ್ಯಾಲ್ಯೂಸ್ ಸ್ಕೂಲ್ ಸಮೀಪದ ರಸ್ತೆಗಳು ಕಳೆದ ಮೂರ್ನಾಲ್ಕು ವರ್ಷಗಳಿಂದ ಡಾಂಬರು ಮತ್ತು ದುರಸ್ತಿ ಕಾಣದೆ ಗುಂಡಿಗಳು ಬಿದ್ದಿವೆ. ಬೀದಿ ದೀಪಗಳಾಗಲಿ, ಚರಂಡಿ ಮತ್ತು ನೀರಿನ ವ್ಯವಸ್ಥೆಯೇ ಸರಿಯಾಗಿಲ್ಲ. ಮಳೆಗಾಲದಲ್ಲಿ ಕೆಸರು ಗದ್ದೆಯಂತಾಗುವ ಈ ರಸ್ತೆಗಳಲ್ಲಿ ಜನರ ಓಡಾಟವಿರಲಿ, ವಾಹನ ಸಂಚಾರವೇ ದುಸ್ತರವಾಗಿದೆ. ಶಾಲಾ ಮಕ್ಕಳು, ಹಿರಿಯ ನಾಗರಿಕರು ಕೆಸರಿನಲ್ಲಿ ಜಾರಿಬಿದ್ದು ತೊಂದರೆ ಅನುಭವಿಸುತ್ತಿದ್ದಾರೆ. ಇನ್ನು, ರಾತ್ರಿಯ ವೇಳೆ ಮಹಿಳೆಯರು, ಮಕ್ಕಳು ರಸ್ತೆಗಳಲ್ಲಿ ಸಂಚರಿಸುವುದು ಕಷ್ಟವಾಗಿದೆ. ಈ ಬಗ್ಗೆ ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಡಾವಣೆಯಲ್ಲಿ ರಸ್ತೆ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಶ್ರೀನಿವಾಸ್ ಮತ್ತು ಸ್ಥಳೀಯ ನಿವಾಸಿಗಳು, ಶ್ರೀಚಕ್ರಾನಗರ ಬಡಾವಣೆ

‘ರಸ್ತೆ ಸರಿಪಡಿಸಿ’

ಕಾಟನ್ ಪೇಟೆ ಮುಖ್ಯರಸ್ತೆಯ ಸಿಸಿಬಿ ಕಚೇರಿ ಮುಂಭಾಗದ ರಸ್ತೆ ಹದಗೆಟ್ಟಿದೆ. ರಸ್ತೆ ದುರಸ್ತಿ ಮಾಡಬೇಕಾದ ಅಧಿಕಾರಿಗಳು ನಿದ್ರಾವಸ್ಥೆಗೆ ಜಾರಿದ್ದಾರೆ. ರಸ್ತೆ ಹದಗೆಟ್ಟಿರುವುದರಿಂದ ಸಂಚಾರ ಅಸ್ತವ್ಯಸ್ತವಾಗುತ್ತಿದ್ದು, ವಾಹನ ಸವಾರರು ಪರದಾಡಬೇಕಾಗಿದೆ. ಶೀಘ್ರ ಹದಗೆಟ್ಟಿರುವ ರಸ್ತೆಯನ್ನು ದುರಸ್ತಿಗೊಳಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

‘ಮೇಲ್ಸೇತುವೆ ಮೇಲೆ ಗುಂಡಿ ಸಂಚಾರಕ್ಕೆ ಕುತ್ತು’

ಸುಮನಹಳ್ಳಿ ಮೇಲ್ಸೇತುವೆ ರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದು 15 ದಿನಗಳೇ ಕಳೆದಿವೆ. ಪ್ರತಿನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ಸಾವಿರಾರು ವಾಹನಗಳು ಆಮೆಗತಿಯಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಪ್ರಯಾಣಿಕರಿಗೆ ಬೇರೆ ಮಾರ್ಗವೂ ಇಲ್ಲ. ಇದರಿಂದ, ನಿತ್ಯ ತಡವಾಗಿ ತಮ್ಮ ಕಚೇರಿಗಳಿಗೆ ತಲುಪುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ತ್ವರಿತವಾಗಿ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು.

ಬಾಬುರೆಡ್ಡಿ.ಎನ್., ವಾಹನ ಸವಾರ



‘ಬೆಸ್ಕಾಂ, ಬಿಬಿಎಂಪಿಗೆ ಚೆಲ್ಲಾಟ, ನೀರಿಗೆ ಪರದಾಟ’

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ 139ರ ನ್ಯೂ ತರಗು ಪೇಟೆಯ ಸೀತಾಪತಿ ಅಗ್ರಹಾರದಲ್ಲಿ ಕಳೆದ ಮೂರು ತಿಂಗಳಿಂದ ಕೊಳವೆಬಾವಿಯಿಂದ ನೀರು ಪೂರೈಕೆಯಾಗುತ್ತಿಲ್ಲ. ಕೊಳವೆಬಾವಿಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಬೆಸ್ಕಾಂ ಸಿಬ್ಬಂದಿ ಕಡಿತಗೊಳಿಸಿದ್ದಾರೆ. ಕಾರಣ ಕೇಳಿದರೆ ಬಿಬಿಎಂಪಿ ಅಧಿಕಾರಿಗಳಿಂದ ಪತ್ರ ತರಲು ಹೇಳುತ್ತಿದ್ದಾರೆ. ಈ ಸಂಬಂಧ ಬಿಬಿಎಂಪಿ ಅಧಿಕಾರಿಗಳು ಪತ್ರ ನೀಡಲು ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ. ಎರಡು ಇಲಾಖೆಗಳ ಶೀತಲ ಸಮರದಲ್ಲಿ ಸ್ಥಳೀಯರು ನೀರಿಗಾಗಿ ಪರದಾಡುವಂತಾಗಿದೆ. ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಪ್ರಭಾಕರ್ ಎಸ್, ಚಾಮರಾಜಪೇಟೆ

‘ರಸ್ತೆಗೆ ಅಡ್ಡವಾಗಿರುವ ಮರ ತೆರವುಗೊಳಿಸಿ’

ಬಿಬಿಎಂಪಿ ವ್ಯಾಪ್ತಿಯ ವಾರ್ಡ್ ನಂ.105 ಎಂ. ಸಿ. ಬಡಾವಣೆಯ ಒಂದನೇ ಮುಖ್ಯ ರಸ್ತೆಯ ಗೀತಾಂಜಲಿ ಸಮುಚ್ಚಯದ ಎದುರಿನ ಮರವೊಂದು ರಸ್ತೆಗೆ ಅಡ್ಡವಾಗಿ ಬಾಗಿದೆ. ಇದರಿಂದ ಬಸ್, ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಅನೇಕ ಬಾರಿ ವಾಹನಗಳು ಮರಕ್ಕೆ ಸಿಲುಕಿಕೊಂಡ ಘಟನೆಗಳು ನಡೆದಿವೆ. ಗಾಳಿ, ಮಳೆಗೂ ಮರ ಬೀಳುವ ಸಾಧ್ಯತೆ ಇದ್ದು, ಹೆಚ್ಚಿನ ಅನಾಹುತ ಸಂಭವಿಸುವ ಮುನ್ನ ಸಂಬಂಧ ಪಟ್ಟ ಅಧಿಕಾರಿಗಳು ಈ ಮರವನ್ನು ತೆರವುಗೊಳಿಸಿಬೇಕು.

ಕೆ. ಎಸ್. ಕುಮಾರಸ್ವಾಮಿ, ಎಂ. ಸಿ. ಬಡಾವಣೆಯ ನಿವಾಸಿ

ನಕ್ಷೆ ಉಲ್ಲಂಘನೆ: ಕ್ರಮ ಕೈಗೊಳ್ಳದ ಬಿಬಿಎಂಪಿ

ಮಲ್ಲೇಶ್ವರ 4ನೇ ಮುಖ್ಯರಸ್ತೆಯಲ್ಲಿ ನಂ. 81ರಲ್ಲಿ ನೆಲ ಮತ್ತು ಮೂರು ಅಂತಸ್ತಿನ ಕಟ್ಟಡವನ್ನು ನಕ್ಷೆಯನ್ನು ಉಲ್ಲಂಘಿಸಿ ಕಟ್ಟಲಾಗುತ್ತಿದೆ. ಈ ಬಗ್ಗೆ ದೂರು ನೀಡಿ ಆರು ತಿಂಗಳಾದರೂ ಬಿಬಿಎಂಪಿ ಕೇವಲ ಪತ್ರಗಳನ್ನು ಕಳುಹಿಸಿ ಎಚ್ಚರಿಸುತ್ತಿದೆ. ಆರು ತಿಂಗಳಲ್ಲಿ ಕಟ್ಟಡ ಸಾಕಷ್ಟು ನಿರ್ಮಾಣವಾಗಿದೆ. ನಾಲ್ಕನೇ ಅಂತಸ್ತಿನಲ್ಲಿ ‘ಪೆಂಟ್ ಹೌಸ್’ಗಳ ಮಾದರಿ ನಿರ್ಮಾಣವೂ ನಡೆಯುತ್ತಿದೆ. ಬಿಬಿಎಂಪಿ ಮಲ್ಲೇಶ್ವರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಈ ಬಗ್ಗೆ ಮಾರ್ಚ್ 7ರಂದು ಲಿಖಿತ ದೂರು ನೀಡಲಾಗಿದೆ. ಏ.5 ಹಾಗೂ 22ರಂದು ಕಟ್ಟಡ ಮಾಲೀಕ ವಿನಯ್ ಅವರಿಗೆ ’ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿದ್ದೀರಿ. ಏಳು ದಿನಗಳೊಂದಿಗೆ ದಾಖಲೆ ಸಹಿತ ವಿವರಣೆ ನೀಡಿ’ ಎಂದು ನೋಟಿಸ್ ನೀಡಿದ್ದಾರೆ. ಆದರೆ ಈವರೆಗೆ ಯಾವುದೇ ಕ್ರಮ ಆಗಿಲ್ಲ. ಬಿಬಿಎಂಪಿ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಶ್ರೀಕೃಷ್ಣ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED SOCIAL and PE TEACHER for High School. Contact: ROYAL PUBLIC SCHOOL. Jnanabharathi. Phone: 8867569333

Walk-in

HIRING for Store Manager, Asst. Store Manager, Sales Executive, Watch Technician and Cashier for Just In Time, Contact- 9900445787, E-Mail- blr@justintime.in

REAL ESTATE SELLING

Sites

Vidyaranyapura

VILLA PLOTS for Sale in Premium Res Layout (BBMP Limits) at Vidyaranyapura Blr Ready for Construction and Bank Loans Available :9901833455/ 9686300772

CONNECT

ಪಂಚೆಗಳು
RAMRAJ
UATHAYAM
MINISTER WHITE®
DHOTIES, TOWELS & other Items
PRAKASH Corporation
Ph : 080 42156845
186, Prem Plaza, Chickpet
Bangalore - 560 053

PUBLIC NOTICE

PUBLIC NOTICE

The General public are hereby notified that my client is proposing to develop and sell the property described in the Schedule herein on Joint Development basis with its owners SRI. P.C NATARAJ S/o late Sri P.N Chellappa Setty, SMT P. S NARMADA W/o Late P.C Sanath Kumar, SMT P. S RAJALAKSHMI W/o Late P.C Srinivas, SMT N.K RADHA CHETTY D/o Late P.N Chellappa Setty and SMT S.G. NIRMALA DEVI D/o Late P.N Chellappa Setty. Any person or persons objecting for the proposed development and sale or ascertaining any right, title, Interest or claim /charge/lien over the Schedule Property or any part thereof, and in any manner whatsoever against the Schedule Property based on the documents pertaining to the Schedule Property or otherwise has any lawful objection for the development of the Schedule Property should write to the undersigned within Ten Days from the date of issuance of this notice with all documentary proof on which they are basing and ascertaining their
rights with regard to the Schedule Property or any part thereof and objections and/or claims received thereafter will not be binding on my client and my client will proceed to develop and sell the below mentioned property by entering into Joint Development Agreement with the owners as if there are no claimants/objections with regard to the Schedule Property.

SCHEDULE PROPERTY

ALL THAT PIECE AND PARCEL of the Property bearing Sy No 6 (Old Sy No 6/2), measuring 70546 Square Feet, converted vide Official Memorandum bearing No. ALN:S.R(E)7:2005-06, dated: 19.05.2005, issued by the Deputy Commissioner, Bangalore District situated at Vijinapura Village, K.R Puram Hobli, Bangalore East Taluk, Bangalore Urban District and bounded as follows:

East by : Remaining portion in Sy No 6 belonging to Kadhi board; West by : Channasandra Road; North by : Land bearing Sy No 8; South by : Road.

ROOPA SHETTY Advocate
Lex Situs, No.484, Lakshmi Arcade, 1st Floor, 17th Cross, 27th Main Road, HSR Layout, Sector 2,Bangalore - 560102.
Phone: 080-22583563; Email: info@lexsitus.com

EDUCATIONAL

Admission

DIRECT FINAL Year Admission: LLB (Can Practice,No Age Limit) BTech/Diploma/MBA/MCA MSc/BCA/BBA/BSc/BCom DPharm/BPharm/BAMS BNYS. Govt Recognised courses. Asha Academy, Bangalore. Ph:9448460103/ 7676477541

PERSONAL

Change of Name

SHELKE RAJENDRA CHANGDEV, Father/o 14876178F SEP, SHELKE SHARAD RAJENDRA, Vill- Thangaon, Yeola, Nashik Maharashtra, changed name SHELKE RAJENDRA CHANGDEV to RAJENDRA CHANGDEV SHELKE, 29/09/2022, Notary K.V. Mani, Bangalore

CHANDRAKALA MOTHER/O 14876178F SEP, SHELKE SHARAD RAJENDRA, Vill- Thangaon, Yeola, Nashik, Maharashtra, changed name CHANDRAKALA to CHANDRAKALA RAJENDRA SHELKE, 29/09/2022, Notary K.V. Mani, Bangalore

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶಾಲೆ ಬಳಿ ದಟ್ಟಣೆ: ಜನರಿಗೆ ನಿತ್ಯ ಬವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ಶಾಲಾ ವಲಯದ ರಸ್ತೆಗಳಲ್ಲಿ ನಿತ್ಯವೂ ಉಂಟಾಗುತ್ತಿರುವ ವಾಹನಗಳ ದಟ್ಟಣೆಯಿಂದ ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ. ಈ ವಿಷಯದ ಮೇಲೆ ಸೆಪ್ಟೆಂಬರ್ 21ರಂದು 'ಪ್ರಜಾವಾಣಿ'ಯು 'ಶಾಲಾ ವಲಯ: ದಟ್ಟಣೆ ತಾಪತ್ರಯ' ಎನ್ನುವ ವರದಿಯ ಮೂಲಕ ಬೆಳಕು ಚೆಲ್ಲಿತ್ತು.

ಈ ಸಮಸ್ಯೆಯನ್ನು ನಿತ್ಯ ಅನುಭವಿಸುತ್ತಿರುವ ಕೆಲವು ನಾಗರಿಕರನ್ನು ಪತ್ರಿಕೆಯು ಮಾತನಾಡಿಸಿತು. ಪರಿಹಾರ ಸೂಚಿಸುವಂತೆ ಆಗ್ರಹಿಸಿ ಶಾಲಾ ಆಡಳಿತ ಮಂಡಳಿ ಹಾಗೂ ಸಂಚಾರ ಪೊಲೀಸರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲವೆಂದು ಜನರು ದೂರುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.

ಶಾಲೆ ಆರಂಭವಾಗುವ ಹಾಗೂ ಬಿಡುವ ಸಮಯದಲ್ಲಿ ರಸ್ತೆಗಳ ಮೇಲೆಯೇ ಪೋಷಕರು ಹಾಗೂ ಇತರರು ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಇದರಿಂದಾಗಿ ಎಲ್ಲ ಪ್ರಕಾರದ ವಾಹನಗಳ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಅರ್ಧ ಕಿ.ಮೀ ದೂರದ ರಸ್ತೆ ದಾಟಲು 15 ನಿಮಿಷಕ್ಕೂ ಹೆಚ್ಚು ಸಮಯ ತೆಗೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿರುವುದಾಗಿ ಜನರು ಹೇಳುತ್ತಿದ್ದಾರೆ.

ನಗರದ ರೆಸಿಡೆನ್ಸಿ ರಸ್ತೆಯಲ್ಲಿನ ವಾಹನ ದಟ್ಟಣೆ —ಪ್ರಜಾವಾಣಿ ಚಿತ್ರ/ ರಂಜು ಪಿ.

ನಿಮ್ಮಲ್ಲೂ ಈ ಸಮಸ್ಯೆ ಇದೆಯೇ?

ಶಾಲಾ ಪ್ರದೇಶಗಳಲ್ಲಿ ವಾಹನ ದಟ್ಟಣೆ ಹಾಗೂ ಪಾರ್ಕಿಂಗ್ ಕಿರಿಕಿರಿಯನ್ನು ನೀವೂ ಅನುಭವಿಸುತ್ತಿದ್ದೀರಾ? ಹಾಗಿದ್ದರೆ ನಿಮ್ಮ ಸಮಸ್ಯೆಯ ಸ್ವರೂಪವನ್ನು ಬರೆದು ಕಳುಹಿಸಿ. ಅದಕ್ಕೆ ಕ್ರಿಯಾತ್ಮಕ ಪರಿಹಾರವಿದ್ದಲ್ಲಿ ಅದನ್ನೂ ಸೂಚಿಸಿ. ಆಯ್ದ ಬರಹಗಳನ್ನು 'ಪ್ರಜಾವಾಣಿ'ಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಬರಹ 50 ಪದಗಳ ಮಿತಿಯಲ್ಲಿರಲಿ. ಯಾವ ಶಾಲೆಯ ಬಳಿ ಸಮಸ್ಯೆ ಇದೆ ಎನ್ನುವುದನ್ನು ಸ್ಪಷ್ಟವಾಗಿ ನಮೂದಿಸಿ. ನಿಮ್ಮ ಹೆಸರು, ಪೂರ್ಣ ವಿಳಾಸವೂ ಇರಲಿ.

ವಾಟ್ಸ್ಆ್ಯಪ್ ನಂಬರ್
9606038256

ಶಾಲಾ ವಲಯದ ವಾಹನಗಳ ದಟ್ಟಣೆ ಸಮಸ್ಯೆ ಬಗ್ಗೆ ಹಲವರು ಅಳಲು ತೋಡಿಕೊಂಡಿದ್ದಾರೆ. ಆಯ್ದ ಕೆಲವು ಸಾರ್ವಜನಿಕರ ಅಭಿಪ್ರಾಯಗಳು ಹೀಗಿವೆ...

ಶಾಲಾ ಮಕ್ಕಳನ್ನು ಕರೆತರುವ ಪೋಷಕರು ಹಾಗೂ ಖಾಸಗಿ ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಈ ಸ್ಥಳದಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಬೇಕು. ಆಡಳಿತ ಮಂಡಳಿಯವರು ಕಡಿಮೆ ಪಾರ್ಕಿಂಗ್ ಶುಲ್ಕ ನಿಗದಿಪಡಿಸಿ ಮೈದಾನದಲ್ಲಿ ವಾಹನ ನಿಲ್ಲಿಸಲು ಅವಕಾಶ ಕಲ್ಪಿಸಬೇಕು.

ಮುನಿಸ್ವಾಮಿ, ಚಾಲಕ, ವಿಲ್ಸನ್ ಗಾರ್ಡನ್

ಶಾಲೆ ಆರಂಭ ಹಾಗೂ ಬಿಡುವ ಸಮಯದಲ್ಲಿ ಸಾಕಷ್ಟು ದಟ್ಟಣೆ ಉಂಟಾಗುತ್ತಿದೆ. ಶಾಲೆಗಳಿರುವ ರಸ್ತೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಬೇಕು. ಪೋಷಕರು ಹಾಗೂ ಶಾಲೆಗೆ ಸಂಬಂಧಪಟ್ಟ ಎಲ್ಲ ವಾಹನಗಳನ್ನು ಮೈದಾನದೊಳಗೆ ಕಳುಹಿಸಬೇಕು.

ತಮ್ಮೇಗೌಡ, ಸುಬ್ರಹ್ಮಣ್ಯನಗರ, ಖಾಸಗಿ ಕಂಪನಿ ಉದ್ಯೋಗಿ

ಮಕ್ಕಳನ್ನು ಶಾಲೆಗೆ ಕರೆತರುವ ಹಾಗೂ ಕರೆದೊಯ್ಯುವ ಪೋಷಕರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವುದು ಆಡಳಿತ ಮಂಡಳಿ ಜವಾಬ್ದಾರಿ. ಜೊತೆಗೆ ಶಾಲೆ ಬಳಿಯ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು.

ರಸ್ತೆ ಮೇಲೆ ವಾಹನ ನಿಲ್ಲಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು.

ವಿನಯ್, ಮಹದೇವಪುರ, ಕಚೇರಿಯೊಂದರ ಉದ್ಯೋಗಿ

ಹೆಚ್ಚು ದಟ್ಟಣೆ ಆಗುವ ರೆಸಿಡೆನ್ಸಿ ರಸ್ತೆಯ ಮಧ್ಯೆ ವಿಭಜಕ ನಿರ್ಮಿಸಬೇಕು. ಶಾಲೆ ಆರಂಭ ಹಾಗೂ ಬಿಡುವ ವೇಳೆಯಲ್ಲಿ ಶಾಲೆ ಪಕ್ಕದ ರಸ್ತೆಯನ್ನು ಮಕ್ಕಳ ಪೋಷಕರ ವಾಹನಗಳಿಗೆ ಮಾತ್ರ ಮೀಸಲಿಡಬೇಕು. ಇತರೆ ವಾಹನಗಳನ್ನು ಇನ್ನೊಂದು ಬದಿಯ ರಸ್ತೆಯಲ್ಲಿ ಹೋಗಲು ಅವಕಾಶ ಮಾಡಿಕೊಡಬೇಕು

ವಿ. ವೆಂಕಟಸುಬ್ರಹ್ಮಣ್ಯಂ, ಬಾಣಸವಾಡಿ

ಮ್ಯೂಸಿಯಂ ರಸ್ತೆಯ ಸೇಂಟ್ ಜೋಸೆಫ್ ಕಾಲೇಜು ಎದುರಿನ ರಸ್ತೆಯಲ್ಲೂ ವಿಪರೀತ ದಟ್ಟಣೆ ಇದ್ದು, ಈ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಬೇಕು. ರಸ್ತೆ ಮಧ್ಯೆಯೇ ವಾಹನ ನಿಲ್ಲಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಆಸಿಫ್, ಎಚ್‌ಬಿಆರ್ ಲೇಔಟ್, ಚಾಲಕ

ಶಾಲೆ ಬಳಿ ಬರುವ ಪೋಷಕರು ಹಾಗೂ ಇತರರ ವಾಹನಗಳು, ರಸ್ತೆ ಮೇಲೆಯೇ ನಿಲ್ಲಿಸುತ್ತಿರುವುದರಿಂದ ದಟ್ಟಣೆ ಉಂಟಾಗುತ್ತಿದೆ. ಇಂಥ ವಾಹನಗಳನ್ನು ಶಾಲೆಗಳ ಮೈದಾನದೊಳಗೆ ಬಿಡಬೇಕು.

ನೀರಜ್, ಕೆ.ಆರ್.ಪುರ

ವಿಪರೀತ ದಟ್ಟಣೆಗೆ ಶಾಲೆಯ ಆಡಳಿತ ಮಂಡಳಿಗಳೇ ಕಾರಣ. ಪೋಷಕರ ವಾಹನಗಳನ್ನು ಶಾಲೆಯ ಮೈದಾನದೊಳಗೆ ನಿಲ್ಲಿಸಿದರೆ ಮಾತ್ರ ದಟ್ಟಣೆ ಸ್ವಲ್ಪ ಕಡಿಮೆಯಾಗುತ್ತದೆ.

ಲಕ್ಷ್ಮಿ, ಹಳೇ ಏರ್‌ಪೋರ್ಟ್ ರಸ್ತೆ

ದ್ವಿಚಕ್ರ ವಾಹನ, ಕಾರು... ಹೀಗೆ ಸ್ವಂತ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಕರೆತರುವುದನ್ನು ನಿರ್ಬಂಧಿಸಬೇಕು. ಬಸ್ ಹಾಗೂ ಇತರೆ ಸಾರ್ವಜನಿಕ ಸಾರಿಗೆ ಬಳಸುವಂತೆ ಪೋಷಕರಿಗೆ ತಿಳಿ ಹೇಳಬೇಕು

ಸನ್ಮತಿ, ಶಾಂತಿನಗರ

ಶಾಲೆ ಬಳಿಯ ದಟ್ಟಣೆ ಸಮಸ್ಯೆ ಹಲವು ವರ್ಷಗಳಿಂದ ಇದೆ. ಇದು ಬಗೆಹರಿಯದ ಸಮಸ್ಯೆ. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

ಅಹಿಕ್ ಅಹ್ಮದ್, ಆಸ್ಟಿನ್ ಟೌನ್

ಪ್ರತಿಯೊಂದು ಶಾಲೆ ಎದುರಿನ ರಸ್ತೆಗಳನ್ನು ವಿಸ್ತರಣೆ ಮಾಡಬೇಕು. ತಾತ್ಕಾಲಿಕವಾಗಿ ಶಾಲೆ ಆಡಳಿತ ಮಂಡಳಿಯವರು, ಪೋಷಕರ ವಾಹನಗಳಿಗೆ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು.

ಬಾಲಕೃಷ್ಣ, ಶಾಂತಲಾ ನಗರ

ಶಾಲೆ ಎದುರಿನ ರಸ್ತೆಗಳಲ್ಲಿ ಮೇಲ್ಸೇತುವೆ ನಿರ್ಮಿಸುವುದು ಉತ್ತಮ. ದಟ್ಟಣೆ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಬೇಕು.

ಮೊಹಮ್ಮದ್, ಶಾಂತಿನಗರ

ಶಾಲೆ ಆರಂಭ ಹಾಗೂ ಬಿಡುವ ಸಮಯದಲ್ಲಿ ಪೋಷಕರ ವಾಹನಗಳಿಗೆ ರಸ್ತೆಯ ಒಂದು ಬದಿಯಲ್ಲಿ ಪ್ರತ್ಯೇಕ ಲೇನ್ ಮಾಡಬೇಕು.

ಸಂತೋಷ್ ಕೆ.ಜಿ

ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ 'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಮೈಕೊ ಕನ್ನಡ ಬಳಗದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಶೆಟ್ಟಿ, ಮೈಕೊ ನೌಕರರ ಒಕ್ಕೂಟದ ಅಧ್ಯಕ್ಷ ವಿ.ಜೆ.ಕೆ. ನಾಯರ್, ಬಳಗದ ಗೌರವಾಧ್ಯಕ್ಷೆ ಪದ್ಮಿನಿ ನಾಗರಾಜು, ಎಂ. ಪ್ರಕಾಶ ಮೂರ್ತಿ, ಶಿಕ್ಷಣ ತಜ್ಞೆ ಪ್ರತಿಮಾ ಜಗದೀಶ್, ಬಾಷ್ ಕಂಪನಿಯ ಬಿಡದಿ ಘಟಕದ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಎಂ. ಗೋಪಾಲಕೃಷ್ಣ ಜೋಶಿ ಹಾಗೂ ಮೈಕೊ ಕನ್ನಡ ಬಳಗದ ಪದಾಧಿಕಾರಿಗಳು ಇದ್ದಾರೆ

'ಸಾಹಿತ್ಯ ಸಾಧಕರಿಗೆ ರಾಷ್ಟ್ರಕವಿ ಘೋಷಿಸಿ'

ಬೆಂಗಳೂರು: 'ಸರ್ಕಾರವು ಕನ್ನಡ ಸಾಹಿತ್ಯ ಲೋಕದ ಸಾಧಕರನ್ನು ಗುರುತಿಸಿ, ಅವರಿಗೆ ರಾಷ್ಟ್ರಕವಿ ಪುರಸ್ಕಾರ ಘೋಷಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಆಗ್ರಹಿಸಿದರು.

ಮೈಕೊ ಕನ್ನಡ ಬಳಗ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ 'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಿದರು. ಈ ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ.

'ಹಲವು ವರ್ಷಗಳಿಂದ ಸರ್ಕಾರ ರಾಷ್ಟ್ರಕವಿ ಪುರಸ್ಕಾರಕ್ಕೆ ಸಾಧಕರನ್ನು ಆಯ್ಕೆ ಮಾಡಿಲ್ಲ. ಆದ್ದರಿಂದ ಈಗಲಾದರೂ ಸಾಹಿತಿಗಳನ್ನು ಗುರುತಿಸಿ, ಗೌರವಿಸುವ ಕೆಲಸ ಮಾಡಬೇಕು. ಈ ಮೂಲಕ ಕನ್ನಡ ಸಾಹಿತ್ಯದ ಹಿರಿಮೆಯನ್ನು ಎತ್ತಿ ಹಿಡಿಯಬೇಕು. ಎಚ್.ಎಸ್. ವೆಂಕಟೇಶಮೂರ್ತಿ ಅವರು 'ಜ್ಞಾನಪೀಠ ಪ್ರಶಸ್ತಿ'ಗೆ ಅರ್ಹರಾದ ಸಾಹಿತಿ' ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಚ್.ಎಸ್. ವೆಂಕಟೇಶಮೂರ್ತಿ, 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ ಮಾತ್ರ ಸಲ್ಲುವ ಈ ಪ್ರಶಸ್ತಿ ನನಗೆ ನೀಡಿರುವುದು ಅತೀವ ಖುಷಿ ನೀಡಿದೆ. ಕವಿ ಆದವರು ಭಾಷಾ ಸೇವೆಯ ಕೆಲಸ ಮಾಡಬೇಕು. ನಾನು ಸಹ ಕನ್ನಡವನ್ನು ಆರಾಧಿಸಿ, ಸಾಹಿತ್ಯ ಸೃಷ್ಟಿಸುತ್ತಿದ್ದೇನೆ' ಎಂದು ಹೇಳಿದರು.

ಪ್ರತಿವರ್ಷ ರೈತ ಚಳವಳಿ, ಕನ್ನಡ ಚಳವಳಿಕಾರರೊಬ್ಬರಿಗೆ ಶಾಂತವೇರಿ ಗೋಪಾಲಗೌಡರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಜತೆಗೆ ಮೈಕೊ ಕನ್ನಡ ಬಳಗ ಒಪ್ಪಂದ ಮಾಡಿಕೊಂಡಿತು.

ಅಕ್ರಮ ಹುಕ್ಕಾಬಾರ್: ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದಲ್ಲಿ ಅಕ್ರಮವಾಗಿ ತೆರೆದಿದ್ದ ಹುಕ್ಕಾ ಬಾರ್ ಮೇಲೆ ಸಿಸಿಬಿ ಪೊಲೀಸರು ಶನಿವಾರ ದಾಳಿ ಮಾಡಿದ್ದು, ₹ 70 ಸಾವಿರ ಮೌಲ್ಯದ ಪರಿಕರಗಳನ್ನು ಜಪ್ತಿ ಮಾಡಿದ್ದಾರೆ.

'ಇಎಸ್‌ಐ ಆಸ್ಪತ್ರೆ ಸಮೀಪದಲ್ಲಿರುವ ಪರಮಹಂಸ ಯೋಗಾನಂದ ರಸ್ತೆಯ ಕಟ್ಟಡವೊಂದರಲ್ಲಿ 'ವೈಟ್‌ಮಿಸ್ಟ್ ಕೆಫೆ' ಹೆಸರಿನಲ್ಲಿ ಹುಕ್ಕಾ ಬಾರ್ ತೆರೆಯಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಅಕ್ರಮವನ್ನು ಪತ್ತೆ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಹುಕ್ಕಾ ಬಾರ್ ಮಾಲೀಕ, ವ್ಯವಸ್ಥಾಪಕ ಹಾಗೂ ಕ್ಯಾಷಿಯರ್ ವಿರುದ್ಧ ಇಂದಿರಾನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದೂ ತಿಳಿಸಿದರು.

'ಬಗೆ ಬಗೆಯ ಜಾಹೀರಾತು ನೀಡಿ ಯುವಕರನ್ನು ಪ್ರಚೋದಿಸುತ್ತಿದ್ದ ಆರೋಪಿಗಳು, ಅಕ್ರಮವಾಗಿ ಹುಕ್ಕಾ ಮಾರಿ ಹಣ ಸಂಪಾದಿಸುತ್ತಿದ್ದರು. ಇವರ ಕೃತ್ಯದಿಂದಾಗಿ ಯುವಕರು ದಾರಿ ತಪ್ಪುತ್ತಿದ್ದರು' ಎಂದೂ ಸಿಸಿಬಿ ಪೊಲೀಸರು ಹೇಳಿದರು.

ಅಪ್ರಾಪ್ತರಿಗೆ ಮದ್ಯ: ಬಾರ್‌ಗಳ ಮೇಲೆ ಪೊಲೀಸರ ದಾಳಿ

ಬೆಂಗಳೂರು: ಅಪ್ರಾಪ್ತರಿಗೆ ಮದ್ಯ ಮಾರಾಟ ಮಾಡುತ್ತಿದ್ದ ಆರೋಪದಡಿ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮೇಲೆ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ದಾಳಿ ಮಾಡಿದ್ದು, ಅಬಕಾರಿ ಕಾಯ್ದೆ ನಿಯಮ ಉಲ್ಲಂಘಿಸಿದ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಬೋತ್ತೈ, ಐಕಿಗೈ ಹಾಗೂ ಸ್ಕೈ ಬಾರ್ ಮೇಲೆ ಶನಿವಾರ ರಾತ್ರಿ ದಾಳಿ ಮಾಡಲಾಯಿತು. ಬಾರ್ ಮಾಲೀಕರು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪ್ರಾಪ್ತರಿಗೆ ಮದ್ಯ ಮಾರುವುದು ಕಾನೂನು ಬಾಹಿರ. ಇದು ಗೊತ್ತಿದ್ದರೂ ಬಾರ್‌ಗಳಲ್ಲಿ ವಯಸ್ಸಿನ ದಾಖಲೆ ಪರಿಶೀಲನೆ ನಡೆಸದೇ ಅಪ್ರಾಪ್ತರಿಗೆ ಮದ್ಯ ಮಾರಲಾಗುತ್ತಿತ್ತು. ಕೆಲ ಬಾರ್‌ಗಳು ಅವಧಿ ಮೀರಿ ತೆರೆದಿದ್ದವು' ಎಂದೂ ತಿಳಿಸಿದರು.

ಎನ್‌.ಟಿ.ಐ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ, ಸಿಇಒ ಬಂಧನ

ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎನ್.ಟಿ.ಐ ಗೃಹ ನಿರ್ಮಾಣ ಸಹಕಾರ ಸಂಘದ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಿವೇಶನ ಮಾರಿದ್ದ ಆರೋಪದಡಿ, ಸಂಘದ ನಿರ್ದೇಶಕ ಹಾಗೂ ಸಿಇಒ ಅವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಂಚನೆಗೆ ಸಂಬಂಧಪಟ್ಟಂತೆ ಸಂಘದ ಮಾಜಿ ನಿರ್ದೇಶಕ ಎ.ಪಿ. ನಾಣಯ್ಯ ಅವರು ದೂರು ನೀಡಿದ್ದರು. ನಿರ್ದೇಶಕರಾದ ಎಚ್.ಎಂ. ಶೃಗೇಶ್ವರ, ಕೆ.ಎನ್. ರಾಮಕೃಷ್ಣರೆಡ್ಡಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತಾಪ್ ಚಂದ್ ರಾಥೋಡ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಈ ಪೈಕಿ, ರಾಮಕೃಷ್ಣ ಹಾಗೂ ಪ್ರತಾಪ್ ಅವರನ್ನು ಬಂಧಿಸಲಾಗಿದೆ. ಸದ್ಯ ಅವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಘದ ವತಿಯಿಂದ ಕೊಡಿಗೇಹಳ್ಳಿಯಲ್ಲಿ ಎನ್.ಟಿ.ಐ ಲೇಔಟ್ ಅಭಿವೃದ್ಧಿಪಡಿಸಲಾಗಿದೆ. ಈ ಪೈಕಿ ಕೆಲ ನಿವೇಶನಗಳ ನಕ್ಷೆ ಮಂಜೂರಾತಿಗೆ ಬಿಡಿಎ ವತಿಯಿಂದ ಅನುಮೋದನೆ ಪಡೆಯಲಾಗಿದೆ. ಆದರೆ, ಅನುಮೋದನೆ ಪಡೆಯದ ನಕ್ಷೆಯಲ್ಲಿದ್ದ ನಿವೇಶನಗಳನ್ನೇ ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿ ಹಲವರಿಗೆ ಮಾರಿದ್ದಾರೆಂದು ದೂರುದಾರರು ಆರೋಪಿಸಿದ್ದಾರೆ' ಎಂದೂ ತಿಳಿಸಿವೆ.

'ಬಂಧಿತ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಇದುವರೆಗೂ ಎಷ್ಟು ನಿವೇಶನಗಳನ್ನು ಮಾರಿದ್ದಾರೆ? ಯಾರಿಗೆಲ್ಲ ವಂಚನೆ ಮಾಡಿದ್ದಾರೆ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಜಾಮೀನು ಮೇಲೆ ಹೊರಬಂದು ಕಳ್ಳತನ

ಬೆಂಗಳೂರು: ಕಳ್ಳತನ ಹಾಗೂ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗಿದ್ದ ಇಬ್ಬರು ಆರೋಪಿಗಳನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗೋವಿಂದಪುರ ಉಮರ್ ನಗರದ ನಿವಾಸಿ ಸುಹೇಲ್ ಖಾನ್ ಅಲಿಯಾಸ್ ಎಂ.ಡಿ (21) ಹಾಗೂ ನಯಾಜ್ ಪಾಷಾ (20) ಬಂಧಿತರು. ಇವರಿಂದ ₹ 16 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನ, 14 ಮೊಬೈಲ್ ಹಾಗೂ ಕ್ಯಾಮೆರಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸುಹೇಲ್ ಹಾಗೂ ನಯಾಜ್, ಹಲವು ವರ್ಷಗಳಿಂದ ಅಪರಾಧ ಕೃತ್ಯ ಎಸಗುತ್ತಿದ್ದರು. ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿಗಳು, ನೋಂದಣಿ ಫಲಕ ಬದಲಾಯಿಸಿ ಮಾರಿ ಹಣ ಸಂಪಾದಿಸುತ್ತಿದ್ದರು.'

'ವಾಹನ ಕಳ್ಳತನ ಪ್ರಕರಣದಲ್ಲಿ ಗಂಗಮ್ಮನಗುಡಿ ಠಾಣೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದ ಆರೋಪಿಗಳು, ಕೆಲ ತಿಂಗಳು ಜೈಲಿನಲ್ಲಿದ್ದರು. ಜಾಮೀನು ಮೇಲೆ ಹೊರಬಂದು ಕೃತ್ಯ ಮುಂದುವರಿಸಿದ್ದರು. ಕೃತ್ಯದಿಂದ ಬಂದ ಹಣವನ್ನು ಆರೋಪಿಗಳು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದರು. ಹಣ ಸಾಲದಿದ್ದರಿಂದ, ಇತ್ತೀಚೆಗೆ ಸುಲಿಗೆಗೆ ಇಳಿದಿದ್ದರು' ಎಂದು ಪೊಲೀಸರು ತಿಳಿಸಿದರು.

ವಸತಿಗೃಹದಲ್ಲಿ ವಾಸ: ಕಳ್ಳತನ ಮಾಡಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಆರೋಪಿ ರಂಗಪ್ಪ ಅಲಿಯಾಸ್ ರಂಗನಾಥ್ ಎಂಬುವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಂಗಪ್ಪ, ಶಿರಾ ತಾಲ್ಲೂಕಿನ ಗೊಲ್ಲರಹಟ್ಟಿಯಲ್ಲಿ ವಾಸವಿದ್ದ. ಸಹಚರರ ಜೊತೆ ಆಗಾಗ ಬೆಂಗಳೂರಿಗೆ ಬಂದು ಕೃತ್ಯ ಎಸಗಿ ಪರಾರಿಯಾಗುತ್ತಿದ್ದ. ಈತನನ್ನು ಬಂಧಿಸಿ ನಗದು ಜಪ್ತಿ ಮಾಡಲಾಗಿದೆ. ಸದ್ಯ ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶ್ರೀಗಂಧದ ಮರ ಕಳ್ಳತನ ಪ್ರಕರಣದಲ್ಲಿ ರಂಗಪ್ಪ ಜೈಲು ಶಿಕ್ಷೆ ಅನುಭವಿಸಿದ್ದ. ಜೈಲಿನಿಂದ ಬಿಡುಗಡೆಯಾಗಿ ಬಂದ ನಂತರವೂ ಸಹಚರರ ಜೊತೆ ಸೇರಿ ಕಳ್ಳತನ ಮುಂದುವರಿಸಿದ್ದ.'

'ಕಳ್ಳತನಕ್ಕೆಂದು ನಗರಕ್ಕೆ ಬರುತ್ತಿದ್ದ ರಂಗಪ್ಪ ಹಾಗೂ ಸಹಚರರು, ವಸತಿಗೃಹದ ಕೊಠಡಿಯಲ್ಲಿ ಉಳಿದುಕೊಳ್ಳುತ್ತಿದ್ದರು. ಹಲವೆಡೆ ಸುತ್ತಾಡಿ, ಅಂಗಡಿಗಳು ಹಾಗೂ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಬೀಗ ಮುರಿದು ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು. ಮಲ್ಲೇಶ್ವರ, ಕೊಡಿಗೇಹಳ್ಳಿ, ಯಲಹಂಕ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

ಕದ್ದ ಮೊಬೈಲ್ ಮಾರಾಟ: ಆರೋಪಿ ಬಂಧನ

ಬೆಂಗಳೂರು: ನಗರದ ಹಲವೆಡೆ ಕದ್ದಿದ್ದ ಮೊಬೈಲ್‌ಗಳನ್ನು ಮಾರುತ್ತಿದ್ದ ಆರೋಪದಡಿ ರಹೀಮ್ ಪಾಷಾ ಎಂಬುವರನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದಾರೆ.

'ನೀಲಸಂದ್ರದ ಮುನಿಯಲ್ಲಪ್ಪ ಗಾರ್ಡನ್ ನಿವಾಸಿ ರಹೀಮ್ ಪಾಷಾ, ಮೊಬೈಲ್ ಕಳ್ಳತನ ಮಾಡುತ್ತಿದ್ದ ಮಾಹಿತಿ ಇದೆ. ಈತನಿಂದ ₹ 40 ಸಾವಿರ ಮೌಲ್ಯದ 8 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶೇಷಾದ್ರಿಪುರ ಬಳಿಯ ಜಿಎಸ್‌ಬಿ ಜಂಕ್ಷನ್‌ನಲ್ಲಿ ಶನಿವಾರ ಸಂಜೆ ನಿಂತುಕೊಂಡಿದ್ದ ಆರೋಪಿ, ಮೊಬೈಲ್ ಮಾರಾಟಕ್ಕೆ ಯತ್ನಿಸುತ್ತಿದ್ದ. ಕೆಲವರು ವಿಚಾರಿಸಿದಾಗ, ಮೊಬೈಲ್‌ಗಳನ್ನು ತೋರಿಸಿದ್ದ. ಆದರೆ, ಮೊಬೈಲ್ ಖರೀದಿ ಬಗ್ಗೆ ಯಾವುದೇ ರಶೀದಿಗಳು ಆರೋಪಿ ಬಳಿ ಇರಲಿಲ್ಲ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ಮೊಬೈಲ್‌ಗಳ ಬಗ್ಗೆ ಆರೋಪಿ ಯಾವುದೇ ಮಾಹಿತಿ ನೀಡಲಿಲ್ಲ. ಬಳಿಕವೇ ಮೊಬೈಲ್ ಕಳ್ಳತನ ಆರೋಪದಡಿ ಬಂಧಿಸಲಾಯಿತು' ಎಂದೂ ತಿಳಿಸಿವೆ.

ಹಿಂದೂ ಜಾಗರಣ ವೇದಿಕೆ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ದುರ್ಗಾ ದೌಡ್ ಮೆರವಣಿಗೆಯಲ್ಲಿ ಕಾರ್ಯಕರ್ತರು ತಲವಾರು ಹಿಡಿದು ಸಾಗಿದರು

ತಲವಾರು ಪ್ರದರ್ಶನ: ಖಂಡನೆ

ಉಡುಪಿ: ಹಿಂದೂ ಜಾಗರಣ ವೇದಿಕೆ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ದುರ್ಗಾ ದೌಡ್ ಮೆರವಣಿಗೆಯಲ್ಲಿ ಕಾರ್ಯಕರ್ತರು ತಲವಾರು ಹಿಡಿದು ಸಾಗಿರುವುದಕ್ಕೆ ಹಲವು ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿ ಕಾನೂನು ಕ್ರಮಕ್ಕೆ ಒತ್ತಾಯಿಸಿವೆ.

'ದುರ್ಗಾ ದೌಡ್ ಕಾರ್ಯಕ್ರಮದಲ್ಲಿ ತಲವಾರುಗಳ ಪ್ರದರ್ಶನ ಸಂವಿಧಾನ ವಿರೋಧಿ ನಡೆ. ಕಾರ್ಯಕ್ರಮದ ಸಂಘಟಕರು ಹಾಗೂ ತಲವಾರು ಪ್ರದರ್ಶನ ಮಾಡಿದವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಬೇಕು' ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಸುಂದರ್ ಮಾಸ್ತರ್ ಒತ್ತಾಯಿಸಿದ್ದಾರೆ.

'ತಲವಾರು ಝಳಪಿಸಿ ಭಯದ ವಾತಾವರಣ ಸೃಷ್ಟಿಸಿರುವವರ ಮೇಲೆ ಪ್ರಕರಣ ದಾಖಲಿಸಬೇಕು. ಸೌಹಾರ್ದ ಹಾಗೂ ಬಹುತ್ವದ ನೆಲವಾಗಿರುವ ಉಡುಪಿಯನ್ನು ಗೂಂಡಾ ರಾಜ್ಯ ಮಾಡಲು ಹೊರಟಿರುವ ಕೋಮುವಾದಿಗಳ ನಡೆ ಖಂಡನೀಯ' ಎಂದು ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಶ್ಯಾಮರಾಜ್ ಬಿರ್ತಿ ಹೇಳಿದ್ದಾರೆ.

ಹಿಂದೂ ಜಾಗರಣ ವೇದಿಕೆಯ ದುರ್ಗಾ ದೌಡ್ ಮೆರವಣಿಗೆಯಲ್ಲಿ ಸಚಿವ ಸುನಿಲ್ ಕುಮಾರ್, ಶಾಸಕರಾದ ರಘುಪತಿ ಭಟ್, ಲಾಲಾಜಿ ಮೆಂಡನ್, ಸುಕುಮಾರ್ ಶೆಟ್ಟಿ, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಸೇರಿ ಹಲವು ನಾಯಕರು ಭಾಗವಹಿಸಿದ್ದರು.

ಮೊಬೈಲ್‌ಗಾಗಿ ಹಳಿಗೆ ಇಳಿದ ಯುವಕ: ತುಂಡಾದ ಕಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳಿ ಮೇಲೆ ಬಿದ್ದಿದ್ದ ಮೊಬೈಲ್ ಮೇಲೆತ್ತಿಕೊಳ್ಳುವಾಗ ರೈಲು ಹರಿದು ಸಾಬಣ್ಣ (23) ಎಂಬುವರ ಕಾಲು ತುಂಡರಿಸಿದ್ದು, ತೀವ್ರ ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಸಾಬಣ್ಣ (23), ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಎಲ್ಲಿ ವಾಸವಿದ್ದರು ? ಏನು ಕೆಲಸ ಮಾಡುತ್ತಿದ್ದರು ? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

'ಸಾಬಣ್ಣ ಅವರು ಮೊಬೈಲ್ ನೋಡುತ್ತ ಭಾನುವಾರ ಹಳಿ ಪಕ್ಕದಲ್ಲಿ ನಡೆದುಕೊಂಡು ಹೊರಟಿದ್ದರು. ಇದೇ ಸಂದರ್ಭದಲ್ಲಿ ಮೊಬೈಲ್ ಕೈಯಿಂದ ಜಾರಿ ಹಳಿ ಮೇಲೆ ಬಿದ್ದಿತ್ತು. ಅದನ್ನು ಮೇಲೆತ್ತಿಕೊಳ್ಳಲೆಂದು ಸಾಬಣ್ಣ, ಹಳಿಗೆ ಇಳಿದಿದ್ದರು. ಅವಾಗಲೇ ಅತೀ ವೇಗದಲ್ಲಿ ರೈಲು ಬಂದಿತ್ತು. ಹಳಿಯಿಂದ ದಾಟಬೇಕು ಎನ್ನುವಷ್ಟರಲ್ಲೇ ಸಾಬಣ್ಣ ಕಾಲಿನ ಮೇಲೆ ರೈಲು ಹರಿದಿರುವುದು ಪ್ರತ್ಯಕ್ಷದರ್ಶಿಗಳಿಂದ ಗೊತ್ತಾಗಿದೆ' ಎಂದೂ ತಿಳಿಸಿವೆ.

ಮಹದೇವಪುರದಲ್ಲಿ ಕಳ್ಳತನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಚೇತನ್‌ಕುಮಾರ್ (23) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರ ಭೀಮಶಕ್ತಿನಗರದ ನಿವಾಸಿ ಎಸ್. ಚೇತನ್‌ಕುಮಾರ್ (23), 2021ರ ಅಕ್ಟೋಬರ್ 5ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಈತನನ್ನು ಬಂಧಿಸಲಾಗಿದೆ. ₹ 8 ಲಕ್ಷ ಮೌಲ್ಯದ 164 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಮಹದೇವಪುರ ಪೊಲೀಸರು ಬಂಧಿಸಿರುವ ಆರೋಪಿ ಚೇತನ್‌ಕುಮಾರ್ ಹಾಗೂ ಜಪ್ತಿ ಮಾಡಲಾದ ಚಿನ್ನಾಭರಣ

'ಆರೋಪಿ ಚೇತನ್, ಸಹಚರರ ಜೊತೆ ಸೇರಿ ಕಳ್ಳತನ ಮಾಡುತ್ತಿದ್ದ. ಟಿನ್ ಫ್ಯಾಕ್ಟರಿ ಬಳಿ ಬಸ್ ಪ್ರಯಾಣಿಕರೊಬ್ಬರನ್ನು ಸುಲಿಗೆ ಮಾಡಿದ್ದ ಮಾಹಿತಿ ಇದೆ' ಎಂದೂ ತಿಳಿಸಿದರು.

ಅಸಮಾನತೆ: ಆರ್‌ಎಸ್‌ಎಸ್ ಕಳವಳ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಆದಾಯದ ಅಸಮಾನತೆ ಮತ್ತು ನಿರುದ್ಯೋಗದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಬಡತನ ದೊಡ್ಡ ಸವಾಲಾಗಿದೆ ಎಂದು ಹೇಳಿದರು.

ಸ್ವದೇಶಿ ಜಾಗರಣ ಮಂಚ್ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಈ ಸವಾಲು ಎದುರಿಸಲು ಕಳೆದ ಕೆಲ ವರ್ಷಗಳಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. 20 ಕೋಟಿ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂಬುದು ಬೇಸರದ ಸಂಗತಿ. 23 ಕೋಟಿ ಜನರು ದಿನಕ್ಕೆ ₹375 ಕ್ಕಿಂತ ಕಡಿಮೆ ಆದಾಯ ಪಡೆಯುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಅವರ ಜನ್ಮದಿನದ ಅಂಗವಾಗಿ, ಹುಬ್ಬಳ್ಳಿಯ ಗಾಮನಗಟ್ಟಿಯಲ್ಲಿ ಭಾನುವಾರ ಬಿಜೆಪಿ ಹಮ್ಮಿಕೊಂಡಿದ್ದ ಸೇವಾ ಪಾಕ್ಷಿಕ ಕಾರ್ಯಕ್ರಮದಲ್ಲಿ ಶಾಸಕ ಅರವಿಂದ ಬೆಲ್ಲದ ಅವರು ಪೌರ ಕಾರ್ಮಿಕರ ಪಾದಪೂಜೆ ಮಾಡಿದರು

ಮುಂದಿನ ರಾಜಕೀಯ ಬೆಳವಣಿಗೆಗೆ ವೇದಿಕೆ : 'ತಾಲ್ಲೂಕು ಸ್ವಾಭಿಮಾನಿಗಳ ಒಕ್ಕೂಟ' ಅಸ್ತಿತ್ವಕ್ಕೆ

ಹಾನಗಲ್ ಕ್ಷೇತ್ರದಲ್ಲಿ 'ಸ್ವಾಭಿಮಾನ'ದ ಕಹಳೆ

ಪ್ರಜಾವಾಣಿ ವಾರ್ತೆ

ಹಾನಗಲ್ (ಹಾವೇರಿ ಜಿಲ್ಲೆ): ಶಾಸಕ ಸಿ.ಎಂ.ಉದಾಸಿ ನಿಧನದ ಹಿನ್ನೆಲೆಯಲ್ಲಿ ಕಳೆದ ವರ್ಷ ನಡೆದಿದ್ದ ಉಪ ಚುನಾವಣೆಯಲ್ಲಿ ಪ್ರಮುಖ ರಾಷ್ಟ್ರೀಯ ಪಕ್ಷಗಳು ಕ್ಷೇತ್ರದ ಹೊರಗಿನ ಅಭ್ಯರ್ಥಿಗಳಿಗೆ ಮಣೆಹಾಕಿದ್ದವು. ಇದು ತಾಲ್ಲೂಕಿನ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂಬ ಒಳಬೇಗುದಿಯಲ್ಲಿ ಸ್ಥಳೀಯ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹಾಗೂ ಆಮ್‌ಆದ್ಮಿ ಪಾರ್ಟಿಯ ಪ್ರಮುಖ ಮುಖಂಡರು ಒಂದೇ ವೇದಿಕೆಯಲ್ಲಿ ಸೇರಿ 'ತಾಲ್ಲೂಕು ಸ್ವಾಭಿಮಾನಿಗಳ ಒಕ್ಕೂಟ' ವನ್ನು ಅಸ್ತಿತ್ವಕ್ಕೆ ತಂದಿದ್ದಾರೆ.

ಭಾನುವಾರ ಇಲ್ಲಿನ ಬಾಬು ಜಗಜೀವನ್‌ರಾಮ್ ಭವನದಲ್ಲಿ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆಯಲ್ಲಿ ಈ ಒಕ್ಕೂಟವನ್ನು ಘೋಷಿಸಲಾಯಿತು. ಮಾಜಿ ಸಚಿವ, ಕಾಂಗ್ರೆಸ್‌ನ ಮನೋಹರ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವಾಭಿಮಾನದ ಕಹಳೆ ಮೊಳಗಿತು. ಕೂಡಲದ ಗುರು ಮಹೇಶ್ವರ ಸ್ವಾಮೀಜಿ, ಅಕ್ಕಿಆಲೂರ ಮುತ್ತಿನಕಂತಿಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ವಿವಿಧ ಪಕ್ಷಗಳ ಮುಖಂಡರು ಒಂದಾಗಿರುವುದು ಮುಂದಿನ ರಾಜಕೀಯ ಬೆಳವಣಿಗೆಗಳಿಗೆ ವೇದಿಕೆಯಾಗುವ ಲಕ್ಷಣಗಳಿವೆ ಎಂದೇ ಹೇಳಲಾಗುತ್ತಿದೆ.

ಹಾನಗಲ್‌ನಲ್ಲಿ ಭಾನುವಾರ ವಿವಿಧ ಪಕ್ಷಗಳ ಮುಖಂಡರು ಸೇರಿಕೊಂಡು ಗಾಂಧಿ ಜಯಂತಿ ಆಚರಿಸಿದರು. ಇದೇ ವೇಳೆ ಸ್ವಾಭಿಮಾನಿಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿತು.

ಮನೋಹರ ತಹಸೀಲ್ದಾರ್ ಮಾತನಾಡಿ, 'ಈಗ ನಾವು ಸಿಂಹಾವಲೋಕನದ ಹಾದಿಯಲ್ಲಿದ್ದೇವೆ. ಸ್ವಾಭಿಮಾನದ ಕಿಚ್ಚು ಹೆಚ್ಚಬೇಕು' ಎಂದರು.

ಕಾಂಗ್ರೆಸ್‌ನ ಪ್ರಕಾಶಗೌಡ ಪಾಟೀಲ ಮಾತನಾಡಿ, 'ಹಾನಗಲ್ ತಾಲ್ಲೂಕಿನ ಇತಿಹಾಸಕ್ಕೆ ಸ್ವಾಭಿಮಾನದ ಕಳೆ ಕಟ್ಟಬೇಕಾಗಿದೆ. ಒಟ್ಟಾಗಿ ನಮ್ಮತನ ಉಳಿಸಿಕೊಳ್ಳಲು ಕಂಕಣ ಬದ್ಧರಾಗಬೇಕು. ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಯಾರೂ ಸಹಿಸಿಕೊಳ್ಳಬಾರದು' ಎಂದರು.

ಬಿಜೆಪಿ ಮುಖಂಡ ಬಸವರಾಜ ಹಾದಿಮನಿ ಮಾತನಾಡಿ,'ತಾಲ್ಲೂಕಿನ ಅಭಿವೃದ್ಧಿಯ ಉದ್ದೇಶ ಇಟ್ಟುಕೊಂಡು ಸ್ವಾಭಿಮಾನಿಗಳ ಒಕ್ಕೂಟವನ್ನು ಬೆಂಬಲಿಸುತ್ತೇವೆ' ಎಂದರು.

ಕಾಂಗ್ರೆಸ್ ಭ್ರಷ್ಟರ ಪಕ್ಷ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ದೇಶದ್ರೋಹಿಗಳು ಮತ್ತು ಭ್ರಷ್ಟಾಚಾರಿಗಳ ಪಕ್ಷ' ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಹುಲ್ ಗಾಂಧಿಯವರು ಕರ್ನಾಟಕ ಸರ್ಕಾರವನ್ನು ಶೇ 40 ಕಮಿಷನ್ ಸರ್ಕಾರ ಎಂದು ಹೇಳಿದ್ದಾರೆ. 'ಕಬ್ಬಿಣದ ಕಾಲಿನ' ರಾಹುಲ್ ಅವರು ಇದಕ್ಕೆ ಆಧಾರ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ರಾಹುಲ್ ಅವರಿಗೆ ಕೆಲವು ಪ್ರಶ್ನೆಗಳನ್ನೂ ಕೇಳಿದ್ದಾರೆ.

- 'ನಿಮ್ಮ ಕುಟುಂಬದ ಪಕ್ಷ 1947 ರಲ್ಲಿ ದೇಶವನ್ನು ವಿಭಜಿಸಿ ಮುಸ್ಲಿಮರಿಗೆ ಪಾಕಿಸ್ತಾನ ಕೊಟ್ಟಿದ್ದಕ್ಕೆ ಮತ್ತು ಹಿಂದುಗಳಿಗೆ ಹಿಂದೂಸ್ತಾನ ಕೊಡದೇ ಇದ್ದ ಕಾರಣಕ್ಕೆ ಪಾಪದ ಪ್ರಾಯಶ್ಚಿತ ಪಾದಯಾತ್ರೆಯಾ?'
- 'ನಿಮ್ಮ ಒಡೆದು ಹೋಗಿರುವ ಮನಸ್ಸುಗಳಿಂದ ಮತ್ತು ನಿಮ್ಮ ಪಕ್ಷದಿಂದ ಭಾರತವನ್ನು ಜೋಡಿಸಲು ಸಾಧ್ಯವಾ? ಅಖಂಡ ಭಾರತವನ್ನು ತುಂಡು ಮಾಡಿದ ನಿಮ್ಮ ಪಕ್ಷ, ನಿಮ್ಮ ಕುಟುಂಬ 75 ವರ್ಷಗಳ ಬಳಿಕ ಈಗ ಭಾರತ್ ಜೋಡೊ ಮಾಡಲು ಹೊರಟಿದ್ದೀರಿ. ಒಡೆದ ಭಾರತವನ್ನು ನಿಮ್ಮಿಂದ ಜೋಡಿಸಲು ಸಾಧ್ಯವಾ?'
- 'ದೇಶವನ್ನು ಲೂಟಿ ಮಾಡಿದವರು ನಿಮ್ಮ ಪಕ್ಷದವರು ಮತ್ತು ನಿಮ್ಮ ಕುಟುಂಬದವರಲ್ಲವೇ? ನೆಹರೂ ಸಂಪುಟದಿಂದ ಶ್ಯಾಮಪ್ರಸಾದ್ ಮುಖರ್ಜಿ ರಾಜೀನಾಮೆ ನೀಡಿದ್ದು ಏಕೆ? ಅಂಬೇಡ್ಕರ್ ಅವರು ತಾವು ಜೀವಂತ ಇರುವವರೆಗೂ ಕಾಂಗ್ರೆಸ್ ಪಕ್ಷ ಸೇರಲಾರೆ, ಕಾಂಗ್ರೆಸ್ ಎನ್ನುವುದು ಒಂದು ಉರಿಯುವ ಮನೆ ಎಂದಿದ್ದು ಏಕೆ?'
- 'ಕರ್ನಾಟಕದಲ್ಲಿ ನಿಮ್ಮ ಪಕ್ಷದ ಡಿ.ಕೆ.ಶಿವಕುಮಾರ್– ಸಿದ್ದರಾಮಯ್ಯ ಅವರನ್ನು ಜೋಡಿಸಲಾಗದ ನಿಮಗೆ ಭಾರತವನ್ನು ಜೋಡಿಸಲು ಸಾಧ್ಯವೇ? ನೀವು ಕರ್ನಾಟಕವನ್ನು ಜೋಡಿಸಬಲ್ಲಿರಾ?'
- 'ನಿಮಗೆ ಮತ್ತು ನಿಮ್ಮ ಪಕ್ಷಕ್ಕೆ ಭಾರತವನ್ನು ಜೋಡಿಸುವ ಪ್ರಾಮಾಣಿಕ ಉದ್ದೇಶವಿದ್ದರೆ ಮುಂದಿನ ಚುನಾವಣೆಯಲ್ಲಿ ಸಮಾನತೆಯನ್ನು ತರಲು ಹಿಂದು–ಮುಸ್ಲಿಂ ಸಮಾನರು ಎಂಬ ಕಾನೂನೂ ತರುತ್ತೇವೆ ಎಂದು ಘೋಷಣೆ ಮಾಡುವಿರಾ?'

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಹೀಗಿರಲಿ ಪೋಷಕರ ಸಭೆ

ಪೋಷಕರು–ಶಿಕ್ಷಕರ ಸಭೆ, ದೂರುಗಳಿಗಷ್ಟೇ ಸೀಮಿತವಾಗದೇ ಮಗುವಿನ ಸಮಗ್ರ ಕಲಿಕಾ ಪ್ರಕ್ರಿಯೆ ವಿಶ್ಲೇಷಿಸುವ ಹಾಗೂ ಮಗುವಿನ ಮಾನಸಿಕ ಬೆಳವಣಿಗೆ ಕುರಿತು ಚರ್ಚಿಸುವ ವೇದಿಕೆಯಾಗಬೇಕು. ಸಮಸ್ಯೆಗಳಿಗೆ ಪರಿಹಾರ ನೀಡುವ, ತಪ್ಪುಗಳನ್ನು ಸರಿಪಡಿಸಿಕೊಳ್ಳುವ ತಾಣವಾಗಬೇಕು.

ಸದಾಶಿವ್ ಸೊರಟೂರು

ಮಗುವಿನ ಕಲಿಕೆಯಲ್ಲಿ ಕಲಿಸುವವರ ಮತ್ತು ಮಗುವನ್ನು ಪೋಷಿಸುವವರ ಸಹಸಂಬಂಧಗಳು ತುಂಬಾ ಮುಖ್ಯವಾದದ್ದು. ಇವರಿಬ್ಬರೂ ಕೂಡಿಯೇ ಮಗುವಿನ ಶಿಕ್ಷಣದ ತೇರನ್ನು ಎಳೆಯಬೇಕು. ಮಗು ಶಾಲೆಯಲ್ಲಿ ಏನು ಮಾಡುತ್ತಿದೆ? ಏನು ಕಲಿಯುತ್ತಿದೆ? ಎಂಬುದರ ಮಾಹಿತಿ ಪೋಷಕರಿಗೆ ಹಾಗೂ ಮನೆಯಲ್ಲಿ ಮಗು ಎಷ್ಟು ಓದುತ್ತಿದೆ? ಏನು ಓದುತ್ತಿದೆ? ಎದುರಿಸುತ್ತಿರುವ ಸಮಸ್ಯೆಗಳೇನು? ಎಂಬುದರ ಸತತ ಮಾಹಿತಿ ಶಿಕ್ಷಕರಿಗೆ ಬೇಕಾಗುತ್ತದೆ. ಕೇವಲ ಒಳ್ಳೆ ಶಿಕ್ಷಕರಿಂದ ಮಾತ್ರ ಮಗುವಿನ ಶಿಕ್ಷಣ ಅದ್ಭುತವಾಗಲು ಸಾಧ್ಯವಿಲ್ಲ. ಹಾಗೆಯೇ ಬರೀ ಪೋಷಕರಿಂದನೂ ಸಾಧ್ಯವಿಲ್ಲ. ಈ ಇಬ್ಬರ ಸಹಸಂಬಂಧ ಸೂಕ್ತವಾಗಿದ್ದಲ್ಲಿ ನಾವು ಮಕ್ಕಳಿಂದ ಒಂದೊಳ್ಳೆಯ ಕಲಿಕೆಯನ್ನು ನಿರೀಕ್ಷಿಸಬಹುದು. ಪೋಷಕರು ಮತ್ತು ಶಿಕ್ಷಕರು ಮಗುವಿನ ಕಲಿಕೆಯ ಬಂಡಿಯ ಎರಡು ಚಕ್ರಗಳು. ಎರಡೂ ಸಮನಾಗಿ ಚಲಿಸಿದರೆ ಮಾತ್ರ ಮಗುವಿನ ಶಿಕ್ಷಣ ಒಂದು ನೆಲೆ ಸೇರಲು ಸಾಧ್ಯ.

ಈ ಕಾರಣಕ್ಕಾಗಿಯೇ ಶಾಲೆಗಳಲ್ಲಿ ಪೋಷಕರ ಸಭೆ(ಪೇರೆಂಟ್ ಟೀಚರ್ಸ್ ಮೀಟಿಂಗ್) ಆಯೋಜಿಸಲಾಗುತ್ತದೆ ಮತ್ತು ಆಯೋಜಿಸಲೇ ಬೇಕು ಕೂಡ. ಹಾಗಾದರೆ ಪೋಷಕರ ಸಭೆಗಳು ಹೇಗಿರಬೇಕು? ಅಲ್ಲೇನು ಚರ್ಚಿಸಬೇಕು? ಅದರ ರೂಪುರೇಷೆಗಳು ಹೇಗಿರಬೇಕು ಎಂಬುದು ಅತೀ ಮುಖ್ಯ. ಬಂದರು, ಸೇರಿದರು, ಮಾತಾಡಿದರು, ಟೀ ಕುಡಿದರು, ಎದ್ದು ಹೋದರು ಎಂಬಂತಾದರೆ ಪ್ರಯೋಜನವಿಲ್ಲ.

ಒಂದೊಳ್ಳೆ ಪೋಷಕರ ಸಭೆ ಖಂಡಿತ ಉತ್ತಮ ಪರಿಣಾಮ ಬೀರುತ್ತದೆ. ಅದೊಂದು ಆರೋಗ್ಯಯುತ ಶಾಲೆಯ ಲಕ್ಷಣವೂ ಹೌದು. ಈ ಕೆಳಗೆ ಪ್ರಸ್ತಾಪಿಸಲಾದ ವಿಚಾರಗಳನ್ನು ಆಧರಿಸಿ ಪೋಷಕರ ಸಭೆ ನಡೆಸಿದರೆ ಅದರಿಂದ ಒಳ್ಳೆಯ ಪರಿಣಾಮ ನಿರೀಕ್ಷಬಹುದು.

1. ಇದು ದೂರುಗಳ ಸಭೆಯಲ್ಲ..

ಒಂದು ವಿಚಾರವಂತೂ ಸ್ಪಷ್ಟವಿರಬೇಕು. ಪೋಷಕರ ಸಭೆಯನ್ನು ಕರೆಯುವುದು ಪರಸ್ಪರ ದೂರುಗಳನ್ನು ಆರೋಪಿಸುವುದಕ್ಕಲ್ಲ. ಶಿಕ್ಷಕರು ಪೋಷಕರನ್ನು ದೂರುವುದು, ಪೋಷಕರು ಶಿಕ್ಷಕರನ್ನು ದೂರುವುದಲ್ಲ. ಪರಸ್ಪರ ಸಮಸ್ಯೆಗಳ ಚರ್ಚೆಯಾಗಲಿ. ಅದಕ್ಕೂ ಮೊದಲು ಪೋಷಕರು ಮತ್ತು ಶಿಕ್ಷಕರ ಕಡೆಯಿಂದ ಆದ ಒಳ್ಳೆಯ ಕೆಲಸಗಳನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವುದು ಕೂಡ ಆಗಬೇಕು. ಪರಸ್ಪರ ಚರ್ಚಿಸಬೇಕಾದ ವಿಷಯಗಳನ್ನು ಮೊದಲೇ ನಿರ್ಧರಿಸಿ ಮುಂದುವರೆಯಬೇಕು. ಸುಮ್ಮನೆ ಮನಬಂದಂತೆ ಚರ್ಚಿಸಿ ಕಾಲಹರಣ ಮಾಡಬಾರದು.

2. ಸಭೆಯ ಸ್ವರೂಪ ಹೀಗಿರಲಿ..

ಇದು ಮಕ್ಕಳಿಗಾಗಿ ಸೇರಿದ ಸಭೆ. ಸಭೆಯಲ್ಲಿ ಪೋಷಕರ ಜೊತೆ ಮಕ್ಕಳು ಇರಬೇಕೊ, ಬೇಡವೊ ಅನ್ನುವುದು ಒಂದು ಜಿಜ್ಞಾಸೆ. ಪೋಷಕರ ಸಭೆಗೆ ಎರಡು ಅವಧಿಗಳಿರಲಿ. ಮಕ್ಕಳೊಂದಿಗೆ ಮತ್ತು ಮಕ್ಕಳನ್ನು ಹೊರತುಪಡಿಸಿ. ಮಕ್ಕಳ ಮುಂದೆ ಪೋಷಕರನ್ನು ನಿಲ್ಲಿಸಿ ದೂರುವುದು, ಶಿಕ್ಷಕರನ್ನು ದೂರುವುದು ಮಾಡಬಾರದು. ಪೋಷಕರ ಮುಂದೆ ಮಕ್ಕಳ ಸಮಸ್ಯೆ ಆಲಿಸಿ. ಅವರ ಕಲಿಕೆಯನ್ನು ಗೌರವಿಸಿ, ಒಂದು ಪ್ರೋತ್ಸಾಹ ಕೊಡಿ. ಪೋಷಕರ ಮುಂದೆಯೇ ಮಗುವಿಗೆ ಹೇಳಬೇಕಾದ ಮಾತು ತಿಳಿಸಿ. ಪೋಷಕರು ಶಿಕ್ಷಕರಿಗೆ ಹೇಳಬೇಕಾದ ಮಾತುಗಳಿದ್ದರೆ ಹೇಳಿ. ಮಕ್ಕಳು ಇಲ್ಲದಿರುವ ಅವಧಿಯಲ್ಲಿ ಹಣಕಾಸಿನ ಚರ್ಚೆ(ಶಾಲಾ ಶುಲ್ಕ, ವ್ಯಾನ್ ಫೀಸು.. ಇತ್ಯಾದಿ), ಮಗು ಎದುರಿಸುತ್ತಿರುವ ಮಾನಸಿಕ ಸಮಸ್ಯೆ, ಮಗುವಿನ ಅಡ್ಡ ವರ್ತನೆಗಳು ಇಂತವುಗಳನ್ನು ಚರ್ಚಿಸಿ. ಇಡೀ ಸಭೆಯಲ್ಲಿ ಚರ್ಚಿಸಲು ಸಾಧ್ಯವಾಗದ ಸೂಕ್ಷ್ಮವಿಚಾರಗಳನ್ನು ಆಯಾ ಪೋಷಕರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಿ.

3. ಪೋಷಕರ ಸಭೆಯಲ್ಲಿ ಉಪನ್ಯಾಸ

ಬರೀ ಸಮಸ್ಯೆಗಳನ್ನು ಚರ್ಚಿಸಿ ಎದ್ದು ಹೋಗುವುದಲ್ಲ. ಪ್ರತಿ ಸಭೆಯಲ್ಲೂ ಮಗುವಿನ ಪಾಲನೆಗೆ ಸಂಬಂಧಿಸಿದಂತೆ ತಿಳಿವಳಿಕೆಗಾಗಿ ಪೋಷಕರಿಗೆ ಒಂದಾದರೂ ಉಪನ್ಯಾಸ ಏರ್ಪಡಿಸುವುದು ಸೂಕ್ತ. ಎಲ್ಲಾ ಪೋಷಕರಿಗೆ ಎಲ್ಲವೂ ಗೊತ್ತಿರುವುದಿಲ್ಲ. ಮಗುವಿನ ಆರೋಗ್ಯ, ಪಾಲಕರು ಮಗುವಿನ ಕಲಿಕೆ ಹೇಗೆ ಸಹಕರಿಸಬೇಕು, ಮಗುವಿನ ಮಾನಸಿಕ ತುಮುಲಗಳು, ಬೆಳೆಯುವ ಮಕ್ಕಳ ಬಗ್ಗೆ ಆಹಾರ ಇತ್ಯಾದಿ ಕುರಿತು ತೆಗೆದುಕೊಳ್ಳಬೇಕಾದ ಮಾಹಿತಿ ಇಂತಹ ಹತ್ತೆಂಟು ವಿಚಾರಗಳ ಬಗ್ಗೆ ಪೋಷಕರಿಗೆ ಅರಿವು ಮೂಡುವಂತೆ ಮಾಡಬಹುದು.

4. ನೆನಪಿರಲಿ, ಇದು ಹೆಚ್ಚುಗಾರಿಕೆಯ ಸಭೆಯಲ್ಲ

ಸಭೆಗೆ ಬರುವವರು ಕೆಲವೊಮ್ಮೆ ತಮ್ಮ ಹೆಚ್ಚುಗಾರಿಕೆ ಪ್ರದರ್ಶಿಸುವ ಹಂಬಲವುಳ್ಳವಾಗಿರುತ್ತಾರೆ. ಅದಕ್ಕೆ ಅವಕಾಶ ಇರಬಾರದು. ಎಲ್ಲಾ ಮಕ್ಕಳು ಶಾಲೆಯಲ್ಲಿ ಒಂದೇ ಆಗಿರುವಂತೆ ಪೋಷಕರು ಕೂಡ ಒಂದೆ. ಒಳ್ಳೆಯ ವೃತ್ತಿಯಲ್ಲಿರುವವರನ್ನು, ಸದೃಢ ಸ್ಥಿತಿವಂತರನ್ನು ಸಭೆಯಲ್ಲಿ ಹೆಚ್ಚು ಗೌರವಿಸುವ ಕ್ರಮ ಇದೆ ಕೆಲವು ಕಡೆ. ಇದು ಇತರೆ ಪೋಷಕರಲ್ಲಿ ಕೀಳರಿಮೆ ಮೂಡಿಸುತ್ತದೆ. ಎಲ್ಲಾ ಪೋಷಕರೂ ಸಮಾನರು. ಪೋಷಕರು ಹುದ್ದೆ ಮತ್ತು ಘನತೆಯನ್ನು ಮನೆಯಲ್ಲಿ ಬಿಟ್ಟು ಹೋಗಿ.

5. ಸಭೆಯ ಆಯೋಜನಾ ಕ್ರಮ..

ಸಭೆಯನ್ನು ಒಂದು ನಿಯಮಿತ ಅವಧಿಯಲ್ಲಿ ಆಯೋಜಿಸಿ. ಎಲ್ಲಾ ಪೋಷಕರು ಪಾಲ್ಗೊಳ್ಳಲು ಅನುಕೂಲವಾಗುವಂತಹ ಸಮಯ ನಿಗದಿ ಮಾಡಿ. ಐದಾರು ದಿನ ಮೊದಲೇ ಸೂಚನಾ ಪತ್ರ ತಲುಪಿಸಿ. ಸಾಧ್ಯವಾದರೆ ದೂರವಾಣಿ ಕರೆಯನ್ನು ಬಳಸಿ. ಪೋಷಕರು ಕೂಡ ಕಡ್ಡಾಯವಾಗಿ ಹಾಜರಾಗುವುದು. ಮಗುವಿಗಿಂತ ಮುಖ್ಯವಾದದ್ದು ಬೇರೆ ಇಲ್ಲ ಎಂದು ಹೇಳಿ ಶಿಕ್ಷಕರು ಸಭೆಯ ಅಗತ್ಯತೆ ತಿಳಿಸಿ. ಯಾವ ಸಭೆಯೂ ಕಾಟಾಚಾರದ್ದು ಆಗಬಾರದು. ಪ್ರತಿಸಭೆಯೂ ಮಗು-ಶಿಕ್ಷಕರು-ಪೋಷಕರನ್ನು ಮತ್ತೆ ಮತ್ತೆ ಬೆಸೆಯಬೇಕು.

6. ಶಾಲಾಭಿವೃದ್ಧಿ ಸಮಿತಿ ಕೊಂಡಿಯಂತೆ ವರ್ತಿಸಲಿ

ಪೋಷಕರ ಸಭೆಯಲ್ಲಿ ಶಾಲಾಭಿವೃದ್ಧಿ ಸಮಿಯ ಉಪಸ್ಥಿತಿ ಅಗತ್ಯವಾದದ್ದು. ಅವರು ಪೋಷಕರು ಮತ್ತು ಶಿಕ್ಷಕರ ನಡುವೆ ಕೊಂಡಿಯಂತಿರಲಿ. ಶಾಲೆಯ ಸವಲತ್ತುಗಳು, ಶಿಕ್ಷಕರ ಕರ್ತವ್ಯ ಬಗ್ಗೆ ಪೋಷಕರಿಗೆ ತಿಳಿಸುವ ಮತ್ತು ಪೋಷಕರ ಪರವಾಗಿ ಶಿಕ್ಷಕರ ಬಳಿ ಮಾತಾಡುವ ಎರಡೂ ಕಾರ್ಯಗಳನ್ನು ಅದು ಮಾಡಬೇಕಾಗುತ್ತದೆ. ಪೋಷಕರು ಮತ್ತು ಶಿಕ್ಷಕರೊಂದಿಗೆ ಹೆಚ್ಚು ಒಡನಾಟ ಇರುವ ಈ ಸಮಿತಿಯ ಹಾಜರಿ ಸಭೆಯಲ್ಲಿ ಮುಖ್ಯವಾಗುತ್ತದೆ.

ಪೋಷಕರ ಸಭೆ ಒಂದು ಕಾಟಾಚಾರದ ಪ್ರಕ್ರಿಯೆ ಆಗದೆ ಮಗುವಿನ ಸಮಗ್ರ ಶಿಕ್ಷಣಕ್ಕೆ ಅನುವಾಗುವ ಸಭೆಯಾಗಬೇಕು. ಆಯಾ ಅವಧಿಯಲ್ಲಿನ ಮಗುವಿನ ಸಮಗ್ರ ಕಲಿಕಾ ಪ್ರಕ್ರಿಯೆಯನ್ನು ಅವಲೋಕಿಸಿ ಅದನ್ನು ಪೋಷಕರಿಗೆ ತಲುಪಿಸುವ, ಮಗುವು ಎದುರಿಸುವ ಸಮಸ್ಯೆಗಳನ್ನು ಬಗೆಹರಿಸುವ, ಶಿಕ್ಷಕರು ಬೋಧನೆಯಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆ ಬಗ್ಗೆಯ ಮತ್ತು ಶಾಲೆಯ ಸಮಗ್ರ ಸವಲತ್ತುಗಳ ಬಗ್ಗೆಯೂ ಚರ್ಚೆಯಾಗಿ ಹರಿಹಾರ ಕಂಡುಕೊಂಡು ಮುಂದೆ ಹೋಗಬೇಕು.

ಇಂಗ್ಲಿಷ್ ಕಲಿಕೆ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನನಗೆ ಇಂಗ್ಲಿಷ್ ಮಾತನಾಡಲು ಹಿಂಜರಿಕೆಯಿದೆ. ಕನ್ನಡ ಮಾಧ್ಯಮದಲ್ಲಿ ಕಲಿತ ನನಗೆ, ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತನಾಡಬೇಕೆಂಬ ಆಸೆಯಿದೆ. ಇದಕ್ಕೆ ಯಾವ ರೀತಿಯ ಪರಿಣಾಮಕಾರಿ ತಯಾರಿ ಮಾಡಬೇಕು ಎಂದು ದಯವಿಟ್ಟು ತಿಳಿಸಿ.
ರಾಜೇಶ್, ರಂಗನತಿಟ್ಟು.

ಇಂಗ್ಲಿಷ್ ಭಾಷೆ ಕಬ್ಬಿಣದ ಕಡಲೆಯಲ್ಲ; ನಿಮ್ಮ ಅಗತ್ಯಕ್ಕೆ ತಕ್ಕಂತೆ ಸೂಕ್ತವಾದ ಕಾರ್ಯತಂತ್ರ ಮತ್ತು ಪರಿಶ್ರಮ ವಿದ್ದಲ್ಲಿ, ಇಂಗ್ಲಿಷ್ ಕಲಿಯಬಹುದು. ಮೊದಲಿಗೆ, ಈ ಸಲಹೆಗಳನ್ನು ಅನುಸರಿಸಿ:

- **ಆತ್ಮವಿಶ್ವಾಸ:** ಇಂಗ್ಲಿಷ್ ಭಾಷೆಯನ್ನು ಕಲಿಯುವಾಗ ಹಿಂಜರಿಕೆಯಿಲ್ಲದೆ, ಆತ್ಮವಿಶ್ವಾಸದಿಂದ ಪ್ರಾರಂಭಿಸಿ.
- **ಓದುವುದು:** ಇಂಗ್ಲಿಷ್ ದಿನ ಪತ್ರಿಕೆಗಳನ್ನು, ಪುಸ್ತಕಗಳನ್ನು, ಲೇಖನಗಳನ್ನು ದಿನನಿತ್ಯ ಓದಿ. ಪದಬಳಕೆ, ವಾಕ್ಯ ರಚನೆ, ವ್ಯಾಕರಣವನ್ನು ಗಮನಿಸಿ. ಸಾಧ್ಯವಾದರೆ, ಉಚ್ಚಾರಣೆಗೆ ಸಹಾಯವಾಗುವಂತೆ ಜೋರಾಗಿ ಓದಿ. ಅರ್ಥವಾಗದ ಪದಗಳನ್ನು ನಿಘಂಟಿನ ಮೂಲಕ ಅರ್ಥೈಸಿಕೊಳ್ಳಿ.
- **ಮಾತನಾಡುವುದು:** ಆತ್ಮೀಯರೊಂದಿಗೆ ವಿಷಯಗಳನ್ನು ಸರಳವಾಗಿ ಇಂಗ್ಲಿಷ್‌ನಲ್ಲೇ ಮಾತನಾಡಲು ಪ್ರಯತ್ನಿಸಿ. ತಪ್ಪು-ಒಪ್ಪುಗಳಾದಲ್ಲಿ, ಸಂಕೋಚ ಪಡದೆ ಪ್ರಯತ್ನವನ್ನು ಮುಂದುವರೆಸಿ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ಕನ್ನಡಿಯ ಮುಂದೆ ಆಂಗಿಕ ಭಾಷೆಯನ್ನು ಬಳಸಿ ಮಾತನಾಡಿ.
- **ಬರೆಯುವುದು:** ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ವಾಕ್ಯರಚನೆಯಲ್ಲಿರುವ ವ್ಯತ್ಯಾಸಗಳನ್ನು ಗಮನಿಸಿ, ಕಂಪ್ಯೂಟರ್‌ನಲ್ಲಿಯೇ ಸರಳ ವಾಕ್ಯಗಳನ್ನು ರಚಿಸಿ, ಕಾಲಕ್ರಮೇಣ ಕ್ಲಿಷ್ಟವಾದ ವಾಕ್ಯಗಳನ್ನು ರಚಿಸಲು ಪ್ರಾರಂಭಿಸಿ. ನೀವು ರಚಿಸಿದ ವಾಕ್ಯಗಳ ವ್ಯಾಕರಣದ ಲೋಪಗಳನ್ನು ಆಪ್ (ಮೈಕ್ರೊಸಾಫ್ಟ್ ವರ್ಡ್, ಗ್ರಾಮರ್ಲಿ ಇತ್ಯಾದಿ) ಮೂಲಕ ಸರಿಪಡಿಸಿ. ಆಪ್ ಸೆಟಿಂಗ್ಸ್ ಅನ್ನು ನಿಮ್ಮ ಅಗತ್ಯಕ್ಕೆ ತಕ್ಕಂತೆ ಹೊಂದಿಸಿ.
- **ವೀಡಿಯೊ, ಚಲನಚಿತ್ರಗಳ ವೀಕ್ಷಣೆ:** ಕನ್ನಡದ ಉಪಶೀರ್ಷಿಕೆಗಳಿರುವ(Sub title) ಇಂಗ್ಲಿಷ್ ಚಲನಚಿತ್ರಗಳು, ಟಿವಿ ಕಾರ್ಯಕ್ರಮಗಳು, ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿ. ಅದೇ ರೀತಿ, ಯೂಟ್ಯೂಬ್‌ನಲ್ಲಿ ಇಂಗ್ಲಿಷ್ ಕಲಿಕೆಗೆ ನೆರವಾಗುವ ವೀಡಿಯೋಗಳನ್ನು ವೀಕ್ಷಿಸಿ. ಸಾಧಕರ ಭಾಷಣಗಳನ್ನು ಕೇಳುವುದರಿಂದ ಪ್ರೇರೇಪಿತರಾಗುವುದರ ಜೊತೆಗೆ ಇಂಗ್ಲಿಷ್ ಕಲಿಯುವಿಕೆಗೆ ಸಹಾಯವಾಗುತ್ತದೆ.
- **ಮೊಬೈಲ್ ಅಪ್ಲಿಕೇಶನ್ಸ್ ಬಳಕೆ:** ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವ ಹಲವಾರು ಮೊಬೈಲ್ ಅಪ್ಲಿಕೇಶನ್‌ಗಳಿವೆ (ಹಲೊ ಇಂಗ್ಲಿಷ್, ಡ್ಯುಒಲಿಂಗೊ, ಹಲೊ ಟಾಕ್ ಇತ್ಯಾದಿ). ಇವುಗಳನ್ನು ಬಳಸಿ.

ಈ ಮೇಲಿನ ಸಲಹೆಗಳನ್ನು ನಿರಂತರವಾಗಿ ಕೆಲವು ತಿಂಗಳ ಕಾಲ ಅನುಸರಿಸಿ. ನಂತರ ನಿಮ್ಮ ಇಂಗ್ಲಿಷ್ ಕಲಿಕೆ ಒಂದು ಹಂತಕ್ಕೆ ತಲುಪುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ: https://www.prajavani.net/education **ನೋಡಿ**

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಆದಿತ್ಯ ಬಿರ್ಲಾ ಕ್ಯಾಪಿಟಲ್ ಕೋವಿಡ್ ಸ್ಕಾಲರ್‌ಶಿಪ್ ಪ್ರೋಗ್ರಾಮ್

‘ಕೋವಿಡ್’ನಿಂದ ಪೋಷಕರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ನೆರವಾಗುವುದಕ್ಕಾಗಿ ಆದಿತ್ಯ ಬಿರ್ಲಾ ಕ್ಯಾಪಿಟಲ್ ಫೌಂಡೇಶನ್ ಈ ಸ್ಕಾಲರ್‌ಶಿಪ್ ಪ್ರೋಗ್ರಾಂ ರೂಪಿಸಿದೆ.

1 ರಿಂದ 12 ನೇ ತರಗತಿ ಮತ್ತು ಪದವಿಪೂರ್ವ ತರಗತಿಗಳವರೆಗಿನ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು.

ಅರ್ಹತೆ: ಕೋವಿಡ್ ಸಾಂಕ್ರಾಮಿಕ ರೋಗದಿಂದ ಪೋಷಕರನ್ನು ಕಳೆದುಕೊಂಡಿರುವ ಭಾರತೀಯ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 1 ರಿಂದ 12 ನೇ ತರಗತಿ ಮತ್ತು ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್‌ಗಳಲ್ಲಿ ಓದುತ್ತಿರಬೇಕು.
ಆರ್ಥಿಕ ನೆರವು: ₹ 60 ಸಾವಿರದವರೆಗೆ(ಒಂದು-ಬಾರಿಯ ವಿದ್ಯಾರ್ಥಿವೇತನ)
ಅರ್ಜಿ ಸಲ್ಲಿಸಲು ಕೊನೆ ದಿನ: 10-11-2022
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: www.b4s.in/praja/ABCC3

ಜಿಎಸ್‌ಕೆ ಸ್ಕಾಲರ್ಸ್ ಪ್ರೋಗ್ರಾಂ 2022-23

ಇದು ದೇಶದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಥಮ ವರ್ಷದ ಪದವಿ (ಎಂಬಿಬಿಎಸ್) ಓದುತ್ತಿರುವ ವಿದ್ಯಾರ್ಥಿಗಳನ್ನು ಬೆಂಬಲಿಸುವುದಕ್ಕಾಗಿ ರೂಪಿಸಿರುವ ಸ್ಕಾಲರ್‌ಷಿಪ್ ಪ್ರೋಗ್ರಾಂ.
ಅರ್ಹತೆ: 12 ನೇ ತರಗತಿಯಲ್ಲಿ ಕನಿಷ್ಠ ಶೇ 65 ಅಂಕಗಳನ್ನು ಪಡೆದು, ಪ್ರಥಮ ವರ್ಷದ ಎಂಬಿಬಿಎಸ್ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ₹6ಲಕ್ಷ ಮೀರಿರಬಾರದು.
ಆರ್ಥಿಕ ನೆರವು :ವಾರ್ಷಿಕ ₹1ಲಕ್ಷದವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 15-10-2022
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: www.b4s.in/praja/GSKP2
ಕೃಪೆ: www.buddy4study.com

ಕೃಷ್ಣಕಮಲ

ಡಾ ಎಸ್. ಶಿಶುಪಾಲ

ಸಸ್ಯಗಳಲ್ಲಿನ ವೈವಿಧ್ಯ ಹೇಳಲು ಅಸಾಧ್ಯ. ಭೂಮಿಯಲ್ಲಿ ಪ್ರಾಣಿಗಳಿಗಿಂತ ಮೊದಲೇ ವಿಕಾಸ ಹೊಂದಿದ ಸಸ್ಯಗಳು ತಾವು ಬೆಳೆಯುವ ಪರಿಸರವನ್ನವಲಂಬಿಸಿ ವಿವಿಧ ಆಕೃತಿ ಮತ್ತು ಸಂತಾನೋತ್ಪತ್ತಿಯ ಗುಣಗಳನ್ನು ಬೆಳೆಸಿಕೊಂಡಿವೆ. ಬಹುತೇಕ ಎಲ್ಲಾ ಸಸ್ಯಗಳು ಸೂರ್ಯ ರಶ್ಮಿಯಿಂದ ಪಡೆದ ಶಕ್ತಿಯನ್ನು ಪತ್ರಹರಿತ್ತಿನ ಮೂಲಕ ಹೀರಿಕೊಂಡು ದ್ಯುತಿಸಂಶ್ಲೇಷಣೆಯಿಂದ ಗ್ಲೂಕೋಸ್‌ನ್ನು ಉತ್ಪಾದಿಸುತ್ತವೆ. ಹಾಗಾಗಿ ಸಸ್ಯಗಳನ್ನು ದ್ಯುತಿಸ್ವಯಂಪೋಷಣೆ (Photo autotrophs) ಜೀವಿಗಳು ಎಂದು ಪರಿಗಣಿಸಲಾಗಿದೆ.

ಸಣ್ಣ ಹುಲ್ಲಿನಿಂದ ಹಿಡಿದು ದೊಡ್ಡ ತೆಂಗಿನಮರದವರೆಗೆ ಅದೇನು ವೈಶಿಷ್ಯ? ಸಣ್ಣ ಪೊದೆಗಳು, ಕುರುಚಲು ಮತ್ತು ಬೃಹದಾಕಾರದ ಮರಗಳಿವೆ. ಇವುಗಳ ಮಧ್ಯೆ ಬೆಳೆಯುವ ಬಳ್ಳಿಗಳಿವೆ. ಇಂತಹ ಬಳ್ಳಿಗಳ ಗುಂಪಿನ ಸದಸ್ಯನೆಂದರೆ ಕೃಷ್ಣಕಮಲ ಅಥವಾ ಗಡಿಯಾರದ ಹೂ. ಇದನ್ನು ಆಂಗ್ಲಭಾಷೆಯಲ್ಲಿ ಪ್ಯಾಷನ್ ಫ್ಲವರ್ ಎಂದು ಕರೆಯುತ್ತಾರೆ. ಸಸ್ಯಗಳ ಪ್ಲಾಸಿಪ್ಲೊರೇಸಿ ಕುಟುಂಬಕ್ಕೆ ಸೇರಿರುವ ಇದನ್ನು ವೈಜ್ಞಾನಿಕವಾಗಿ ಪ್ಯಾಸಿಪ್ಲೋರ ಎಂಬ ಜಾತಿಯಲ್ಲಿರಿಸಲಾಗಿದೆ. ಐನೂರಕ್ಕೂ ಹೆಚ್ಚು ಪ್ರಭೇದಗಳು ಪ್ರಪಂಚದಲ್ಲಿ ಲಭ್ಯ.

ಗುಣಲಕ್ಷಣಗಳು: ಗಟ್ಟಿಯಾದ ಕೋನಗಳನ್ನು ಹೊಂದಿರುವ ಕಾಂಡವಿರುತ್ತದೆ. ಮೃದುವಾದ ತೊಗಟೆಯಿರುತ್ತದೆ. ಎಲೆಗಳು ಒಂದು ಬಿಟ್ಟು ಮತ್ತೊಂದರಂತೆ ಜೋಡಣೆಯಾಗಿರುತ್ತವೆ. ಪ್ರತಿಯೊಂದು ಎಲೆಯಲ್ಲಿಯೂ ಮೂರು ಪತ್ರೆಗಳಿರುತ್ತವೆ. ಎಲೆಯಲ್ಲಿ ಮುಳ್ಳಿನಂತಹ ರಚನೆಯ ಅಂಚುಗಳಿರುತ್ತವೆ. ತೆಳುವಾದ ಸುರುಳಿ ಸುತ್ತಿದ ಲತಾತಂತು (Tendril)ಗಳು ಪ್ರತಿ ಗಂಟಿನಿಂದಲೂ ಮೂಡುತ್ತವೆ. ಎಲೆಗಳ ತೊಟ್ಟು ಮೂರರಿಂದ ಐದು ಸೆಂ.ಮೀನಷ್ಟಿರುತ್ತದೆ. ಈ ಸಸ್ಯದ ವೈಶಿಷ್ಟವೆಂದರೆ ಅದರ ಹೂ. ಕಾಂಡದ ಪ್ರತಿ ಗಂಟಿನಿಂದ ಒಂದೊಂದು ಹೂವು ಅರಳುತ್ತದೆ. ಸುಮಪತ್ರವು ಅಂಡಾರೂಪಿಯಾಗಿರುವುದು. ಸೂರ್ಯನ ರಶ್ಮಿಗಳು ಹೊರಟಂತೆ ತೆಳುವಾದ ಹೊರಪುಗಳಿರುತ್ತವೆ. ಎದ್ದುಕಾಣುವ ಐದು ಕೇಸರಗಳಿದ್ದು (Style) ಮೂರು ಶಲಾಕೆಗಳಿರುತ್ತವೆ (Stamen). ವಿವಿಧ ಪ್ರಭೇದಗಳಲ್ಲಿನ ಬಣ್ಣ ವೈವಿಧ್ಯ ಅನನ್ಯ. ಬಿಳಿ, ಕೆಂಪು, ಗುಲಾಬಿ, ನೇರಳೆ, ನೀಲಿ ಅಥವಾ ಬಹುವರ್ಣಗಳಲ್ಲಿ ಹೂಗಳು ಕಾಣಸಿಗುತ್ತವೆ. ನೈಸರ್ಗಿಕ ಸಸಿಗಳಲ್ಲದೆ ಕಸಿ ಮಾಡಿ ವಿವಿಧ ತಳಿಗಳನ್ನು ತಯಾರಿಸಲಾಗಿದೆ.

ಉಪಯೋಗ: ಎರಡು ವರ್ಷಕ್ಕೂ ಹೆಚ್ಚು ಕಾಲ ಬದುಕುತ್ತವೆ. ಸಮಶೀತೋಷ್ಣ ವಲಯದಲ್ಲಿರುವ ಒಳ್ಳೆಯ ಬಿಸಿಲು ಲಭ್ಯವಿರುವ ಜಾಗದಲ್ಲಿ ಬೆಳೆಯುತ್ತವೆ. ಮೂವತ್ತು ಅಡಿಗಳವರೆಗೆ ಬೆಳೆಯುವ ಸಸ್ಯ ಪ್ರಭೇದವಿದು. ಜೇನು ಹುಳು, ಬಾವಲಿ ಮುಂತಾದವುಗಳಿಂದ ಪರಾಗಸ್ಪರ್ಶ ಕ್ರಿಯೆ ನಡೆಯುವುದು. ಹಣ್ಣು ಎಂಟರಿಂದ ಇಪ್ಪತ್ತು ಸೆಂ. ಮೀ ವರೆಗೆ ಇದ್ದು ಗಟ್ಟಿಯಾಗಿರುತ್ತದೆ. ಒಳಗಿನ ತಿರುಳು ಹಳದಿ ಬಣ್ಣದಿಂದಿದ್ದು ತಿನ್ನಲು ಯೋಗ್ಯ. ಹಣ್ಣಿನ ರಸವನ್ನು ಸಹಾ ಉಪಯೋಗಿಸುವರು. ಹಣ್ಣು ಪೋಷಕಾಂಶಗಳ ಆಗರವಾಗಿದ್ದು ವಿವಿಧ ವಿಟಮಿನ್‌ಗಳು, ಉಪಯುಕ್ತ ಲವಣಗಳು, ಆ್ಯಂಟಿಆಕ್ಸಿಡೆಂಟ್‌ಗಳು, ಕಬ್ಬಿಣ, ಮೆಗ್ನೀಷಿಯಂ, ನಿಯಾಸಿನ್, ಪ್ರೊಟಿನ್‌ಗಳು, ನಾರಿನಂಶ ಹೇರಳವಾಗಿದ್ದು ಔಷಧೀಯ ಗುಣಗಳನ್ನು ಹೊಂದಿದೆ. ಎಲೆ ಮತ್ತು ಬೇರುಗಳನ್ನು ನಿದ್ರಾಹಿನತೆ, ಅಪಸ್ಮಾರ, ಉನ್ಮಾದ ಮುಂತಾದ ಸಮಸ್ಯೆಗಳನ್ನು ನಿವಾರಿಸಲು ಬಳಸಲಾಗುವುದು. ಎಲೆಗಳನ್ನು ಹಲವಾರು ಚಿಟ್ಟೆಗಳ ಕಂಬಳಿಹುಳುಗಳು ಆಹಾರವಾಗಿ ಬಳಸುತ್ತವೆ. ಹೂವಿನ ಆಕಾರ ಮತ್ತು ಸೊಬಗನ್ನು ಪುರಾಣಗಳಲ್ಲಿಯೂ ಉಲ್ಲೇಖಿಸಲಾಗಿದೆ. ಮನೆಯ ಕೈತೋಟ ಮತ್ತು ಶಾಲಾ-ಕಾಲೇಜುಗಳ ಆವರಣದಲ್ಲಿ ಸುಲಭವಾಗಿ ಬೆಳೆಸಬಹುದಾಗಿದೆ. ಈ ಹೂವಿನ ಸೌಂದರ್ಯವನ್ನು ವಿವರಿಸಲು ಸಾಧ್ಯವೇ? ಅಸ್ವಾದಿಸಿಯೇ ನೋಡಬೇಕು.

(ಲೇಖಕರು: ಪ್ರಾಧ್ಯಾಪಕರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ)

ಚಿತ್ರಗಳು: ಲೇಖಕರವು



‘ನವೋದಯ’ ಪ್ರವೇಶ ಪರೀಕ್ಷೆ ಪ್ರಶ್ನೋತ್ತರ ಮಾದರಿ

ಸರಣಿ 3

ಹಿಂದಿನಸಂಚಿಕೆಯಲ್ಲಿ 6ನೇ ತರಗತಿ ಪ್ರವೇಶ ಪರೀಕ್ಷೆಯ ಮಾನಸಿಕ ಸಾಮರ್ಥ್ಯ ವಿಭಾಗದ ಮೊದಲೆರಡು ಭಾಗಗಳ ಬಗ್ಗೆ ತಿಳಿಸಲಾಗಿತ್ತು. ಈ ಸಂಚಿಕೆಯಲ್ಲಿ ಉಳಿದ ಭಾಗಗಳ ಬಗ್ಗೆ ಅರಿಯೋಣ.

ವೆಂಕಟಸುಬ್ಬರಾವ್ ವಿ.

ಹಿಂದಿನ ಎರಡು ಸಂಚಿಕೆಗಳಲ್ಲಿ ಜವಾಹರ ನವೋದಯ ವಿದ್ಯಾಲಯಗಳ ಬಗ್ಗೆ ಕಿರು ಪರಿಚಯ, ಪ್ರವೇಶ ಪ್ರಕ್ರಿಯೆ, ಪ್ರವೇಶ ಪರೀಕ್ಷೆಗಳು, ಪ್ರಶ್ನೆಗಳ ವಿಭಾಗಗಳು, ಪ್ರಶ್ನೆಪತ್ರಿಕೆಗಳ ಮಾದರಿಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿತ್ತು.

6ನೆಯ ತರಗತಿಯ ಪ್ರವೇಶ ಪರೀಕ್ಷೆಯ ‘ಮಾನಸಿಕ ಸಾಮರ್ಥ್ಯ’ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಮಾದರಿ ಹಾಗೂ ಕೆಲವು ಉದಾಹರಣೆಗಳನ್ನು ನೋಡಿದ್ದೇವೆ. ಅದರ ಮುಂದುವರಿದ ಭಾಗವೇ ಈ ಲೇಖನ.

ಈ ವಿಭಾಗದಲ್ಲಿ 10 ಭಾಗಗಳಿರುತ್ತವೆ. ಹಿಂದಿನಸಂಚಿಕೆಯಲ್ಲಿ ಮೊದಲ ಎರಡು ಭಾಗಗಳ ಬಗ್ಗೆ ತಿಳಿದು ಕೊಂಡೆವು. ಈ ಸಂಚಿಕೆಯಲ್ಲಿ ಉಳಿದ ಭಾಗಗಳ ಬಗ್ಗೆ ಅರಿಯೋಣ. ಇದರ ನಂತರ ‘ಅಂಕ ಗಣಿತ’ ವಿಭಾಗದ ಪ್ರಶ್ನೆಗಳನ್ನು ನೋಡೋಣ.

ಮಾನಸಿಕ ಸಾಮರ್ಥ್ಯ ಪರೀಕ್ಷೆ – ಭಾಗ 3

ಈ ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಎಡಬದಿಗೆ ಚೌಕ ಅಥವಾ ವೃತ್ತದ ಒಂದು ಭಾಗವವಿದೆ. ಅದರ ಮಿಕ್ಕ ಭಾಗವನ್ನು ಬಲಬದಿಗೆ ಕೊಡಲಾಗಿದ್ದು, A,B,C,D ಆಕೃತಿಗಳಲ್ಲಿ ಗುರುತಿಸಲಾಗಿದೆ. ಬಲಬದಿಯ ಆಕೃತಿಗಳಲ್ಲಿ ಯಾವ ಚಿತ್ರವು ಎಡಬದಿಯ ಆಕೃತಿಯನ್ನು ಪೂರ್ಣಗೊಳಿಸಲು (ದಿಶೆಯನ್ನು ಬದಲಿಸದೆ) ಸಮರ್ಪಕವಾಗುವುದೋ ಆ ಆಕೃತಿಯನ್ನು ಕಂಡುಹಿಡಿದು ಉತ್ತರಿಸಬೇಕು.

ಉದಾಹರಣೆಗೆ,



ಈ ಮೇಲಿನ ಚಿತ್ರವನ್ನು ಗಮನಿಸಿ. ಇಲ್ಲಿ ಎಡಬದಿಯಲ್ಲಿ (ದೊಡ್ಡದಾಗಿ) ಕೊಟ್ಟಿರುವ ಚಿತ್ರದಲ್ಲಿನ ಕೆಳಭಾಗದ ಚೌಕವು ಖಾಲಿಯಾಗಿದೆ. ಈ ಖಾಲಿಯಾಗಿರುವ ಜಾಗದಲ್ಲಿ ಬಲಭಾಗದ ಆಯ್ಕೆಯ (A,B,C,D) ಯಾವ ಚಿತ್ರವನ್ನು ತುಂಬಿಸಿದರೆ ಚಿತ್ರವು ಪೂರ್ಣವಾಗುವುದು?



ಇದಕ್ಕೆ ಉತ್ತರ ಕಂಡುಹಿಡಿಯುವುದು ಸುಲಭ ಅಲ್ಲವೇ? ಎಡಭಾಗದ ಚಿತ್ರವು ನಾಲ್ಕು ಭಾಗಗಳಿಂದ ಕೂಡಿದೆ ಎಂದು ಗಮನಿಸಿದ್ದೀರಿ. ಪ್ರತಿ ಭಾಗವನ್ನು ತುಂಬಿರುವ ಚಿತ್ರಗಳನ್ನು ಗಮನಿಸಿ.

ಈಗ ಖಾಲಿಯಿರುವ ಜಾಗದಲ್ಲಿ ತುಂಬ ಬೇಕಾದ ಚಿತ್ರವನ್ನು ಕಂಡುಹಿಡಿಯುವುದು ಸುಲಭವಲ್ಲವೇ? ಇಲ್ಲಿ ಸರಿ ಉತ್ತರ (D) ಆಗುತ್ತದೆ ಅಲ್ಲವೇ?

ಮತ್ತೊಂದು ಉದಾಹರಣೆಯನ್ನು ನೋಡೋಣ.

ಇಲ್ಲಿಯೂ ಸಹ ಮೊದಲಿನಂತೆಯೇ, ಪ್ರಶ್ನೆಯಲ್ಲಿರುವ ಚಿತ್ರವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ನೋಡಲು ಪ್ರಯತ್ನಿಸಿ. ಆಗ ಈ ಚಿತ್ರವು ಎಡಭಗದಲ್ಲಿರುವಂತೆ ಕಾಣುತ್ತದೆ.

ಈಗ ಇದನ್ನು ಗಮನಿಸಿ, ಈ ಚಿತ್ರವನ್ನು ಪೂರ್ಣಗೊಳಿಸುವ ಸರಿಯಾದ ಆಯ್ಕೆ ಯಾವುದೆಂದು ನೀವೇ ಹೇಳಬಹುದಲ್ಲವೇ?

ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸಲು ಮೇಲೆ ತಿಳಿಸಿದಂತೆ ಪ್ರಶ್ನೆಯಲ್ಲಿ ಕೊಟ್ಟಿರುವ ಚಿತ್ರವನ್ನು ಸಮಾನ ಭಾಗಗಳಾಗಿ ದೃಶ್ಯೀಕರಿಸಿಕೊಂಡು ಸುಲಭವಾಗಿ ಉತ್ತರಿಸಬಹುದು. ಸ್ವಲ್ಪ ಮಟ್ಟಿನ ಅಭ್ಯಾಸದಿಂದ ಈ ರೀತಿಯ ಪ್ರಶ್ನೆಗಳಿಗೆ ವೇಗವಾಗಿ ಉತ್ತರಿಸುವುದನ್ನು ಕಲಿಯಬಹುದು.

ಮಾನಸಿಕ ಸಾಮರ್ಥ್ಯ ಪರೀಕ್ಷೆ –ಭಾಗ 4

ಇಲ್ಲಿ, ಎಡಬದಿಗೆ ಮೂರು ಪ್ರಶ್ನೆ ರೂಪದ ಆಕೃತಿಗಳನ್ನು ಕೊಡಲಾಗಿರುತ್ತದೆ ಹಾಗೂ ನಾಲ್ಕನೆಯ ಆಕೃತಿಯ ಸ್ಥಾನವನ್ನು ಖಾಲಿ ಬಿಡಲಾಗಿರುತ್ತದೆ. ಈ ಪ್ರಶ್ನೆಯ ಆಕೃತಿಗಳು ಯಾವುದೋ ಒಂದು ಶ್ರೇಣಿಯಲ್ಲಿರುತ್ತವೆ. ಬಲ ಭಾಗದಲ್ಲಿ ಉತ್ತರ ರೂಪದಲ್ಲಿ ಕೊಟ್ಟಿರುವ A,B,C,D ಆಕೃತಿಗಳಲ್ಲಿ ಯಾವುದೋ ಒಂದು ಆಕೃತಿಯು ಪ್ರಶ್ನೆಯಲ್ಲಿರುವ ಖಾಲಿ ಜಾಗಕ್ಕೆ ಸರಿಯಾಗಿ ಹೊಂದಿಕೊಳ್ಳುವ ಚಿತ್ರವಾಗಿರುತ್ತದೆ. ಆ ಸರಿಯಾದ ಚಿತ್ರವನ್ನು ಕಂಡುಹಿಡಿದು ಉತ್ತರಿಸಬೇಕು.

ಉದಾಹರಣೆಗೆ,



ಇಲ್ಲಿ, ಎಡಭಾಗದ ಪ್ರಶ್ನೆಯಲ್ಲಿ ಮೂರು ಚಿತ್ರಗಳಿವೆ ಹಾಗೂ ಬಲಭಾಗದಲ್ಲಿ ಉತ್ತರದ ಆಯ್ಕೆಗಳಾಗಿ (A,B,C, D) ನಾಲ್ಕು ಚಿತ್ರಗಳಿವೆ.

ಎಡಭಾಗದ ಪ್ರಶ್ನೆಯಲ್ಲಿನ ಮೂರು ಚಿತ್ರಗಳನ್ನು ಗಮನಿಸಿದರೆ, ಈ ಚಿತ್ರಗಳು ಚಕ್ರಾಕಾರವಾಗಿ ತಿರುಗುತ್ತಿವೆ ಎಂದು ತಿಳಿಯಬಹುದು ಅಲ್ಲವೇ? ಹಾಗೂ ಪ್ರತಿ ಚಲನೆಯಲ್ಲೂ ಒಂದು ನಿರ್ದಿಷ್ಟ ಬದಲಾವಣೆಯಾ ಗುತ್ತಿರುವುದು ಗೋಚರವಾಗುತ್ತದೆ.



ಮೊದಲನೆಯ ಚಿತ್ರದಲ್ಲಿ ಮೇಲೆ ಅರ್ಧ ವೃತ್ತದ ಒಳಗೆ ಒಂದು ಸಣ್ಣ ವೃತ್ತವಿದೆ, ಕೆಳಗೆ ಪಂಚಭುಜಾಕೃತಿಯ ಒಳಗೆ ಒಂದು x ಇದೆ. ಎರಡನೆಯ ಚಿತ್ರವು ಚಲಿಸಿ ಅರ್ಧವೃತ್ತವು ಕೆಳಗೆ ಬಂದಿದೆ ಹಾಗೂ ಪಂಚ ಭುಜಾಕೃತಿಯ ಒಳಗೆ ಎರಡು x x ಇವೆ. ಹಾಗೆಯೇ ಮೂರನೆಯ ಚಿತ್ರವೂ ಚಲಿಸಿದೆ ಹಾಗೂ ಪಂಚಭುಜಾಕೃತಿಯಲ್ಲಿ ಮೂರು x x x ಇವೆ. ಹಾಗಾದರೆ ಈ ಚಿತ್ರವು ಇದೇ ರೀತಿಯಲ್ಲಿ ಚಲಿಸಿದಾಗ ನಾಲ್ಕನೆಯ ಬಾರಿ ಏನಾಗಬೇಕು? ನಾಲ್ಕನೆಯ ಬಾರಿ, ಚಿತ್ರವು ಚಲಿಸಿ ಅರ್ಧವೃತ್ತಾಕಾರವು ಕೆಳಗೆ ಬರಬೇಕು ಹಾಗೂ ಪಂಚಭುಜಾಕೃತಿಯಲ್ಲಿ ನಾಲ್ಕು x x x x ಗಳಿರಬೇಕಾಗುತ್ತದೆ ಅಲ್ಲವೇ? (ಏಕೆಂದರೆ ಪ್ರತಿ ಚಲನೆಯಲ್ಲಿಯೂ ಒಂದೊಂದು x ಗಳು ಹೆಚ್ಚುತ್ತಿವೆ!) ಆದ್ದರಿಂದ ಸರಿ ಉತ್ತರ C. ಎಷ್ಟು ಸುಲಭವಾಗಿದೆ ಅಲ್ವಾ !

2. ಈ ಕೆಳಗಿನ ಪ್ರಶ್ನೆಗೆ ನೀವೇ ಉತ್ತರಿಸಬಹುದೇ?



ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ಜಾಲತಾಣವನ್ನು ನೋಡಿ. https://navodaya.gov.in/nvs/en/Home1

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು)

ಮುಂದುವರಿಯುವುದು

ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನದಲ್ಲಿ ಹಿನ್ನಡೆಯಾಗುವ ಆತಂಕ

ಬಿಡುಗಡೆಯಾಗದ ₹4,218 ಕೋಟಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಪುರಸ್ಕೃತ ಯೋಜನೆಯಡಿ ಕೇಂದ್ರ ಸರ್ಕಾರದ ಪಾಲಿನ ಮೊದಲ ಕಂತಿನ ₹4,218 ಕೋಟಿ ಇನ್ನೂ ಬಿಡುಗಡೆಯಾಗಿಲ್ಲ. ಇದರಿಂದಾಗಿ ಯೋಜನೆಗಳ ಅನುಷ್ಠಾನದಲ್ಲಿ ಹಿನ್ನಡೆಯಾಗುವ ಆತಂಕ ಉಂಟಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಈ ಸಾಲಿನ ಅನುದಾನ ಒಟ್ಟು ₹47,714 ಕೋಟಿ. ಇದರಲ್ಲಿ ಪ್ರಾಥಮಿಕ ಶಿಕ್ಷಣ ಯೋಜನೆಯ ₹9,098 ಕೋಟಿ ಸಹ ಸೇರಿದೆ. ಇದರಲ್ಲಿ ಕೇಂದ್ರದ ಪಾಲು ₹20,359 ಕೋಟಿಗಳಾಗಿದ್ದು, ಇಲ್ಲಿಯವರೆಗೆ ₹5,960 ಕೋಟಿ (ಶೇ 29) ಮಾತ್ರ ಬಿಡುಗಡೆಯಾಗಿದೆ.

2020-21ನೇ ಸಾಲಿನಲ್ಲಿ ಇದೇ ಅವಧಿಯಲ್ಲಿ ಕೇಂದ್ರ ಪಾಲಿನ ₹18,802 ಕೋಟಿ ಅನುದಾನದಲ್ಲಿ ₹8,422 (ಶೇ 44) ಬಿಡುಗಡೆಯಾಗಿತ್ತು. ಕಳೆದ ಸಾಲಿಗೆ ಹೋಲಿಸಿದರೆ ಈ ಸಲ ಬಿಡುಗಡೆಯಾದ ಅನುದಾನ ಕಡಿಮೆ. ಕೇಂದ್ರದ ಶೇ 100ರಷ್ಟು ಅನುದಾನ ಬಿಡುಗಡೆ ಮಾಡಿಸಿಕೊಳ್ಳಲು ಕೇಂದ್ರದ ಸಚಿವಾಲಯಗಳಿಗೆ ಬಳಕೆ ಪ್ರಮಾಣಪತ್ರ ಸಲ್ಲಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪವಾಗಿದ್ದು, ಅನುದಾನ ಬಿಡುಗಡೆಗೆ ಕೇಂದ್ರ ಸಚಿವಾಲಯಗಳಿಗೆ ಪತ್ರ ಬರೆದು ಒತ್ತಡ ಹೇರುವ ಬಗ್ಗೆ ಚರ್ಚಿಸಲಾಯಿತು.

ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ, ಸ್ವಚ್ಛ ಭಾರತ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಸಮಗ್ರ ಶಿಕ್ಷಣ ಅಭಿಯಾನ, ಮಧ್ಯಾಹ್ನದ ಬಿಸಿಯೂಟ, ಪಿಎಂ ಆವಾಸ್ ಯೋಜನೆ (ನಗರ), ಕೃಷಿ ವಿಕಾಸ ಯೋಜನೆ, ಆಹಾರ ಭದ್ರತಾ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಂಚಯಿ ಸೇರಿವೆ.

ರಾಷ್ಟ್ರೀಯ ಆರೋಗ್ಯ ಅಭಿ ಯಾನದಡಿ ಹಿಂದಿನ ವರ್ಷ ಬಿಡುಗಡೆ ಯಾದ ಕೇಂದ್ರ, ರಾಜ್ಯದ ಅನುದಾನದಲ್ಲಿ ₹684 ಕೋಟಿ ಬಳಕೆ ಮಾಡಿರಲಿಲ್ಲ. ಅದರಲ್ಲಿ ಈ ವರ್ಷ ₹509 ಕೋಟಿ ಖರ್ಚು ಮಾಡಲಾಗಿದೆ. ಈ ವರ್ಷ ₹470 ಕೋಟಿ ಬಿಡುಗಡೆಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದೆ.

ಕೇಂದ್ರಕ್ಕೆ ಪ್ರಸ್ತಾವನೆ: ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಮಧ್ಯಾಹ್ನ ಬಿಸಿಯೂಟ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ಬಿಡುಗಡೆಯಾಗದೆ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಈ ಸಂಬಂಧ ಮಾಹಿತಿ ನೀಡಿದೆ. ಶೀಘ್ರ ಶೇ 70ರಷ್ಟು ಅನುದಾನ ಬಿಡುಗಡೆ ಆಗಬಹುದು ಎಂಬ ನಿರೀಕ್ಷೆಯಲ್ಲಿ ಅಧಿಕಾರಿಗಳು ಇದ್ದಾರೆ.

ಬಳಕೆಯಾಗದ ಅನುದಾನ

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಕಳೆದ ಸಾಲಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ₹3,338 ಕೋಟಿ ಉಳಿಯಾಗಿತ್ತು. ಅದರಲ್ಲಿ ಈ ವರ್ಷ ₹1,301 ಕೋಟಿ ವೆಚ್ಚ ಮಾಡಲಾಗಿದೆ. ಈ ವರ್ಷ ಈ ಯೋಜನೆಗೆ ಇನ್ನೂ ಹೆಚ್ಚು ವೆಚ್ಚ ಮಾಡಲು ಕರ್ನಾಟಕ ಗ್ರಾಮೀಣಾಭಿವೃದ್ಧಿ ಇಲಾಖೆ ಯೋಜಿಸಿದೆ.

ಸ್ವಚ್ಛ ಭಾರತ (ಗ್ರಾಮೀಣ) ಯೋಜನೆಯಡಿ ಕಳೆದ ವರ್ಷ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ₹328 ಕೋಟಿ ಹಾಗೆಯೇ ಉಳಿದಿತ್ತು. ಅದರಲ್ಲಿ ಈ ವರ್ಷ ₹53 ಕೋಟಿಯನ್ನಷ್ಟೇ ಕರ್ನಾಟಕ ಸರ್ಕಾರ ವೆಚ್ಚ ಮಾಡಿದೆ.

ಕೃಷಿ ಸಿಂಚಾಯಿಗಿಲ್ಲ ಉತ್ಸಾಹ

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ ಈ ವರ್ಷ ₹511 ಕೋಟಿ ಬಿಡುಗಡೆ ಮಾಡಲಾಗಿದೆ. ಆದರೆ, ಅದರಲ್ಲಿ ಕರ್ನಾಟಕ ಸರ್ಕಾರ ವೆಚ್ಚ ಮಾಡಿದ್ದು ₹89 ಕೋಟಿಯಷ್ಟೇ. ಉಳಿದ ಅನುದಾನವನ್ನು ಅಕ್ಟೋಬರ್ ಅಂತ್ಯದೊಳಗೆ ವೆಚ್ಚ ಮಾಡಲು ಗಡುವು ನಿಗದಿಪಡಿಸಲಾಗಿದೆ. ಈ ಅನುದಾನ ಖರ್ಚು ಆಗದ ಕಾರಣ ಕೇಂದ್ರ ಸರ್ಕಾರದ ಮೊದಲ ಕಂತಿನ ಅನುದಾನ ಬಿಡುಗಡೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

15 ಲಘು ಯುದ್ಧ ಹೆಲಿಕಾಪ್ಟರ್ ಇಂದು ಸೇನೆಗೆ ಸೇರ್ಪಡೆ

ನವದೆಹಲಿ(ಪಿಟಿಐ): ಆಗಸದಿಂದಲೇ ಕ್ಷಿಪಣಿ ಮತ್ತು ಇತರೆ ಅಸ್ತ್ರ ಹಾರಿಸಿ ವೈಮಾನಿಕ ಗುರಿಗಳನ್ನು ಧ್ವಂಸಗೊಳಿಸುವ ಜತೆಗೆ ಬಹುವಿಧದ ಪಾತ್ರ ವಹಿಸುವ ಸಾಮರ್ಥ್ಯದ ಲಘು ಯುದ್ಧ ಹೆಲಿ ಕಾಪ್ಟರ್ ಗಳನ್ನು (ಎಲ್‌ಸಿಎಚ್) ಭಾರತೀಯ ವಾಯುಪಡೆಯು ಸೋಮ ವಾರ ಅಧಿಕೃತವಾಗಿ ಸೇರ್ಪಡೆ ಮಾಡಿಕೊಳ್ಳಲಿದೆ.

ಸರ್ಕಾರಿ ಸ್ವಾಮ್ಯದ ಹಿಂದೂ ಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಈ ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು ಸಂಪೂರ್ಣ ದೇಶಿಯ ತಂತ್ರಜ್ಞಾನದಲ್ಲಿ ನಿರ್ಮಿಸಿದ್ದು, ಇವುಗಳನ್ನು ಪ್ರಾಥಮಿಕವಾಗಿ ಅತಿ ಎತ್ತರದ ಪ್ರದೇಶಗಳಲ್ಲಿ ಕಾರ್ಯಾಚರಣೆಗೆ ನಿಯೋಜಿಸುವಂತೆ ವಿನ್ಯಾಸಗೊಳಿಸಲಾಗಿದೆ.

ಎರಡು ಎಂಜಿನ್‌ಗಳನ್ನು ಹೊಂದಿರುವ 5.8 ಟನ್ ತೂಕದ ಹೆಲಿಕಾಪ್ಟರ್ ಈಗಾಗಲೇ ಕ್ಷಿಪಣಿಗಳು ಮತ್ತು ವಿವಿಧ ಶಸ್ತ್ರಾಸ್ತ್ರಗಳನ್ನು ಹಾರಿಸುವ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಹೆಲಿಕಾಪ್ಟರ್ 20 ಎಂಎಂ ಟರೆಂಟ್ ಗನ್ ಮತ್ತು 70 ಎಂಎಂ ಕ್ಷಿಪಣಿಗಳನ್ನು ಸಿಡಿಸಲಿದೆ. ಇವುಗಳ ಪರೀಕ್ಷೆ ಕಳೆದ ವರ್ಷ ನಡೆದಿತ್ತು. ಈ ಹೆಲಿಕಾಪ್ಟರ್‌ನ ಮತ್ತೊಂದು ವಿಶೇಷತೆ ಎಂದರೆ, ಸಿಯಾಚಿನ್‌ನಂತಹ ಅತಿ ಎತ್ತರ ನೀರ್ಗಲ್ಲು ಪ್ರದೇಶದಲ್ಲೂ, ಮರುಭೂಮಿಯಲ್ಲೂ ಸಮರ್ಥ ದಾಳಿ ನಡೆಸುವ ಸಾಮರ್ಥ್ಯ ಹೊಂದಿದೆ ಎಂದು ಸೇನೆಯ ಅಧಿಕಾರಿಗಳು ಹೇಳಿದರು.

ಜೋಧಪುರದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಾಯುಪಡೆ ಮುಖ್ಯಸ್ಥ ವಿ.ಆರ್. ಚೌಧರಿ ಅವರ ಸಮ್ಮುಖದಲ್ಲಿ ಸೋಮವಾರ ನಡೆಯಲಿರುವ ಸಮಾರಂಭದಲ್ಲಿ ಭಾರತೀಯ ವಾಯುಪಡೆಗೆ 10 ಮತ್ತು ಸೇನೆಗೆ 5 ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು ಸೇರ್ಪಡೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ 95 ಇಂತಹ ಎಲ್‌ಸಿಎಚ್‌ಗಳನ್ನು ಸೇನೆಗೆ ಸೇರ್ಪಡೆ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

₹3,887 ಕೋಟಿ ವೆಚ್ಚದಲ್ಲಿ ಸೀಮಿತ ಸರಣಿ ಉತ್ಪಾದನೆಯ 15 ಎಲ್‌ಸಿಎಚ್‌ಗಳನ್ನು ಭಾರತೀಯ ಸೇನೆಗೆ ಸೇರಿಸಿಕೊಳ್ಳಲು ಮಾರ್ಚ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭದ್ರತಾ ಕ್ಯಾಬಿನೆಟ್ ಸಮಿತಿ (ಸಿಸಿಎಸ್) ಅನುಮೋದನೆ ನೀಡಿತ್ತು.

7 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಕ್ರಮ

ಡಾ.ಸಿ.ಆರ್.ಚಂದ್ರಶೇಖರ್‌ಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಏಳು ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಕಾರ್ಯ ಬಾಕಿ ಉಳಿದಿದೆ. ಈ ಜಿಲ್ಲೆಗಳಲ್ಲೂ ಇನ್ನೊಂದು ವರ್ಷದಲ್ಲಿ ಗಾಂಧಿ ಭವನಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಭಾನುವಾರ ಗಾಂಧಿ ಸ್ಮಾರಕ ನಿಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಅವರಿಗೆ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ' ಪ್ರದಾನ ಮಾಡಿ ಮಾತನಾಡಿದರು.

'23 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಿಸಲಾಗಿದೆ. ಜಾಗದ ಸಮಸ್ಯೆಯ ಕಾರಣಕ್ಕೆ ಈ ಜಿಲ್ಲೆಗಳಲ್ಲಿ ಭವನ ನಿರ್ಮಾಣ ಕಾರ್ಯವು ನನೆಗುದಿಗೆ ಬಿದ್ದಿದೆ' ಎಂದರು.

'ಖಾದಿ ಉದ್ಯಮ, ಗ್ರಾಮೀಣ ಕೈಗಾರಿಕೆಗಳ ಬೆಳವಣಿಗೆಗೆ ಹೊಸ ಯೋಜನೆ ಜಾರಿಗೊಳಿಸಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು. ಗ್ರಾಮೀಣ ಕೈಗಾರಿಕೆಗಳು, ಬೆಳವಣಿಗೆಯಾದರೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಸೃಷ್ಟಿಯಾಗಲಿದೆ' ಎಂದು ಹೇಳಿದರು.

'ಮೋಹನದಾಸ ಕರಮಚಂದ ಗಾಂಧಿಯಿಂದ ಮಹಾತ್ಮ ಆಗುವ ತನಕ ಗಾಂಧೀಜಿ ಅವರ ಪಯಣ ಅದ್ಭುತ. ಸದಾ ಪರಿವರ್ತನೆ, ಶುದ್ಧೀಕರಣಕ್ಕೆ ತೆರೆದುಕೊಂಡಿದ್ದರು' ಎಂದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಅವರಿಗೆ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. (ಎಡದಿಂದ) ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ, ಸಚಿವ ಆರಗ ಜ್ಞಾನೇಂದ್ರ, ವೊಡೆ ಪಿ. ಕೃಷ್ಣ, ಎಚ್.ಕೆ.ಪಾಟೀಲ್, ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್, ಡಾ.ಪಿ.ಎಸ್. ಹರ್ಷ ಇದ್ದರು. ಪ್ರಜಾವಾಣಿ ಚಿತ್ರ

> **ಮಾನಸಿಕ ಒತ್ತಡದಿಂದ ಕಾಯಿಲೆಗೆ ತುತ್ತಾಗುತ್ತಿದ್ದೇವೆ. ಶಾಲಾ-ಕಾಲೇಜು ಹಂತದಲ್ಲಿ ಮಾನಸಿಕ ಆರೋಗ್ಯ ವಿಷಯವನ್ನು ಪಠ್ಯದಲ್ಲಿ ಅಳವಡಿಸಬೇಕು**
> **ಡಾ.ಸಿ.ಆರ್.ಚಂದ್ರಶೇಖರ್**
> ಮನೋವೈದ್ಯ

ಶಾಸಕ ಎಚ್.ಕೆ.ಪಾಟೀಲ್, 'ಗಾಂಧೀಜಿ ಅವರದ್ದು ಚರ್ಚಿಸುವ ವ್ಯಕ್ತಿತ್ವ ಅಲ್ಲ; ಧ್ಯಾನಿಸುವ ವ್ಯಕ್ತಿತ್ವ. ಗ್ರಾಮೀಣಾಭಿವೃದ್ಧಿಯಿಂದ ರಾಷ್ಟ್ರ ಕಲ್ಯಾಣ ಸಾಧ್ಯ ಎಂದು ಗಾಂಧೀಜಿ ಪ್ರತಿಪಾದಿಸಿದ್ದರು' ಎಂದು ವಿವರಿಸಿದರು.

'ಗಾಂಧಿ ಅನುಯಾಯಿ ಕಡಿದಾಳ್ ಮಂಜಪ್ಪ', 'ಹುತಾತ್ಮ ಮೈಲಾರ ಮಹಾದೇವ', 'ವಿದ್ಯಾರ್ಥಿಗಳು', ಕವನಗಳಲ್ಲಿ ಮೂಡಿದ ಗಾಂಧಿ' ಕೃತಿಗಳನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

₹5 ಲಕ್ಷ ಆಸ್ಪತ್ರೆಗೆ ದೇಣಿಗೆ

ಪ್ರಶಸ್ತಿ ಜತೆಗೆ ಸ್ವೀಕರಿಸಿದ ₹ 5 ಲಕ್ಷ ಮೊತ್ತದ ಚೆಕ್ ಅನ್ನು ನಿಮ್ಹಾನ್ಸ್ ಅಭಿವೃದ್ಧಿಗೆ ನೀಡುವುದಾಗಿ ಡಾ.ಸಿ.ಆರ್. ಚಂದ್ರಶೇಖರ್ ಘೋಷಿಸಿದರು.

'ನನ್ನ ಪಿಎಫ್ ಸೇರಿದಂತೆ ಉಳಿಕೆ ಮೊತ್ತ ₹ 1.9 ಕೋಟಿ ಹಾಗೂ ಎರಡು ಮನೆ, ನಿವೇಶನಗಳನ್ನೂ ಮಾ ರಾಟ ಮಾಡಿ ಇದೇ ಆಸ್ಪತ್ರೆಯ ಅಭಿವೃದ್ಧಿಗೆ ನೀಡಲಾಗುವುದು' ಎಂದು ಹೇಳಿದರು.

ಲೇಖಕಿ ಡಾ.ಕೆ.ಆರ್.ಸಂಧ್ಯಾರೆಡ್ಡಿ ಅವರಿಗೆ 'ಜಯಶ್ರೀ ಟ್ರಸ್ಟ್ ಪುರಸ್ಕಾರ' ಅನ್ನು ಇದೇ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು. ಮರಾಠ ರೆಜಿಮೆಂಟ್‌ನ ಹವಾಲ್ದಾರ್ ಎಂ.ಎನ್. ರವಿಕುಮಾರ್ ಹಾಗೂ ಗದಗದ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜ ಅವರನ್ನು ಗೌರವಿಸಲಾಯಿತು.

ಖಾದಿ ಮಳಿಗೆಗೆ ಭೇಟಿ: ನಗರದ ಗಾಂಧಿ ಭವನದ ಪಕ್ಕದಲ್ಲಿರುವ ಖಾದಿ ಗ್ರಾಮೋದ್ಯೋಗ ಮಳಿಗೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಿ ಖಾದಿ ಬಟ್ಟೆ ಖರೀದಿಸಿದರು.

₹1,476 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ನವದೆಹಲಿ (ಪಿಟಿಐ): 'ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು 198 ಕೆ.ಜಿ. ಕ್ರಿಸ್ಟಲ್ ಮೆಟಾಂಫೆಟಮೈನ್ ಮತ್ತು 9 ಕೆ.ಜಿ ಕೊಕೇನ್ ಜಪ್ತಿ ಮಾಡಿದ್ದಾರೆ. ಇವುಗಳ ಒಟ್ಟು ಮೌಲ್ಯ ₹1,476 ಕೋಟಿ' ಎಂದು ಕೇಂದ್ರ ಹಣಕಾಸು ಸಚಿವಾಲಯ ಭಾನುವಾರ ತಿಳಿಸಿದೆ.

'ಮುಂಬೈನ ಡಿಆರ್‌ಐ ಅಧಿಕಾರಿಗಳು ವಾಶಿ ಪ್ರದೇಶದ ಬಳಿ ಕಿತ್ತಳೆ ಹಣ್ಣುಗಳನ್ನು ಸಾಗಿಸುತ್ತಿದ್ದ ಟ್ರಕ್‌ವೊಂದನ್ನು ತಡೆದು ತಪಾಸಣೆ ನಡೆಸಿದ್ದರು. ಕಿತ್ತಳೆ ಹಣ್ಣುಗಳಿದ್ದ ಪೆಟ್ಟಿಗೆಗಳನ್ನು ಪರಿಶೀಲಿಸಿದ್ದಾಗ ದೊಡ್ಡ ಪ್ರಮಾಣದಲ್ಲಿ ಮಾದಕವಸ್ತು ಪತ್ತೆಯಾಗಿತ್ತು. ಇದನ್ನು ದಕ್ಷಿಣ ಆಫ್ರಿಕಾದಿಂದ ತರಲಾಗಿತ್ತು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ' ಎಂದು ಸಚಿವಾಲಯದ ಪ್ರಕಟಣೆ ಹೇಳಿದೆ.

ಮಂಗಳ ಹಾಡಿದ ಕಕ್ಷೆಗಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳ ಗ್ರಹದ ಕಕ್ಷೆಯಲ್ಲಿ ಪರಿಭ್ರಮಣ ನಡೆಸಿ ಅಪರೂಪದ ಮಾಹಿತಿಗಳನ್ನು ಸಂಗ್ರಹಿಸಿ ಭೂಮಿಗೆ ಕಳುಹಿಸುತ್ತಿದ್ದ ಇಸ್ರೊದ 'ಮಂಗಳಯಾನ' ಕಕ್ಷೆಗಾಮಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದೆ.

ಬ್ಯಾಟರಿಗಳು ಬರಿದಾಗಿರುವುದರಿಂದ ಕಕ್ಷೆಗಾಮಿಯು ಕಾರ್ಯನಿರ್ವಹಿಸಲು ಸಾಧ್ಯವಾಗಿಲ್ಲ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮೂಲಗಳು ತಿಳಿಸಿವೆ.

'ಸದ್ಯ ಇಂಧನ ಖಾಲಿಯಾಗಿದೆ. ಉಪಗ್ರಹದ ಬ್ಯಾಟರಿಯೂ ಬರಿದಾಗಿದೆ. ಜತೆಗೆ ಸಂಪರ್ಕವೂ ಕಡಿತಗೊಂಡಿದೆ' ಎಂದು ಇಸ್ರೊ ಮೂಲಗಳು ತಿಳಿಸಿವೆ. ಆದರೆ, ಇಸ್ರೊ ಈ ಬಗ್ಗೆ ಅಧಿಕೃತ ಹೇಳಿಕೆ ನೀಡಿಲ್ಲ.

'ಮಂಗಳಯಾನದ ಕಕ್ಷೆಗಾಮಿಯು ಮಂಗಳ ಗ್ರಹದ ಕಕ್ಷೆಯಲ್ಲಿ ಪರಿಭ್ರಮಣ ಆರಂಭಿಸಿ ಎಂಟು ವರ್ಷಗಳಾಗಿತ್ತು. ಕೇವಲ ಆರು ತಿಂಗಳ ಅವಧಿಗೆ ಕಾರ್ಯ ನಿರ್ವಹಿಸಲು ಇದನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ, ಅವಧಿ ಮೀರಿ ಈ ಕಕ್ಷೆಗಾಮಿ ಕಾರ್ಯನಿರ್ವಹಿಸಿದೆ. ಇದು ತನ್ನ ಕಾರ್ಯವನ್ನು ಸಂಪೂರ್ಣವಾಗಿ ಮತ್ತು ಸಮರ್ಥವಾಗಿ ಪೂರೈಸಿದ್ದು, ಮಹತ್ವದ ವೈಜ್ಞಾನಿಕ ಫಲಿತಾಂಶಗಳನ್ನು ಒದಗಿಸಿದೆ' ಎಂದು ಮೂಲಗಳು ತಿಳಿಸಿವೆ.

2013 ರ ನವೆಂಬರ್ 5 ರಂದು ₹450 ಕೋಟಿ ವೆಚ್ಚದ ಮಂಗಳಯಾನ ಯೋಜನೆ ಕಾರ್ಯರೂಪಕ್ಕೆ ಬಂದಿತ್ತು. 'ಪಿಎಸ್‌ಎಲ್‌ವಿ-ಸಿ25' ರಾಕೆಟ್ ಮೂಲಕ 2014ರ ಸೆ.24 ರಂದು ಯಶಸ್ವಿಯಾಗಿ ಮಂಗಳ ಗ್ರಹದ ಕಕ್ಷೆಯಲ್ಲಿ ಕಕ್ಷೆಗಾಮಿಯನ್ನು ಯಶಸ್ವಿಯಾಗಿ ಸೇರಿಸಲಾಗಿತ್ತು. ಎಂಟು ವರ್ಷಗಳ ಅವಧಿಯಲ್ಲಿ ಆ ಗ್ರಹದ ಚಿತ್ರಗಳೂ ಸೇರಿ ಸಾಕಷ್ಟು ಮಾಹಿತಿಗಳನ್ನು ಭೂಮಿಗೆ ಕಳುಹಿಸಿತ್ತು.

ಮೊದಲ ಪ್ರಯತ್ನದಲ್ಲೇ ಮಂಗಳ ಗ್ರಹದ ಕಕ್ಷೆಗೆ ಕಕ್ಷೆಗಾಮಿಯನ್ನು ಸೇರಿಸುವ ಮೂಲಕ ಇಸ್ರೊ ಇಡೀ ವಿಶ್ವದಲ್ಲೇ ಸಂಚಲನ ಮೂಡಿಸಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಡಿಕೆಶಿ, ಸುರೇಶ್‌ಗೆ ಹೊಸ ಸಮನ್ಸ್ ಜಾರಿ ಮಾಡಿದ ಇ.ಡಿ

ನವದೆಹಲಿ: ಯಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ನೀಡಿರುವ ಹಣಕಾಸು ನೆರವು ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಹೋದರ ಸಂಸದ ಡಿ.ಕೆ.ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯವು ಹೊಸದಾಗಿ ಸಮನ್ಸ್ ಜಾರಿ ಮಾಡಿದೆ.

ಅ.7ರಂದು ಇ.ಡಿ ಕೇಂದ್ರ ಕಚೇರಿಯ ತನಿಖಾಧಿಕಾರಿ ಎದುರು ಹಾಜರಾಗುವಂತೆ ಇಬ್ಬರಿಗೂ ಸೂಚಿಸಿದೆ. ಕರ್ನಾಟಕದಲ್ಲಿ ಭಾರತ್ ಜೋಡೊ ಯಾತ್ರೆ ನಡೆಯುತ್ತಿರುವ ಕಾರಣ ಶಿವಕುಮಾರ್ ಅವರು ತನಿಖಾಧಿಕಾರಿ ಎದುರು ಹಾಜರಾಗಲು ಕಾಲಾವಕಾಶ ಕೇಳುವ ಸಾಧ್ಯತೆ ಇದೆ.

ಶಿವಕುಮಾರ್ ಅವರು ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಇ.ಡಿ ಎದುರು ಹಾಜರಾಗಿದ್ದ ವೇಳೆ, ಯಂಗ್ ಇಂಡಿಯಾಗೆ ನೀಡಿರುವ ಹಣಕಾಸು ನೆರವು ಕುರಿತು ಅಧಿಕಾರಿಗಳು ಮಾ ಹಿತಿ ಕೇಳಿದ್ದರು. ಚಾರಿಟಬಲ್ ಸಂಸ್ಥೆಯಾದ ಕಾರಣ ಕಂಪನಿಗೆ ಚೆಕ್ ಮೂಲಕ ನಾನು ಮತ್ತು ಸಹೋದರ ದೇಣಿಗೆ ನೀಡಿರುವುದಾಗಿ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ಶಿವಕುಮಾರ್ ಹೇಳಿದ್ದರು.

ಕಂಪನಿಗೆ ನೀಡಿರುವ ದೇಣಿಗೆ ಕುರಿತ ವಿವರಗಳನ್ನು ತನಿಖಾ ಸಂಸ್ಥೆಗೆ ಶೀಘ್ರ ಸಲ್ಲಿಸುವುದಾಗಿ ಬಳಿಕ ಮಾಧ್ಯಮದವರಿಗೆ ಡಿಕೆಶಿ ಹೇಳಿದ್ದರು.

ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಪ್ರಮುಖ ಪಾಲುದಾರರಾಗಿರುವ ಸ್ವಯಂ ಸೇವಾ ಸಂಸ್ಥೆ.

ಸ್ವಚ್ಛ ಭಾರತ್: ಕರ್ನಾಟಕಕ್ಕೆ 20ನೇ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ವಚ್ಛ ಭಾರತ್ ಮಿಷನ್ ಅಡಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲಾಗುವ ಕೇಂದ್ರದ ವಾರ್ಷಿಕ ಸ್ವಚ್ಛತೆಯ ಸಮೀಕ್ಷೆ-2022ರಲ್ಲಿ ತೆಲಂಗಾಣ ರಾಜ್ಯ ಅಗ್ರಸ್ಥಾನ ಮತ್ತು ಹರಿಯಾಣ ದ್ವಿತೀಯ ಸ್ಥಾನ ಪಡೆದಿದ್ದು, ಕರ್ನಾಟಕಕ್ಕೆ 20ನೇ ಸ್ಥಾನ ದೊರಕಿದೆ.

ಸಮೀಕ್ಷೆಯಲ್ಲಿ 1,000 ಅಂಕಗಳಿಗೆ ತೆಲಂಗಾಣ 971 ಮತ್ತು ಕರ್ನಾಟಕ 635 ಅಂಕಗಳನ್ನು ಪಡೆದಿವೆ. ಇನ್ನು ಹರಿಯಾಣ ರಾಜ್ಯದ ಭಿವಾನಿ ಜಿಲ್ಲೆ ದೇಶದಲ್ಲೇ ಅತ್ಯಂತ ಸ್ವಚ್ಛ ಜಿಲ್ಲೆಯೆನಿಸಿ, ಮೊದಲ ಸ್ಥಾನ ಸಂಪಾದಿಸಿದೆ. ಇನ್ನು ತೆಲಂಗಾಣದ ಜಗ್ತಿಯಲ್ ಮತ್ತು ನಿಜಾಮಾಬಾದ್ ಜಿಲ್ಲೆಗಳು ಕ್ರಮವಾಗಿ 2 ಮತ್ತು 3ನೇ ಸ್ಥಾನ ಗಿಟ್ಟಿಸಿವೆ. ರಾಷ್ಟ್ರಮಟ್ಟದಲ್ಲಿ ಸ್ವಚ್ಛ ಜಿಲ್ಲೆಗಳ ಪೈಕಿ 129ನೇ ಸ್ಥಾನದಲ್ಲಿರುವ ಉಡುಪಿ ಜಿಲ್ಲೆ ರಾಜ್ಯದಲ್ಲಿ ಅಗ್ರಸ್ಥಾನ ಪಡೆದಿದಿದೆ.

ಉಳಿದ ಜಿಲ್ಲೆಗಳ ಶ್ರೇಯಾಂಕ ವಿವರ	
ಕೊಡಗು	178
ಶಿವಮೊಗ್ಗ	219
ದಕ್ಷಿಣ ಕನ್ನಡ	294
ಚಿಕ್ಕಮಗಳೂರು	299
ರಾಮನಗರ	545

ಜಲಶಕ್ತಿ ಸಚಿವಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಗ್ರಾಮೀಣ ಪ್ರದೇಶಗಳ ಸ್ವಚ್ಛತೆ ಸಮೀಕ್ಷೆ ನಡೆಸಿ, ಶ್ರೇಯಾಂಕ ನೀಡಿದೆ. ದೇಶದಾದ್ಯಂತ 17,559 ಗ್ರಾಮ, 709 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆದಿದೆ. ಕರ್ನಾಟಕದಲ್ಲಿ 30 ಜಿಲ್ಲೆಗಳು ಮತ್ತು 753 ಗ್ರಾಮಗಳನ್ನು ಒಳಗೊಂಡು ಸಮೀಕ್ಷೆ ನಡೆದಿದೆ. ಸಮೀಕ್ಷೆಯಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಮುಟ್ಟಿನ ನೈರ್ಮಲ್ಯ ನಿರ್ವಹಣೆ, ಮುಟ್ಟಿನ ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಮತ್ತು ಬಯಲು ಮಲವಿಸರ್ಜನೆ ಮುಕ್ತ ಹಳ್ಳಿಗಳನ್ನು ಕೇಂದ್ರೀಕರಿಸಲಾಗಿತ್ತು.

'ಸ್ವತಂತ್ರ ಅಲ್ಪಸಂಖ್ಯಾತ ಸಚಿವಾಲಯ ಇರದು'

ನವದೆಹಲಿ: ಕೇಂದ್ರ ಸರ್ಕಾರವು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವನ್ನು ತೆಗೆದು ಹಾಕುವ ಸಾಧ್ಯತೆಯಿದ್ದು, ಅದನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದೊಂದಿಗೆ ವಿಲೀನಗೊಳಿಸಿ, ಇಲಾಖೆಯನ್ನಾಗಿಸುವ ಸಾಧ್ಯತೆ ಇದೆ.

'ಎನ್‌ಡಿಎ ಸರ್ಕಾರ ಬಂದಾಗಿನಿಂದಲೂ ಅಲ್ಪಸಂಖ್ಯಾತ ವ್ಯವಹಾರಗಳ ಸ್ವತಂತ್ರ ಸಚಿವಾಲಯದ ಅಗತ್ಯವಿಲ್ಲವೆಂದೇ ಪ್ರತಿಪಾದಿಸಲಾಗಿತ್ತು. ಅದಕ್ಕೆ ಬದಲಾಗಿ, ಅಲ್ಪಸಂಖ್ಯಾತ ವ್ಯವಹಾರಗಳ ಇಲಾಖೆಯನ್ನಾಗಿಸಿ, ಅದನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ತರಲು ಬಯಸಿದೆ. ಪ್ರಸ್ತುತ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಜಾರಿಗೊಳಿಸುತ್ತಿರುವ ಎಲ್ಲಾ ಯೋಜನೆ ವಿಲೀನದ ನಂತರವೂ ಮುಂದುವರಿಯುತ್ತವೆ. ಕಾಂಗ್ರೆಸ್ ಆಡಳಿತದಲ್ಲಿ ತಂದಿರುವ ಅಲ್ಪಸಂಖ್ಯಾತರ ತುಷ್ಟೀಕರಣ ನೀತಿ ಬದಲಿಸುವುದು ಮೋದಿ ಸರ್ಕಾರದ ಗುರಿ. ತುಷ್ಟೀಕರಣ ನೀತಿಯನ್ನು ಸರ್ಕಾರ ಅಳವಡಿಸಿಕೊಳ್ಳುವುದಿಲ್ಲ' ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮುಸ್ಲಿಮರು, ಕ್ರೈಸ್ತರು, ಬೌದ್ಧರು, ಸಿಖ್ಖರು, ಪಾರ್ಸಿ, ಜೈನರಿಗೆ ಸಂಬಂಧಿಸಿದ ವಿಷಯಗಳಿಗೆ ಗಮನಹರಿಸಲು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಇದ್ದ ಅಲ್ಪಸಂಖ್ಯಾತ ವ್ಯವಹಾರಗಳ ಇಲಾಖೆಗೆ ಪ್ರತ್ಯೇಕ ಸಚಿವಾಲಯವನ್ನು 2006ರಲ್ಲಿ ಯುಪಿಎ ಸರ್ಕಾರ ರಚನೆ ಮಾಡಿತ್ತು.

ಮೂಸೆವಾಲಾ ಹತ್ಯೆ: ಆರೋಪಿ ಪರಾರಿ

ಚಂಡೀಗಢ: ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣದ ಆರೋಪಿ ದೀಪಕ್ ಟಿನು ಪೊಲೀಸ್ ವಶದಿಂದ ಶನಿವಾರ ರಾತ್ರಿ ಪರಾರಿಯಾಗಿದ್ದಾನೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ಪ್ರಕರಣವೊಂದರ ವಿಚಾರಣೆಗಾಗಿ ಮನ್ಸಾ ಪೊಲೀಸರು ಈತನನ್ನು ಗೋಯಿಂದ್‌ವಾಲ್ ಸಾಹಿಬ್ ಜೈಲಿನಿಂದ ಕರೆತಂದಾಗ ತಪ್ಪಿಸಿಕೊಂಡಿದ್ದಾನೆ.

'ಹಲೋ' ಬದಲು 'ವಂದೇ ಮಾತರಂ'

ಒಂದನೇ ಪುಟದಿಂದ

'ಹಲೋ ಎನ್ನುವುದು ಪಾಶ್ಚಿಮಾತ್ಯ ಸಂಸ್ಕೃತಿ. ಈ ಪದಕ್ಕೆ ಅರ್ಥವೇ ಇಲ್ಲ' ಎಂದು ಹೇಳಲಾಗಿದೆ.

'ಸರ್ಕಾರದ ಸುತ್ತೋಲೆ ಒಪ್ಪತಕ್ಕದ್ದಲ್ಲ. ಮುಸ್ಲಿಂ ಸಮುದಾಯದವರು 'ವಂದೇ ಮಾತರಂ' ಎಂದು ಹೇಳುವುದಿಲ್ಲ. ಅದು ಅವರ ನಂಬಿಕೆಗೆ ವಿರುದ್ಧವಾದುದು. ಬೇಕಿದ್ದರೆ 'ಸಾರೆ ಜಹಾ ಸೆ ಅಚ್ಛಾ' ಎಂದು ಹೇಳುತ್ತಾರೆ' ಎಂದು ಸಮಾಜವಾದಿ ಪಕ್ಷದ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಅಬು ಅಸೀಂ ಆಜ್ಮಿ ಪ್ರತಿಕ್ರಿಯಿಸಿದ್ದಾರೆ.

'ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಬಿಜೆಪಿಯ ಒತ್ತಡಕ್ಕೆ ಮಣಿದು ಈ ನಿರ್ಣಯ ಅಂಗೀಕರಿಸಿದ್ದಾರೆಯೇ' ಎಂದೂ ಪ್ರಶ್ನಿಸಿದ್ದಾರೆ.

'ರೈತರಿಗೆ ಗೌರವ ಸೂಚಿಸುವ ಸಲುವಾಗಿ 'ಜೈ ಕಿಸಾನ್' ಎಂದು ಹೇಳುವಂತಾಗಲಿ. ಈ ಸಂಬಂಧ ಅಭಿಯಾನ ನಡೆಸಲಿ. ಭ್ರಷ್ಟಾಚಾರ ಮುಕ್ತ ಸೇವೆ ಒದಗಿಸುವ ಉದ್ದೇಶದಿಂದ ನೌಕರರು ದೂರವಾಣಿ ಕರೆ ಸ್ವೀಕರಿಸುವಾಗ 'ಜೈ ಸೇವಾ' ಎಂದೂ ಹೇಳಲಿ' ಎಂದು ಶಿವಸೇನಾ ವಕ್ತಾರ ಕಿಶೋರ್ ತಿವಾರಿ ಅವರು ಒತ್ತಾಯಿಸಿದ್ದಾರೆ.

'ವಂದೇ ಮಾತರಂ' ಎಂದು ಹೇಳುವಾಗ ಜನರ ಮನಸ್ಸಿನಲ್ಲಿ ಹೆಮ್ಮೆ ಹಾಗೂ ದೇಶಪ್ರೇಮದ ಭಾವ ಮೂಡಬೇಕು. ಈ ವಿಚಾರದಲ್ಲಿ ನೌಕರರು ಹಾಗೂ ನಾಗರಿಕರನ್ನು ಬಲವಂತಪಡಿಸುವುದು ಸರಿಯಲ್ಲ. ವೈಯಕ್ತಿಕ ಸಂಖ್ಯೆಗೆ ಕರೆಬಂದಾಗಲೂ ವಂದೇ ಮಾತರಂ ಹೇಳಬೇಕೆಂದು ಕಡ್ಡಾಯಗೊಳಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ' ಎಂದು ಎನ್‌ಸಿಪಿ ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದ್ದಾರೆ.

'ಇನ್ನು ಮುಂದೆ 'ಹಲೋ' ಬದಲು 'ವಂದೇ ಮಾತರಂ' ಎಂದೇ ಹೇಳಬೇಕೆಂದು ರಾಜ್ಯದ ನಾಗರಿಕರಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಈ ಸಂಬಂಧ ಅವರಲ್ಲಿ ಅರಿವು ಮೂಡಿಸುವುದಕ್ಕಾಗಿ ಅಭಿಯಾನವನ್ನೂ ಕೈಗೊಂಡಿದ್ದೇವೆ' ಎಂದು ಸಂಸ್ಕೃತಿ ಸಚಿವ ಸುಧೀರ್ ಮುಂಗಟಿವಾರ್ ಭಾನುವಾರ ಹೇಳಿದ್ದಾರೆ.

'ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ವಂದೇ ಮಾತರಂ' ಘೋಷ ವಾಕ್ಯ ಮಹತ್ವದ ಪಾತ್ರ ವಹಿಸಿತ್ತು. ಭಗತ್ ಸಿಂಗ್ ಅವರ ಕೊನೆಯ ಮಾತೂ 'ವಂದೇ ಮಾತರಂ' ಎಂಬುದಾಗಿತ್ತು. ಇದನ್ನು ನಾಗರಿಕರು ನಿತ್ಯವೂ ಬಳಸುವಂತಾಗಬೇಕು. ಇದಕ್ಕಾಗಿ ನಾವು 'ವಂದೇ ಮಾತರಂ' ಚಳವಳಿ ಆರಂಭಿಸಲಿದ್ದೇವೆ' ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ವಿಶೇಷ ಭೂಸ್ವಾಧೀನಾಧಿಕಾರಿಗಳು-2ರವರ ಕಛೇರಿ, ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ, ನಂ. 14/3, 1ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಬಿಎಂಐಸಿಪಿ/ಎಲ್‌ಎಕ್ಯೂ(1)/ಸಾಮಾನ್ಯ ಐತೀರ್ಮ-01/2017-18 ದಿನಾಂಕ: 28/09/2022

ತಿಳುವಳಿಕೆ ಪತ್ರ

ವಿಷಯ: ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಐತೀರ್ಮ ರಚಿಸುವ ಬಗ್ಗೆ-

ಉಲ್ಲೇಖ: 1. ಈ ಕಛೇರಿಯಿಂದ ಭೂಸ್ವಾಧೀನ ಕಾಯ್ದೆ ಕಲಂ 12(2) ರಡಿ ಜಾರಿ ಮಾಡಿರುವ ನೋಟೀಸು ದಿನಾಂಕ: 13.06.2019, 14.06.2019, 25.06.2019 ಮತ್ತು 17.06.2019

2. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿದ್ದ W.P. ಪ್ರಕರಣ ಸಂಖ್ಯೆ: 26085/2019, ಆದೇಶ ದಿನಾಂಕ: 18.04.2022.

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ, ಭೂಸ್ವಾಧೀನವಾಗಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಗ್ರಾಮಗಳ ಸರ್ವೆ ನಂಬರ್ ಜಮೀನುಗಳಿಗೆ ಐತೀರ್ಮ ರಚಿಸಿ, ಪರಿಹಾರ ಧನ ನಿಗಧಿಪಡಿಸಿ ಉಲ್ಲೇಖ (1)ರ ರೀತ್ಯಾ ನೋಟೀಸು ಜಾರಿ ಮಾಡಲಾಗಿತ್ತು.

ಸದರಿ ಐತೀರ್ಮಗಳನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಉಲ್ಲೇಖ (2)ರ ರೀತ್ಯಾ ಪ್ರಕರಣ ದಾಖಲಾಗಿತ್ತು. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಈ ಹಿಂದೆ ರಚಿಸಲಾಗಿದ್ದ ಐತೀರ್ಮಗಳನ್ನು ರದ್ದುಪಡಿಸಿ, ಮತ್ತೆ ಹೊಸದಾಗಿ ಐತೀರ್ಮಗಳನ್ನು ರಚಿಸಲು ಆದೇಶಿಸಿರುತ್ತದೆ.

ಆದ್ದರಿಂದ, ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟಂತೆ ಅಪೇಕ್ಷಿಸುವ ಪರಿಹಾರ ದ್ರವ್ಯ ತಪಶೀಲನ್ನು ಸಮರ್ಥಿಸಿಕೊಳ್ಳುವ ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 15-10-2022ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ತದನಂತರ ಕಾನೂನು ರೀತ್ಯ ಐತೀರ್ಮ ರಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಯುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು, ತಾಲ್ಲೂಕು: ಬೆಂಗಳೂರು ದಕ್ಷಿಣ, ಹೋಬಳಿ: ಬೇಗೂರು

1. ಗ್ರಾಮ: ಕೋನಪ್ಪನ ಅಗ್ರಹಾರ ಸರ್ವೆ ನಂಬರ್‌ಗಳು: 73/4ಬಿ1
2. ಗ್ರಾಮ: ದೊಡ್ಡತೋಗೂರು ಸರ್ವೆ ನಂಬರ್‌ಗಳು: 17/3, 27/2ಎ, 30/1, 31/1, 34/2, 34/3, 34/4
3. ಗ್ರಾಮ: ಚಿಕ್ಕತೋಗೂರು ಸರ್ವೆ ನಂಬರ್‌ಗಳು: 35/2
4. ಗ್ರಾಮ: ಬಸಾಪುರ ಸರ್ವೆ ನಂಬರ್‌ಗಳು: 28/4, 29/5, 37
5. ಗ್ರಾಮ: ಬೇಗೂರು ಸರ್ವೆ ನಂಬರ್‌ಗಳು: 40/2, 45/1, 49/1, 86
6. ಗ್ರಾಮ: ಎಲೇನಹಳ್ಳಿ ಸರ್ವೆ ನಂಬರ್‌ಗಳು: 48/2, 61/2, 66/3, 66/4
8. ಗ್ರಾಮ: ಬಸವನಪುರ ಸರ್ವೆ ನಂಬರ್‌ಗಳು: 43/1

ಜಿಲ್ಲೆ: ಬೆಂಗಳೂರು, ತಾಲ್ಲೂಕು: ಬೆಂಗಳೂರು ದಕ್ಷಿಣ, ಹೋಬಳಿ: ಉತ್ತರಹಳ್ಳಿ

7. ಗ್ರಾಮ: ಗೊಟ್ಟಿಗೆರೆ ಸರ್ವೆ ನಂಬರ್‌ಗಳು: 64/1, 64/2, 64/3, 64/4, 64/5, 65/3, 65/4, 69/1, 69/2, 69/3, 70, 101/4, 101/6, 102, 103/1, 103/2, 104/1
9. ಗ್ರಾಮ: ಪಿಲ್ಲಗಾನಹಳ್ಳಿ ಸರ್ವೆ ನಂಬರ್‌ಗಳು: 3, 4
10. ಗ್ರಾಮ: ಕೆಂಭತ್ತನಹಳ್ಳಿ ಸರ್ವೆ ನಂಬರ್‌ಗಳು: 37, 53
11. ಗ್ರಾಮ: ಗೊಲ್ಲಹಳ್ಳಿ ಸರ್ವೆ ನಂಬರ್‌ಗಳು: 45/7, 45/8ಬಿ
12. ಗ್ರಾಮ: ಅಂಜನಾಪುರ ಸರ್ವೆ ನಂಬರ್‌ಗಳು: 15/1, 22/2
13. ಗ್ರಾಮ: ತಲಘಟ್ಟಪುರ ಸರ್ವೆ ನಂಬರ್‌ಗಳು: 34/3, 36/2, 38, 39/1ಎ1/, 39/1ಎ2, 39/1ಬಿ, 39/2ಎ, 39/2ಬಿ1, 39/2ಬಿ2, 40/3, 41/2, 41/3, 41/4, 41/5
14. ಗ್ರಾಮ: ಯು.ಎಂ. ಕಾವಲ್ ಸರ್ವೆ ನಂಬರ್‌ಗಳು: 10/1ಎ, 11/2, 21, 22/2, 24/1, 24/2, 24/3
15. ಗ್ರಾಮ: ಹೊಸಕೆರೆಹಳ್ಳಿ ಸರ್ವೆ ನಂಬರ್‌ಗಳು: 14, 29, 31/5, 34/4, 35/4, 69, 70, 71/2, 71/3, 72, 73, 75/1, 75/2, 77, 79
16. ಗ್ರಾಮ: ಚನ್ನಸಂದ್ರ ಸರ್ವೆ ನಂಬರ್‌ಗಳು: 1/1, 1/2, 1/3, 1/5, 1/7ಎ, 1/8, 2/1, 2/2, 8/1, 8/3, 9, 16, 17/2, 19/6, 27, 29, 30, 32, 34/6

ಜಿಲ್ಲೆ: ಬೆಂಗಳೂರು, ತಾಲ್ಲೂಕು: ಬೆಂಗಳೂರು ದಕ್ಷಿಣ ಹೋಬಳಿ: ಕೆಂಗೇರಿ

17. ಗ್ರಾಮ ಬಿ.ಎಂ. ಕಾವಲ್ ಸರ್ವೆ ನಂಬರ್‌ಗಳು: 20/2, 20/3, 20/13, 20/14, 27/8, 34/1, 58/1, 60/1, 60/2, 60/3, 61, 62/2, 107, 208, 245
18. ಗ್ರಾಮ: ಸೋಂಪುರ ಸರ್ವೆ ನಂಬರ್‌ಗಳು: 3, 27/4ಎ, 32, 35/2, 35/3, 35/4
19. ಗ್ರಾಮ: ವರಹಾಸಂದ್ರ ಸರ್ವೆ ನಂಬರ್‌ಗಳು: 18, 19, 20
20. ಗ್ರಾಮ: ಕೆಂಗೇರಿ ಗೊಲ್ಲಹಳ್ಳಿ ಸರ್ವೆ ನಂಬರ್‌ಗಳು: 11/2, 12
21. ಗ್ರಾಮ: ಹೆಮ್ಮಿಗೆಪುರ ಸರ್ವೆ ನಂಬರ್‌ಗಳು: 58/3
22. ಗ್ರಾಮ: ಕೆಂಗೇರಿ ಸರ್ವೆ ನಂಬರ್‌ಗಳು: 125/2, 125/4, 126, 137/1, 141, 145/6, 147/1, 147/2, 147/3, 147/4, 147/5, 147/6, 147/8, 147/9, 147/10, 147/11, 148/2ಎ, 148/2ಬಿ, 151/3ಬಿ, 154/10
23. ಗ್ರಾಮ: ಕೊಮ್ಮಘಟ್ಟ ಸರ್ವೆ ನಂಬರ್‌ಗಳು: 27/2ಎ, 127, 139, 172, 176, 182, 183, 194, 196, 200
24. ಗ್ರಾಮ: ರಾಮಸಂದ್ರ ಸರ್ವೆ ನಂಬರ್‌ಗಳು: 75
25. ಗ್ರಾಮ: ದಿವಟಿಗಿರಾಮನಹಳ್ಳಿ ಸಿಟಿ ಸರ್ವೆ ನಂಬರ್‌ಗಳು: 663
26. ಗ್ರಾಮ: ಪಂತರಪಾಳ್ಯ ಸರ್ವೆ ನಂಬರ್‌ಗಳು: 9, 10, 11, 13, 20, 21, 34
27. ಗ್ರಾಮ: ಗಾಣಕಲ್ಲು ಸರ್ವೆ ನಂಬರ್‌ಗಳು: 7/7, 7/9, 9/4

ವಿಶೇಷ ಭೂಸ್ವಾಧೀನಾಧಿಕಾರಿಗಳು-2,
ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ನೃಪತುಂಗ ರಸ್ತೆ, ಬೆಂಗಳೂರು.

ಮೈಸೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು-570024. ದಿನಾಂಕ: 01-10-2022

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಉ.ಆ(ಆ)/ಕೇ.ಉ..ಶಾ/ಟಿ..ಎನ್/01/2022-23

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ **ಪಾಲಿಕೆಯ ವಿವಿಧ ಮಾದರಿಯ ವಾಹನಗಳಿಗೆ ಟೈರ್, ಟ್ಯೂಬ್ ಮತ್ತು ಪ್ಲಾಪ್‌ಗಳನ್ನು ಸರಬರಾಜು ಮಾಡುವ** ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇಂ.ಎಂ.ಡಿ ಹಾಗೂ ಇನ್ನೀತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಹಾಗೂ ದಿನಾಂಕ: 01-10-2022 ಬೆಳಿಗ್ಗೆ 11.00 ರ ನಂತರ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೈಬ್ ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: 27.10.2022 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 29-10-2022 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆಯಿಂದ ದೂರವಾಣಿ ಮುಖೇನ: 9972912599 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು - 1

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)

ಫೋನ್/ಫ್ಯಾಕ್ಸ್ 08199-230018. ಇ-ಮೇಲ್: eeubpdvn4@gmail.com

ಸಂಖ್ಯೆ : ಕಾಇಂ/ವಿಜನಿನಿ/ಭಮೇಯೋ/ವಿ-4/ಹೊ/ಟೆಂಡರ್‌ಸಂಖ್ಯೆ:11,12&13/2022-23 ದಿನಾಂಕ:20/09/2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲೆ.ಶೀರ್ಷಿಕೆ 4701 ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ **ಇಂಡೆಂಟ್ ಸಂಖ್ಯೆ: "2271, 2273 & 2274"** ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್ ಕರೆಯಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: **28/09/2022** ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ:**13/10/2022 ರ ಸಂಜೆ 5.25** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು._ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:**12.10.2022** ರ ಅಪರಾಹ್ನ **3.30** ಗಂಟೆಯವರೆಗೆ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್‌ನ್ನು **ದಿನಾಂಕ: 14.10.2022** ರಂದು ಸಂಜೆ **5.30** ಗಂಟೆಯ ನಂತರ ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ರವರ ಕಛೇರಿಯಲ್ಲಿ ಹಾಗೂ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. **ವಿ.ಸೂ:- ಇ.ಪಿ.ಎಫ್ ನೋಂದಣೆ ಕಡ್ಡಾಯವಾಗಿದ್ದು, ಇ.ಪಿ.ಎಫ್ ನೋಂದಣೆ ಇಲ್ಲದ ಗುತ್ತಿಗೆದಾರರ ಟೆಂಡರ್ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು.**

DIPR/CTA/MCA/587/2022-23 ಸಹಿ/- **ಕಾರ್ಯಪಾಲಕ ಇಂಜಿನಿಯರ್**, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532-225778 & 234747

ಇ-ಪ್ರೊಕ್ಯುರ್‌ಮೆಂಟ್ ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1,2,3 & 4)

THESE WORKS ARE GENARAL SC & ST CONTRACTORS

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ ಲೋಇ/ರಾವಿ/ತಾಂಶಾ-4/ಟೆಂಪ್ರ/2022-23/3531 ದಿನಾಂಕಃ 29-09-2022 2)ಕಾಮಗಾರಿ ಹೆಸರು ರಾಯಚೂರು ಜಿಲ್ಲೆಯ ಒಟ್ಟು 13 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ.3) ಕಾಮಗಾರಿಯ ಮೊತ್ತ ಕನಿಷ್ಠ ರೂ. 1090362.22 ಗರಿಷ್ಠ ರೂ. 32518233.72 4) ಮುಂಗಡ ಠೇವಣಿ ಮೊತ್ತ ಕನಿಷ್ಠ ರೂ. 21000.00 ಗರಿಷ್ಠ ರೂ. 488000.00 5)ಕಾಲಾವಧಿ (ಮಳೆಗಾಲ ಸೇರಿ) ಕನಿಷ್ಠ 4 (ನಾಲ್ಕು) ತಿಂಗಳು ಗರಿಷ್ಠ 6 (ಆರು) ತಿಂಗಳು 6)ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ 17-10-2022 ಸಂಜೆ 4.00 ಗಂಟೆಯವರೆಗೆ 7)ಟೆಂಡರ್ ತೆರೆಯುವ ದಿನಾಂಕ 18-10-2022 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc.karnataka.gov.in ಮುಖಾಂತರ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ
ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/343//ಎಂ.ಸಿ.&ಎ/2022-23

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ.ಎಂ.ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029 ಫೋನ್ 080-25536625 / 25536789

ಸಂಖ್ಯೆ: ಕಹಾಮ/ಅಭಿ/ಎನ್.ಪಿ.ಎಫ್.ಪಿ-ಕಟ್ಟಡ ವಿಸ್ತರಣೆ/01614/22-23 ದಿನಾಂಕ: 01-10-2022

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳವು ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical and Financial) ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://eproc.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Helpdesk No-080 23010900 / 23010901 e-mail: hphelpdesk.blr@intarvo.com]

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.	ಇ.ಎಂ.ಡಿ. ರೂ.ಪೈ	ಮುಕ್ತಾಯದ ಅವಧಿ
1	ಕಹಾಮದ ನಂದಿನಿ ಪ್ಯಾಕೇಜಿಂಗ್ ಫಿಲಂ ಘಟಕದ ಪ್ಲಾಂಟ್ ಕಟ್ಟಡ ವಿಸ್ತರಣಾ ಕಾಮಗಾರಿ ಕೆಲಸಗಳು - ಮುನ್ನೇಕೊಳಾಲು, ಬೆಂಗಳೂರು.	98.83 ಲಕ್ಷಗಳು (ಜಿ.ಎಸ್.ಟಿ. ಪ್ರತ್ಯೇಕ)	2,00,000/-	6 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 03-10-2022 ರಿಂದ 02-11-2022 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 02-11-2022 ರ ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover 1) ತೆರೆಯುವ ದಿನಾಂಕ 03-11-2022 ರಂದು ಸಾಯಂಕಾಲ 4:30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್ ತಿದ್ದುಪಡಿ / ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/-
ನಿರ್ದೇಶಕರು (ಅಭಿಯಂತರ-1)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ
ಬಂಡಿಗಟ್ಟಲೆ ಉಪದೇಶಕ್ಕಿಂತ ಒಂದು ಚಿಟಿಕೆ ಸಹನೆ ಹೆಚ್ಚು ಶಕ್ತಿಯುತವಾದುದು.
-ಮಹಾತ್ಮ ಗಾಂಧಿ

ವೈದ್ಯಕೀಯ ಗರ್ಭಪಾತ ಕುರಿತ ತೀರ್ಪು ಕಾನೂನಿನ ಉದಾರವಾದಿ ವ್ಯಾಖ್ಯಾನ

ಗರ್ಭಪಾತದ ಹಕ್ಕಿನ ವಿಚಾರವಾಗಿ ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಒಂದು ತೀರ್ಪು ಮಹಿಳೆಗೆ ತನ್ನ ದೇಹದ ವಿಚಾರದಲ್ಲಿ ಇರುವ ಸ್ವಾಯತ್ತೆ ಹಾಗೂ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವಂತಿದೆ. ಅಲ್ಲದೆ, ಮಹಿಳೆಗೆ ಇರುವ ಸಮಾನತೆಯ ಹಕ್ಕು ಮತ್ತು ಖಾಸಗಿತನದ ಹಕ್ಕನ್ನು ಈ ತೀರ್ಪು ಪುನರುಚ್ಚರಿಸಿದೆ. ಈ ತೀರ್ಪು ಸಂತಾನೋತ್ಪತ್ತಿ ವಿಚಾರದಲ್ಲಿ ಮಹಿಳೆಗೆ ಇರುವ ಹಕ್ಕಿನ ವ್ಯಾಪ್ತಿಯನ್ನು ವಿಸ್ತರಿಸಿ, ಅದನ್ನು ಆಕೆಯ ಮೂಲಭೂತ ಹಕ್ಕುಗಳ ಜೊತೆಯಲ್ಲಿ ಇರಿಸಿದೆ. ಹೀಗಾಗಿ ಇದು ಮೈಲಿಗಲ್ಲು ಎನ್ನಬಹುದಾದ ತೀರ್ಪು. ಮಹಿಳೆಗೆ ಮದುವೆ ಆಗಿರಲಿ, ಆಗದಿರಲಿ, ಆಕೆ ಸಮ್ಮತಿಯ ಸಂಬಂಧ ಹೊಂದಿರಲಿ, ಆಕೆ ವೈದ್ಯಕೀಯ ಗರ್ಭಪಾತ ಕಾಯ್ದೆಯ ಪ್ರಕಾರ ಗರ್ಭಪಾತಕ್ಕೆ ಅವಕಾಶ ಕೋರಲು ಸಮಾನ ಅವಕಾಶ ಇದೆ ಎಂದು ಕೋರ್ಟ್ ಸಾರಿದೆ. 25 ವರ್ಷ ವಯಸ್ಸಿನ ಅವಿವಾಹಿತ ಮಹಿಳೆಯೊಬ್ಬರು ಗರ್ಭ ಧರಿಸಿದ 24 ವಾರಗಳಲ್ಲಿ ತಮಗೆ ಗರ್ಭಪಾತಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಿರಸ್ಕರಿಸಿತ್ತು. ವೈದ್ಯಕೀಯ ಗರ್ಭಪಾತ ನಿಯಮ- 2003, ಮದುವೆ ಆಗಿಲ್ಲದ ಹಾಗೂ ಸಮ್ಮತಿಯ ಸಂಬಂಧದಲ್ಲಿ ಇರುವ ಮಹಿಳೆಯರಿಗೆ ಅನ್ವಯವಾಗುವುದಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಇದನ್ನು ಪ್ರಶ್ನಿಸಿ ಮಹಿಳೆ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಆ ಮಹಿಳೆಯು ತನ್ನ ಸಂಗಾತಿಯ ಜೊತೆಗಿನ ಸಂಬಂಧವನ್ನು ಕಡಿದುಕೊಂಡಿದ್ದ ಕಾರಣದಿಂದಾಗಿ ಗರ್ಭಪಾತಕ್ಕೆ ಮುಂದಾಗಿದ್ದರು. ಮಹಿಳೆಯ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಮಹತ್ವದ ತೀರ್ಪು ನೀಡಿದೆ.

ಮಹಿಳೆಯ ಸ್ವಾತಂತ್ರ್ಯ, ಆಯ್ಕೆಯ ವಿಚಾರದಲ್ಲಿ ಆಕೆಗೆ ಇರುವ ಹಕ್ಕಿಗೆ ಮಹತ್ವವಿದೆ ಎಂಬುದನ್ನು ಈ ತೀರ್ಪು ಸಾರಿ ಹೇಳಿದೆ

ವೈದ್ಯಕೀಯ ಗರ್ಭಪಾತ ಕಾಯ್ದೆ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು ಕಾಲಕಾಲಕ್ಕೆ ಪರಿಷ್ಕೃತಗೊಂಡಿವೆ, ಹೆಚ್ಚು ಪ್ರಗತಿಪರವಾಗಿವೆ. ಸಮಾಜದ ರೀತಿನೀತಿಗಳು ಹಾಗೂ ಮಹಿಳೆಯ ಹಕ್ಕುಗಳ ಕುರಿತ ಪರಿಕಲ್ಪನೆಗಳು ಬದಲಾದಂತೆಲ್ಲ ಅವುಗಳಿಗೆ ಅನುಗುಣವಾಗಿ ನಿಯಮಗಳು ಬದಲಾವಣೆ ಕಂಡಿವೆ. 2021ರಲ್ಲಿ ತರಲಾದ ತಿದ್ದುಪಡಿಯು, ಭ್ರೂಣವು 20ರಿಂದ 24ನೆಯ ವಾರಗಳ ನಡುವೆ ಇದ್ದಾಗ ಗರ್ಭಪಾತಕ್ಕೆ ಅವಕಾಶ ಕೋರಲು ಮೊದಲಿಗಿಂತ ಹೆಚ್ಚಿನ ಕಾರಣಗಳ ಅಡಿಯಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿದೆ. ತಿದ್ದುಪಡಿಯು ಅವಿವಾಹಿತ ಹಾಗೂ ವಿವಾಹಿತ ಮಹಿಳೆಯರನ್ನು ಭಿನ್ನವಾಗಿ ಕಂಡಿಲ್ಲದ ಕಾರಣ, ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಅವಿವಾಹಿತ ಮಹಿಳೆಗೂ ಗರ್ಭಪಾತಕ್ಕೆ ಅವಕಾಶ ಕೋರಲು ಅನುವು ಮಾಡಿಕೊಟ್ಟಿದೆ. 'ವೈವಾಹಿಕ ಸಂಬಂಧದಲ್ಲಿ ಬದಲಾವಣೆ' ಎಂಬ ಪದಗುಚ್ಛವನ್ನು ಕೋರ್ಟ್ ಹೆಚ್ಚು ಉದಾರವಾದಿ ನೆಲೆಯಿಂದ ವ್ಯಾಖ್ಯಾನಿಸಿದೆ. ಮಹಿಳೆಯ ಸಂಗಾತಿ ಆಕೆಯನ್ನು ತೊರೆದರೆ, ಅದು ಕೂಡ ಗರ್ಭಪಾತಕ್ಕೆ ಅವಕಾಶ ಕೋರಲು ಒಂದು ಕಾರಣವಾಗಬಲ್ಲದು ಎಂದು ಹೇಳಿದೆ. ಜೀವಕ್ಕೆ ಅಥವಾ ಆರೋಗ್ಯಕ್ಕೆ ಅಪಾಯ ಎದುರಾಗಿದ್ದರೆ 24 ವಾರಗಳವರೆಗಿನ ಭ್ರೂಣವನ್ನು ತೆಗೆಸಲು ಅವಕಾಶ ಇದೆ ಎಂದು ಕಾನೂನು ಹೇಳುತ್ತದೆ. ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲದೆ ಮಾನಸಿಕ ಆರೋಗ್ಯಕ್ಕೆ ಅಪಾಯ ಎದುರಾಗಿದ್ದರೂ ಕಾನೂನಿನ ಅಡಿ ಅವಕಾಶ ಕೋರಬಹುದು ಎಂದು ಕೋರ್ಟ್ ಹೇಳಿದೆ. ಕಾನೂನನ್ನು ಹೆಚ್ಚು ಉದಾರವಾಗಿ ವ್ಯಾಖ್ಯಾನಿಸಿರುವುದು ಮಹಿಳೆಯ ಸ್ವಾತಂತ್ರ್ಯ, ಆಯ್ಕೆಯ ವಿಚಾರದಲ್ಲಿ ಆಕೆಗೆ ಇರುವ ಹಕ್ಕಿಗೆ ಮಹತ್ವ ಇದೆ ಎಂಬುದನ್ನು ಸಾರಿದೆ. ಅಲ್ಲದೆ, ಇವುಗಳನ್ನು ಪುರುಷ ಪ್ರಧಾನ ವ್ಯವಸ್ಥೆಯ ಕಟ್ಟುಪಾಡುಗಳಿಂದ ಹೊರಗೆ ತಂದಿದೆ. ಈ ಕಾಯ್ದೆಯ ಅಡಿಯಲ್ಲಿ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಗುರುತನ್ನು ಬಹಿರಂಗಪಡಿಸುವಂತಿಲ್ಲ ಎಂದು ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ. ಆದರೆ, ಇದು ಇಷ್ಟು ದಿನ ಜಾರಿಯಲ್ಲಿ ಇರಲಿಲ್ಲ ಎಂಬುದು ಆಶ್ಚರ್ಯಕರ.

ಗರ್ಭಪಾತದ ಕಾನೂನಿನ ವ್ಯಾಪ್ತಿಯಲ್ಲಿ ಅತ್ಯಾಚಾರ ಎಂಬ ಪದದ ವ್ಯಾಖ್ಯಾನವನ್ನು ಕೋರ್ಟ್ ಹಿಗ್ಗಿಸಿದೆ, ವೈವಾಹಿಕ ಸಂಬಂಧದ ಒಳಗೆ ನಡೆಯುವ ಅತ್ಯಾಚಾರವನ್ನೂ ಅದು ಗುರುತಿಸಿದೆ. ಇದು, ಈ ತೀರ್ಪಿನ ಇನ್ನೊಂದು ಮಹತ್ವದ ಅಂಶ. ವಿವಾಹಿತ ಮಹಿಳೆ ಕೂಡ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಬಹುದು, ಸಮ್ಮತಿ ಇಲ್ಲದಿದ್ದರೂ ಪತಿ ಲೈಂಗಿಕ ಕ್ರಿಯೆ ನಡೆಸಿ ಮಹಿಳೆ ಗರ್ಭವತಿ ಆಗಬಹುದು ಎಂದು ಕೋರ್ಟ್ ಹೇಳಿದೆ. ಅಂದರೆ, ವೈವಾಹಿಕ ಸಂಬಂಧದ ಒಳಗಿನ ಅತ್ಯಾಚಾರಕ್ಕೆ ಗುರಿಯಾಗಿ ಗರ್ಭಧಾರಣೆ ಮಾಡುವ ಮಹಿಳೆ ಕೂಡ 24 ವಾರಗಳ ಒಳಗೆ ಗರ್ಭಪಾತಕ್ಕೆ ಅವಕಾಶ ಕೋರಬಹುದು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಇದರ ಅರ್ಥ ವೈವಾಹಿಕ ಸಂಬಂಧದ ಒಳಗಿನ ಅತ್ಯಾಚಾರವು ಅಪರಾಧವೆಂದು ಪರಿಗಣಿತವಾಗಿದೆ ಎಂಬುದಲ್ಲ. ಬದಲಿಗೆ, ಅದು ಗರ್ಭಪಾತಕ್ಕೆ ಅವಕಾಶ ಕೋರಲು ಒಂದು ಕಾರಣ ಎಂದು ಅರ್ಥ. ಈ ವ್ಯಾಖ್ಯಾನವು, ವೈವಾಹಿಕ ಸಂಬಂಧದೊಳಗಿನ ಅತ್ಯಾಚಾರವನ್ನು ಅಪರಾಧವೆಂದು ಪರಿಗಣಿಸಬೇಕು ಎಂಬ ಆಗ್ರಹಕ್ಕೆ ಬಲ ತಂದುಕೊಡಬೇಕು.

ಮಹಿಳಾ ಉದ್ಯೋಗಿಗಳ ಪ್ರಮಾಣ ಹೆಚ್ಚಳದಿಂದ ದೇಶದ ಆರ್ಥಿಕತೆಗೆ ಬಲ

ದುಡಿಮೆಯಲ್ಲಿ ಮಹಿಳಾ ಪ್ರಾತಿನಿಧ್ಯ

ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ಅಂತರರಾಷ್ಟ್ರೀಯ ಹೈನು ಪ್ರತಿಷ್ಠಾನದ ವಿಶ್ವ ಹೈನು ಶೃಂಗಸಭೆಯನ್ನು ಇತ್ತೀಚೆಗೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, '2014ರಲ್ಲಿ 14.6 ಕೋಟಿ ಟನ್ನುಗಳಷ್ಟಿದ್ದ ಹಾಲು ಉತ್ಪಾದನೆಯು 2022ರಲ್ಲಿ 21 ಕೋಟಿ ಟನ್ನುಗಳಿಗೆ ಏರಿದೆ. ಈ ಹೆಚ್ಚಳದ ಸಂಪೂರ್ಣ ಶ್ರೇಯ ಮಹಿಳೆಯರಿಗೆ ಸಲ್ಲುತ್ತದೆ' ಎಂದರು. 'ಹೈನು ವಲಯದಲ್ಲಿ ದುಡಿಯುವ ಕಾರ್ಮಿಕರ ಪೈಕಿ ಶೇ 70ರಷ್ಟು ಮಂದಿ ಮಹಿಳೆಯರು ಮತ್ತು ಹೈನು ಸಹಕಾರ ಸಂಘಗಳ ಶೇ 30ರಷ್ಟು ಸದಸ್ಯರು ಮಹಿಳೆಯರು' ಎಂದು ಶ್ಲಾಘಿಸಿದರು.

ಆದರೆ, ಒಟ್ಟಾರೆಯಾಗಿ ಉದ್ಯೋಗ ಕ್ಷೇತ್ರದಲ್ಲಿನ ಮಹಿಳಾ ಪ್ರಾತಿನಿಧ್ಯವನ್ನು ಅವಲೋಕಿಸಿದಾಗ ದೊರೆಯುವ ಚಿತ್ರಣ ಬೇರೆಯೇ ಆಗಿದೆ. ಸಾಮಾನ್ಯವಾಗಿ, ಒಂದು ದೇಶವು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಂತೆ ಕಾರ್ಮಿಕ ವರ್ಗದಲ್ಲಿ ಮಹಿಳೆಯರ ಪ್ರಮಾಣವೂ ಹೆಚ್ಚಾಗುತ್ತದೆ ಎಂಬ ಭಾವನೆ ಇದೆ. ವಿಶ್ವಬ್ಯಾಂಕ್‌ನ 'ಸೌತ್ ಏಷ್ಯಾ ಎಕನಾಮಿಕ್ ಫೋಕಸ್' ಹೆಸರಿನ ದ್ವೈವಾರ್ಷಿಕ ಸಂಪುಟದಲ್ಲಿ (2022) ಮಹಿಳಾ ಕಾರ್ಮಿಕರ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಅಧ್ಯಯನ ವರದಿಯು ಭಾರತದಲ್ಲಿ ಇದು ಸತ್ಯಕ್ಕೆ ದೂರವಾದ ಸಂಗತಿ ಎನ್ನುತ್ತದೆ.

ಉದ್ಯೋಗನಿರತ ಮಹಿಳೆಯರು ಮತ್ತು ಉದ್ಯೋಗವನ್ನು ಹುಡುಕುತ್ತಿರುವ ಮಹಿಳೆಯರ ಶೇಕಡಾವಾರು ಪ್ರಮಾಣ ಹಾಗೂ ದೇಶದ ಆರ್ಥಿಕ ಅಭಿವೃದ್ಧಿಯ ಸೂಚ್ಯಂಕದ ನಡುವಿನ ಅನುಪಾತ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಭಿನ್ನವಾಗಿ ಇರಬಹುದು. ಬಾಂಗ್ಲಾದೇಶ, ಭೂತಾನ, ನೇಪಾಳ, ಪಾಕಿಸ್ತಾನ, ಶ್ರೀಲಂಕಾ, ಮಾಲ್ಡೀವ್ಸ್ ಮತ್ತು ಭಾರತದಂಥ ದಕ್ಷಿಣ ಏಷ್ಯಾದ ದೇಶಗಳಲ್ಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಈ ರೀತಿಯ ಭಿನ್ನತೆ ಇರುವುದು ಗೋಚರಿಸುತ್ತದೆ.

ಭಾರತದಲ್ಲಿ, ಶಿಕ್ಷಣ ಪಡೆದ ಮಹಿಳೆಯರ ಪ್ರಮಾಣದಲ್ಲಿ ಏರಿಕೆ ಮತ್ತು ಮಕ್ಕಳನ್ನು ಪಡೆಯಲಿಚ್ಛಿಸುವ ಮಹಿಳೆಯರ ಪ್ರಮಾಣದಲ್ಲಿನ ಇಳಿಕೆಯು ಮಹಿಳಾ ಉದ್ಯೋಗಿಗಳ ಶೇಕಡಾವಾರು ಸಂಖ್ಯೆಯ ಮೇಲೆ ಯಾವುದೇ ಪ್ರಭಾವ ಬೀರಿಲ್ಲ ಎಂಬುದನ್ನೂ ಈ ವರದಿ ಸ್ಪಷ್ಟಪಡಿಸಿದೆ. ಇದಕ್ಕೆ ನಿಖರ ಕಾರಣವನ್ನು ಉಲ್ಲೇಖಿಸಿಲ್ಲವಾದರೂ ಭಾರತದ ಸಂಪ್ರದಾಯಬದ್ಧ ಸಾಮಾಜಿಕ ಕಟ್ಟಲೆಗಳು ಇದಕ್ಕೆ ಸ್ವಲ್ಪ-ಮಟ್ಟಿಗೆ ಕಾರಣ ಇರಬಹುದು ಎಂದಿದೆ. ವ್ಯವಸಾಯವೇ ಪ್ರಧಾನವಾಗಿರುವ ದೇಶದಲ್ಲಿ, ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಮಹಿಳಾ ಕಾರ್ಮಿಕರ ಭಾಗವ-ಹಿಸುವಿಕೆಯ ಪ್ರಮಾಣ ಹೆಚ್ಚು. ಆದರೆ, ಯಾಂತ್ರೀಕರಣ ಹೆಚ್ಚಾದಂತೆ, ದುಡಿಯುವ ಕೈಗಳ ಅಗತ್ಯ ಕಡಿಮೆಯಾಗುವ ಕಾರಣ ಆ ಕ್ಷೇತ್ರದಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಪ್ರಮಾಣ ಕಡಿಮೆಯಾಗುತ್ತದೆ.

ವಿಶ್ವ ಆರ್ಥಿಕ ವೇದಿಕೆಯ ಲಿಂಗ ಅಸಮಾನತೆ ಕುರಿತ 2022ರ ವರದಿಯ ಪ್ರಕಾರ, ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಖ್ಯೆಯ ನಡುವೆ ಇರುವ ಅಂತರ ಅತ್ಯ-ಧಿಕವಾಗಿದೆ. 146 ದೇಶಗಳ ಪೈಕಿ ಭಾರತದ ಸ್ಥಾನ 135ರಷ್ಟು ಕೆಳಗೆ. ಇದಕ್ಕೆ ಕಾರಣ, ಕಾರ್ಮಿಕ ವರ್ಗದಲ್ಲಿ ಅತಿಯಾಗಿ ಕುಸಿದ ಮಹಿಳೆಯರ ಸಂಖ್ಯೆ. ಉದ್ಯೋಗದಲ್ಲಿ ತೊಡಗುವ ಭಾರತೀಯ ಮಹಿಳೆಯರ ಸಂಖ್ಯೆ ಆತಂಕಕಾರಿಯಾಗಿ ಕಡಿಮೆಯಾಗುತ್ತಿರುವುದನ್ನು ಬೇರೆ ಬೇರೆ ಅಧ್ಯಯನ ವರದಿಗಳೂ ಎತ್ತಿ ತೋರಿಸಿವೆ. ಇದನ್ನು ಸರಿಪಡಿಸಲು ಕೂಡಲೇ ಕಾರ್ಯನೀತಿ ರೂಪಿಸುವ, ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂಬ ಆರ್ಥಿಕ ತಜ್ಞರ ಮಾತನ್ನು ಕಡೆಗಣಿಸುವಂತಿಲ್ಲ.

ಭಾರತದ ಸಾಮಾಜಿಕ ವ್ಯವಸ್ಥೆ ಅತ್ಯಂತ ಸಂಕೀರ್ಣವಾದುದು. ನಮ್ಮ ಬೌದ್ಧಿಕ ಸಾಮರ್ಥ್ಯ ಪ್ರಶ್ನಾತೀತವಾದುದು. ಆದರೆ ನಮ್ಮ ಸಮಾಜವು ಮಹಿಳೆಯರ ಮೇಲೆ ವಿಧಿಸುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಟ್ಟಲೆಗಳು, ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರ ಏಳಿಗೆಗೆ ಪ್ರತಿಕೂಲವಾಗಿ ಪರಿಣಮಿಸಿವೆ. ಕಾರ್ಮಿಕ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಕುಸಿಯಲು ಕೆಲವು ವಿಶಿಷ್ಟ ಕಾರಣಗಳಿವೆ. ಮೊದಲನೆಯದಾಗಿ, ಈ ಐದು ದಶಕಗಳಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಹದಿನೈದು ವರ್ಷಗಳಿಗೆ ಮೇಲ್ಪಟ್ಟ ವಯೋಮಾನದ ಹುಡುಗಿಯರು ಹೆಚ್ಚಿನ ವಿದ್ಯಾಭ್ಯಾಸದ ಕಡೆಗೆ ಹೊರಳಿರುವುದರಿಂದ, ಆ ವಯೋಮಾನದ ಹುಡುಗಿಯರು ಉದ್ಯೋಗದಲ್ಲಿ ದಾಖಲಾಗುವುದು ಕಡಿಮೆಯಾಗಿದೆ. ಎರಡನೆಯದಾಗಿ, ನಗರಗಳ ಕುಟುಂಬವಾರು ಆದಾಯದಲ್ಲಿ ಏರಿಕೆಯಾಗಿರುವುದರಿಂದ ಕುಟುಂಬ ನಿರ್ವಹಣೆಗೆ ಮಹಿಳೆಯರು ದುಡಿಯಲೇಬೇಕೆಂಬ ಅನಿವಾರ್ಯ ಇಲ್ಲವಾಗಿದೆ. ಇದರಿಂದಾಗಿ, ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಕಡಿಮೆಯಾಗಿದೆ. ಮೂರನೆಯದಾಗಿ, ಬೇಡಿಕೆಯಿರುವ ಉದ್ಯೋಗಗಳನ್ನು ಬೇಡಿಕೆಯಿರುವಷ್ಟು ಸಂಖ್ಯೆಯಲ್ಲಿ ಸರ್ಕಾರ ಸೃಷ್ಟಿಸದೇ ಇರುವುದರಿಂದ ಮಹಿಳೆಯರು ಮನೆಯಲ್ಲಿ ಉಳಿಯುವಂತಾಗಿದೆ.

ನಾಲ್ಕನೆಯದಾಗಿ, ಬಹುಪಾಲು ಭಾರತೀಯ ಮಹಿಳೆಯರು ಮನೆಯಲ್ಲೇ ಉಳಿದು, ನಗದು ಪ್ರತಿಫಲವಿಲ್ಲದ ಕೌಟುಂಬಿಕ ಕೆಲಸದಲ್ಲಿ ತೊಡಗುವುದರಿಂದ, ಅವರು ದುಡಿಯುವ ಕಾರ್ಮಿಕರ ಲೆಕ್ಕಕ್ಕೆ ಪರಿಗಣಿತ-ರಾಗುವುದಿಲ್ಲ. ಇಷ್ಟು ದೊಡ್ಡ ಸಂಖ್ಯೆಯ ಮಹಿಳೆಯರು ವಿವಿಧ ಕಾರಣಗಳಿಗಾಗಿ ಉದ್ಯೋಗದಿಂದ ದೂರ ಉಳಿಯುವುದರಿಂದ ದೇಶದ ಆರ್ಥಿಕತೆಗೆ ಉಂಟಾಗುವ ನಷ್ಟ ಅಷ್ಟಿಷ್ಟಲ್ಲ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ.

ಒಂದು ವರ್ಷದಲ್ಲಿ ಮಹಿಳೆ ನಿರ್ವಹಿಸುವ ಗಳಿಕೆಯಿಲ್ಲದ ಗೃಹಕೃತ್ಯಗಳಿಗೆ ಹಣದ ರೂಪದಲ್ಲಿ ಬೆಲೆ ಕಟ್ಟಿದರೆ, ಅದು, ಭಾರತದ ಜಿಡಿಪಿಯ ಶೇ 3.1ರಷ್ಟಾಗುತ್ತದೆ! ಒಂದು ದೇಶದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರ ಸಾಮರ್ಥ್ಯವು ಆದಾಯವಿಲ್ಲದ, ಕಡಿಮೆ ಉತ್ಪಾದಕತೆಯುಳ್ಳ, ಆರ್ಥಿಕವಲ್ಲದ ಚಟುವಟಿಕೆಗಳಲ್ಲಿ ಕಳೆದುಹೋದರೆ, ಅಂಥ ದೇಶ ಅಭಿವೃದ್ಧಿ ಹೊಂದಲು ಮತ್ತು ಯಾವುದೇ ಸಾಧನೆ ಮಾಡಲು ಸಾಧ್ಯವಿಲ್ಲ ಎಂಬ ವಿಶ್ವಬ್ಯಾಂಕ್‌ನ ಮಾತು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು.

ನಗರಗಳಲ್ಲಿ ವಿವಾಹಿತ ಮಹಿಳೆಯರು ಉದ್ಯೋಗದಿಂದ ದೂರ ಉಳಿಯಲು ಇನ್ನೂ ಕೆಲವು ಕಾರಣಗಳಿವೆ. ಕೌಟುಂಬಿಕ ಕೆಲಸಗಳು ಮತ್ತು ಉದ್ಯೋಗದಲ್ಲಿ ನಿಭಾಯಿಸಬೇಕಾದ ಕೆಲಸಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗದೇ ಹೋಗುವುದು, ಮನೆಯಿಂದ ಉದ್ಯೋಗ ಸ್ಥಳಕ್ಕೆ ಹೋಗಿ- ಬರಲು ಇರುವ ಪ್ರಯಾಣ ಸೌಕರ್ಯದ ಕೊರತೆ, ವಾಹನ ದಟ್ಟಣೆಯ ಕಿರಿಕಿರಿ ಮತ್ತು ಅದಕ್ಕೆ ವ್ಯಯಿಸಬೇಕಾದ ಸಮಯವನ್ನು ಕೊಡಲಾಗದೇ ಇರುವುದು ಕೆಲವು ಕಾರಣಗಳು. ಹಾಗಾಗಿಯೇ, ಮನೆಯ ಬಳಿಯೇ ಕೆಲಸ ಮಾಡುವ ಮತ್ತು ಸೀಮಿತ ಅವಧಿಗೆ ಕೆಲಸ ಮಾಡುವ ಸೌಕರ್ಯವಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಕಾರ್ಮಿಕರಾಗಿ ದುಡಿಮೆಯಲ್ಲಿ ತೊಡಗಿಸಿಕೊಂಡಿರುವುದನ್ನು ನೋಡಬಹುದು. ಮನೆಯಿಂದಲೇ ಕೆಲಸ ಮಾಡುವ ಸೌಕರ್ಯವಿದ್ದರೆ ಶೇಕಡ 90ರಷ್ಟು ಮಹಿಳೆಯರು ಮತ್ತು ಅರೆಕಾಲಿಕ ಕೆಲಸ ಮಾಡಲು ಸೌಕರ್ಯವಿದ್ದರೆ ಶೇಕಡ 70ರಷ್ಟು ಮಹಿಳೆಯರು ಕೆಲಸ ಮಾಡಲು ಸಿದ್ಧರಿದ್ದಾರೆ ಎಂಬುದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಅಧ್ಯಯನದಿಂದ ತಿಳಿದುಬಂದಿದೆ.

ಕೊರೊನಾ ಸಾಂಕ್ರಾಮಿಕವು ಮನೆಯಿಂದ ಕೆಲಸ ಮಾಡುವ ಅಗಾಧವಾದ ಸಾಧ್ಯತೆಯನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಕೆಲಸದ ಸ್ಥಳಕ್ಕೆ ಹೋಗಲು ಸಾಧ್ಯವಾಗದೆ ಕೆಲಸವನ್ನು ತ್ಯಜಿಸಿದ ಮಹಿಳೆಯರಿಗೆ ಮತ್ತೆ ಉದ್ಯೋಗಾ-ವಕಾಶವನ್ನು ಕಲ್ಪಿಸಲು ಈ ಮಾದರಿಯನ್ನು ಬಳಸಿಕೊಳ್ಳಬೇಕು. ಮನೆಯಲ್ಲಿ ಕುಳಿತು ಮೂರು- ನಾಲ್ಕು ಗಂಟೆಗಳ ಕಾಲ ಕೆಲಸ ಮಾಡಿದರೆ ಸಾಕು ಎನ್ನುವಂಥ ಉದ್ಯೋಗ-ಗಳನ್ನು ಸೃಜಿಸುವ ಪ್ರಯತ್ನಗಳು ಸರ್ಕಾರದ ಕಡೆಯಿಂದ ಆಗಬೇಕು. ಅದಕ್ಕೆ ಅಗತ್ಯವಿರುವ ಕೌಶಲ ತರಬೇತಿಯನ್ನು ಸರ್ಕಾರದ ವತಿಯಿಂದ ನೀಡುವ ವ್ಯವಸ್ಥೆಯೂ ಆಗಬೇಕು.

ಉದ್ಯೋಗಗಳಲ್ಲಿ ಪುರುಷರಿಗೆ ಸಮಾನ ಸಂಖ್ಯೆಯಲ್ಲಿ ಮಹಿಳೆಯರನ್ನು ನೇಮಿಸಿಕೊಂಡಲ್ಲಿ ಖಾಸಗಿ ಕಂಪನಿಗಳಿಗೆ ಕಾರ್ಪೊರೇಟ್ ತೆರಿಗೆಯಿಂದ ಸ್ವಲ್ಪಮಟ್ಟಿಗೆ ವಿನಾಯಿತಿ ನೀಡಬೇಕು. ಆ ಮೂಲಕ ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳಲು ಕಂಪನಿಗಳನ್ನು ಪ್ರೋತ್ಸಾಹಿಸಬೇಕು. ಕೆಲಸದ ಸ್ಥಳಗಳಲ್ಲಿ ಮಹಿಳಾ ಉದ್ಯೋಗಿಗಳಿಗೆ ಅಗತ್ಯವಿರುವ ರಕ್ಷಣೆ ಮತ್ತು ಸೌಲಭ್ಯಗಳನ್ನು ಕಲ್ಪಿಸುವುದು, ಸಮಾನ ರೀತಿಯ ಕೆಲಸಗಳಿಗೆ ಲಿಂಗಭೇದವಿಲ್ಲದೆ ಸಮಾನ ವೇತನ ನಿಗದಿ, ಶಿಶುಪಾಲನಾ ಕೇಂದ್ರಗಳ ಸ್ಥಾಪನೆ, ಪ್ರಸೂತಿ ರಜೆ, ವಿವಿಧ ಕಾರಣಗಳಿಗಾಗಿ ಉದ್ಯೋಗವನ್ನು ತೊರೆದ ಮಹಿಳೆಯರ ಮರುನೇಮಕಾತಿಗೆ ಚಾಲನೆಯಂತಹ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕೈಗೊಂಡಲ್ಲಿ ಮಾತ್ರ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತಮಪಡಿಸಲು ಮತ್ತು ತನ್ಮೂಲಕ ದೇಶದ ಆರ್ಥಿಕತೆ-ಯನ್ನು ಸುಭದ್ರಗೊಳಿಸಲು ಸಾಧ್ಯ.

ಚುರುಮುರಿ



ಚುರುಮುರಿ ಗೋಷ್ಠಿ

• ಸುಮಂಗಲಾ

'ಏ ನೋಡಿಲ್ಲಿ... ನಾವು ಮಧ್ಯಮ ವರ್ಗದ ಮಂದಿ, ಮರ್ಸಿಡಿಸ್ ಬೆಂಜ್ ಕಾರು ಖರೀದಿ ಮಾಡೂದು ನನಗೂ ಸಾಧ್ಯವಿಲ್ಲ ಅಂತ ಗಡ್ಕರಿ ಮಾಮಾ ಹೇಳ್ಯಾನ. ಅಷ್ಟ್ ದೊಡ್ಡ ಮಂತ್ರಿಗೇ ಮರ್ಸಿಡಿಸ್ ತಗಳಾಕೆ ಆಗಂಗಿಲ್ಲ ಅಂದ್ರೆ ಅದೆಷ್ಟು ತುಟ್ಟಿ ಅಂತ' ಬೆಕ್ಕಣ್ಣ ಸುದ್ದಿ ತೋರಿಸುತ್ತ ಲೊಚಗುಟ್ಟಿತು.

'ಅಲ್ಲಲೇ... ಮೂರು ವರ್ಷದ ಕೆಳಗೆ ಚುನಾವಣೆ ಟೈಮಿನಾಗೆ ನಿಮ್ಮ ಗಡ್ಕರಿ ಮಾಮಾ ತನ್ನ ಆಸ್ತಿ ಸುಮಾರು 25 ಕೋಟಿ ಅಂತ ಡಿಕ್ಲೇರ್ ಮಾಡಿದ್ರು. ಕೋಟಿಗಟ್ಟಲೆ ರೊಕ್ಕ ಇರೋ ಅವರೇ ನಾವ್ ಮಧ್ಯಮ ವರ್ಗದ ಮಂದಿ ಅಂದ್ರ ನಮ್ಮಂಥಾ ಖರೇಖರೆ ಮಧ್ಯಮ ವರ್ಗದ ಮಂದಿ ಕಥಿ ಏನು?' ನಾನೂ ಯೋಚನೆಗೆ ಬಿದ್ದೆ.

'ನೀವು ಶ್ರೀಸಾಮಾನ್ಯ ವರ್ಗದಾಗೆ ಬರ್ತೀರೇಳು. ನಿಮ್ಮದು ಒಂಥರಾ ಸ್ಪೆಶಲ್ ಕೆಟಗರಿ' ಎಂದು ಬೆಕ್ಕಣ್ಣ ನನ್ನನ್ನೇ ಸಮಾಧಾನಿಸಿತು.

'ಅದ್ಸರಿ... ಅದೇನೋ ಸಾಹಿತಿಗಳಲ್ಲಿ ಎರಡು ವರ್ಗ ಐತೆ ಅಂತ ಬೊಮ್ಮಾಯಿ ಅಂಕಲ್ಲು ಹೇಳ್ಯಾರ. ನಾನು ನೀನು ಸೇರಿ ಈ ಚುರುಮುರಿ ಬರೀತೀವಲ್ಲ, ನಾವು ಯಾವ ವರ್ಗ?' ಬೆಕ್ಕಣ್ಣ ಪ್ರಶ್ನೆಯಿಟ್ಟಿತು.

'ನಿಮ್ಮ ಅಂಕಲ್ಲು ಯಾವ ವರ್ಗ ಹೇಳ್ಯಾರೋ ಗೊತ್ತಿಲ್ಲ. ಆದರೆ ನಾವು ಅದ್ಯಾವ ವರ್ಗದಾಗೂ ಬರಂಗಿಲ್ಲ, ನಾವು ಶ್ರೀಸಾಮಾನ್ಯ ಸಾಹಿತಿಗಳು ಕಣಲೆ'.

'ಹಂಗಾರೆ ದಸರಾ ಕವಿಗೋಷ್ಠಿಗೆ ನಮ್ಮನ್ನ ಯಾವತ್ತಿಗೂ ಕರೆಯಂಗೇ ಇಲ್ಲೇನು?' ಬೆಕ್ಕಣ್ಣ ಬಲು ಹತಾಶೆಯಿಂದ ಕೇಳಿತು.

'ಅದ್ ಕವಿಗೋಷ್ಠಿ... ಕವನ ಓದತಾರ. ಹಿಂತಾವೆಲ್ಲ ಓದಂಗಿಲ್ಲ ಅಲ್ಲಿ. ನಮಗೊಂದು ಬ್ಯಾರೆ ಚುರುಮುರಿ ಗೋಷ್ಠಿನೇ ಮಾಡಬೇಕಷ್ಟೆ' ಎಂದೆ.

'ಬರೀ ವಣವಣ ಗೋಷ್ಠಿ ಮಾಡಿದ್ರ ಯಾರೂ ಬರಂಗಿಲ್ಲ. ಎಷ್ಟ್ ಥರ ಖಾರದ ಚುರುಮುರಿ ಬರೀತೀರೊ, ಅಷ್ಟ್ ಥರದ ಚುರುಮುರಿ ಚೂಡಾನೂ ತಿನ್ನಾಕೆ ಇಟ್ಟರೆ ಅಷ್ಟೇ ಮಂದಿ ಬರತಾರ. ಬ್ಯಾರೆಬ್ಯಾರೆ ಥರದ ಚುರುಮುರಿ ವಗ್ಗರಣೆ ಹಾಕೂದನ್ನಾರೂ ಕಲಿಯೂಣು ನಾವು' ಬೆಕ್ಕಣ್ಣ ಹೊಸ ಯೋಜನೆ ಮುಂದಿಟ್ಟಿತು!

ದಿನದ ಟ್ವೀಟ್

ಆಯ್ಕೆಯ ಸಂಕಷ್ಟ

ಶಶಿ ತರೂರ್ ಅವರಿಗೆ ಮತ ಹಾಕುವಂತೆ ಅಮೆರಿಕದಲ್ಲಿರುವ ನನ್ನ ಮಗ ನನಗೆ ಹೇಳುತ್ತಿದ್ದಾನೆ... ರಾಜಕೀಯ ಮತ್ತು ಅದರ ಪರಿಣಾಮಗಳ ಬಗ್ಗೆ ಈ ಯುವಪೀಳಿಗೆಗೆ ಏನು ಗೊತ್ತಿದೆ? ಆಯ್ಕೆ ಕಷ್ಟವಿದೆ ಮತ್ತು ನನ್ನ ಪಕ್ಷಕ್ಕೆ ಒಳ್ಳೆಯದಾಗುವುದನ್ನು ನಾನು ಬಯಸುತ್ತೇನೆ.

ಸುಹೀತಾ ಚಟ್ಟರ್ಜಿ ಕರೀಂ, ಎಐಸಿಸಿ ಸದಸ್ಯೆ, ವೈದ್ಯೆ

ಕಿಡಿನುಡಿ

**ತಮ್ಮ ಪಕ್ಷದ ಹುಳುಕುಗಳನ್ನು ಎತ್ತಿ ತೋರಿಸಿದಾಗ ಕನ್ನಡಪರರನ್ನು ಎರಡೂ ರಾಷ್ಟ್ರೀಯ ಪಕ್ಷಗಳ ಬೆಂಬಲಿಗರು ಒಂದೇ ಬಗೆಯಲ್ಲಿ ವೈಯಕ್ತಿಕ ನೆಲೆಯಲ್ಲಿ ನಿಂದಿಸುವುದು ನನಗೇನೂ ಅಚ್ಚರಿ ಎನಿಸುವುದಿಲ್ಲ. ನೆನಪಿಡಿ: ಇಂದಿನ ಮೋದಿ ಭಕ್ತರನ್ನೂ ನಾಚಿಸುವಂತಿದ್ದರು ಅಂದಿನ ಇಂದಿರಾ ಭಕ್ತರು.
#StopHindiImposition**

ರಾಮಚಂದ್ರ ಎಮ್., ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 3-10-1997

• ಭಾರತದ ಪ್ರತಿದಾಳಿ: 50 ಪಾಕ್ ಸೈನಿಕರ ಸಾವು

ಶ್ರೀನಗರ, ಅ. 2– ಪಾಕಿಸ್ತಾನದ ಅಪ್ರಚೋದಿತ ದಾಳಿಗೆ ಭಾರತ ನಡೆಸಿದ ಪ್ರತಿದಾಳಿಯಲ್ಲಿ ಊರಿ, ನೌಗಾಮ್ ಮತ್ತು ಕುಪ್ವಾರ್ ವಿಭಾಗಗಳಲ್ಲಿ ಪಾಕಿಸ್ತಾನದ 50ಕ್ಕೂ ಹೆಚ್ಚು ಸೈನಿಕರು ಸತ್ತಿದ್ದಾರೆ, ಅಲ್ಲದೆ ಹಲವಾರು ಸೈನಿಕರು ಗಾಯಗೊಂಡಿದ್ದಾರೆ.

ಭಾರತದ ಈ ದಾಳಿಯಿಂದ ಪಾಕಿಸ್ತಾನದ 125 ಸೇನಾ ನೆಲೆಗಳು ನಾಶವಾಗಿದ್ದು, ಕೆಲವೆಡೆ ಶಸ್ತ್ರ ಸಂಗ್ರಹಗಳಿಗೆ ಹಾನಿ ಉಂಟಾಗಿದೆ ಎಂದು ಬ್ರಿಗೇಡಿಯರ್ ಅಶೋಕ್ ಕಪೂರ್ ಅವರು ಇಂದು ಸಂಜೆ ಸುದ್ದಿಗಾರರಿಗೆ ತಿಳಿಸಿದರು.

ಗಾಯಾಳುಗಳನ್ನು ಚಿಕಿತ್ಸೆಗಾಗಿ ಸಾಗಿಸಲು ಪಾಕಿಸ್ತಾನದ ಸೇನಾ ನೆಲೆಗಳಲ್ಲಿ ಬಿಳಿ ಧ್ವಜಗಳನ್ನು ಹಾರಿಸಲಾಗುತ್ತಿದೆ ಎಂದರು.

• ದಸರಾ ಆರಂಭ: ಸಾಂಸ್ಕೃತಿಕ ಆಕ್ರಮಣಕ್ಕೆ ವಿಷಾದ

ಮೈಸೂರು, ಅ. 2–ಜನತೆಯನ್ನು ಕೇಂದ್ರ ಮಾಡಿಕೊಳ್ಳದ ರಾಜಕಾರಣ, ಸಾರ್ವತ್ರಿಕವಾಗಿ ನೆಲೆಯೂರಿರುವ ಭ್ರಷ್ಟಾಚಾರ, ಸರ್ವೋದಯ ವಿರೋಧಿಯಾದ ಅನೇಕ ಪಿಡುಗುಗಳು, ಪರಿಸರ ನಾಶದ ತಲ್ಲಣಗಳು ಪ್ರಜ್ಞಾವಂತರಲ್ಲಿ ದಿಗ್ಭ್ರಮೆ ಹುಟ್ಟಿಸುತ್ತಿವೆ ಎಂದು ಕನ್ನಡದ ಖ್ಯಾತ ಕವಿ ಜಿ.ಎಸ್. ಶಿವರುದ್ರಪ್ಪ ಅವರು ಇಂದು ಇಲ್ಲಿ ವಿಷಾದಿಸಿದರು.

ಚಾಮುಂಡಿ ಬೆಟ್ಟದಲ್ಲಿ ಹತ್ತು ದಿನಗಳ ದಸರಾ ಮಹೋತ್ಸವವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದ ಜಿಎಸ್ಎಸ್ ಅವರು, ಈ ಅಸ್ವಸ್ಥ ವಾತಾವರಣದಿಂದ ಹೊರಬರಲು ಅಂತರ್ ನಿರೀಕ್ಷಣೆ ಮತ್ತು ದೃಢಸಂಕಲ್ಪ ಅಗತ್ಯವಿರುವು-ದನ್ನು ಸೂಚಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 3-10-1972

• ಸರ್ಕಾರಿ ಉದ್ಯಮದಲ್ಲಿ ಕಡಿಮೆ ಉತ್ಪಾದನೆ: ಇಂದಿರಾ ಚಿಂತೆ

ರಾಂಚಿ, ಅ. 2– ಸರ್ಕಾರಿ ಉದ್ಯಮರಂಗದ ಅನೇಕ ಘಟಕಗಳಲ್ಲಿ ಉತ್ಪಾದನೆ ಕಡಿಮೆಯಾಗಿರುವುದಕ್ಕಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ವ್ಯಥೆ ವ್ಯಕ್ತಪಡಿಸಿ, ಕೊರತೆ ಮತ್ತು ಬೆಲೆ ಏರಿಕೆಗಳಿಗೆ ಇದೂ ಒಂದು ಕಾರಣ ಎಂದರು.

ಆಗ್ನೇಯ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದೆಂದು ಹೇಳಲಾಗಿರುವ 6,000 ಟನ್‌ಗಳ ಪೋರ್ಜ್ ಪ್ರೆಸ್ ಅನ್ನು ಇಲ್ಲಿನ ಫೌಂಡ್ರಿ ಫೋರ್ಜ್ ಕಾರ್ಖಾನೆಯಲ್ಲಿ ವಿಧ್ಯುಕ್ತವಾಗಿ ಉದ್ಘಾಟಿಸಿದ ಶ್ರೀಮತಿ ಗಾಂಧಿ ಅವರು, ಕೈಗಾರಿಕಾ ಕಾರ್ಮಿಕರು ಉತ್ಪಾದನೆ ಹೆಚ್ಚಿಸಿ ಸರ್ಕಾರಿ ಉದ್ಯಮರಂಗಕ್ಕೆ ತಟ್ಟಿರುವ ಕಳಂಕ ತಪ್ಪಿಸಬೇಕೆಂದು ಕರೆ ಕೊಟ್ಟರು.

• ಮಂಗಳೂರಿನಲ್ಲಿ ಹರಿಜನ ಹೋಟೆಲ್ ಉದ್ಘಾಟನೆ

ಮಂಗಳೂರು, ಅ. 2– 'ಈ ವರ್ಷದ ಅಂತ್ಯದೊಳಗಾಗಿ ದೇಶದಲ್ಲಿ ಅಸ್ಪೃಶ್ಯತೆ ನಿವಾರಣೆ ಆಗಬೇಕೆಂದು ಕಾಂಗ್ರೆಸ್ ಸಂಕಲ್ಪ ಮಾಡಿದೆ. ಒಂದೇ ಹಂತದಲ್ಲಿ ಇದು ಸಾಧ್ಯವಾಗದಿದ್ದರೂ ದೇವಸ್ಥಾನಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸಲು ಹರಿಜನರಿಗೆ ಯಾವ ಆತಂಕವೂ ಇಲ್ಲದಂತೆ ಮಾಡಲು ತೀವ್ರ ಯತ್ನ ಮಾಡುತ್ತೇವೆ' ಎಂದು ಸಹಕಾರ ಸಚಿವ ಶ್ರೀ ಎ.ಶಂಕರ ಆಳ್ವ ಅವರು ಇಂದು ಇಲ್ಲಿ ಹೇಳಿದರು.

ಇಲ್ಲಿನ ಕೇಂದ್ರ ಮಾರುಕಟ್ಟೆಯಲ್ಲಿ ಹರಿಜನರಿಂದಲೇ ನಡೆಸಲ್ಪಡುವ ಉಪಾಹಾರ ಗೃಹವನ್ನು ಸಚಿವರು ಉದ್ಘಾಟಿಸಿದರು.

ಸಂಗತ

ಅವಿವೇಕದ ಬುನಾದಿ 'ಬೈನರಿ' ಧೋರಣೆ

'ಬೈನರಿ' ಕನ್ನಡಕದಲ್ಲಿ ಜಗತ್ತನ್ನು ನೋಡಲು ಹೊರಡುವುದರಿಂದ ಕುಬ್ಜಗೊಳ್ಳುವುದು ನಮ್ಮದೇ ವ್ಯಕ್ತಿತ್ವ ಎಂಬ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕಾಗಿದೆ

• ಎಚ್.ಕೆ.ಶರತ್

ಯಾಂತ್ರಿಕ ವ್ಯವಸ್ಥೆಯೊಂದರ ಸ್ವಯಂಚಾಲಿತ ನಿರ್ವಹಣೆಗೆ ಅಗತ್ಯವಿರುವ ಸೂಚನೆಗಳನ್ನು ನೀಡಲು ಬಳಸುವ ಪ್ರೋಗ್ರಾಮಿಂಗ್ ವಿಧಾನಗಳನ್ನು ಕಲಿಸುವ ಸಂದರ್ಭದಲ್ಲೆಲ್ಲ, 'ಯಂತ್ರಗಳಿಗೆ ಅರ್ಥವಾಗುವುದು ಬೈನರಿ ಭಾಷೆ ಮಾತ್ರ. ನಾವು ಏನನ್ನೇ ಬರೆದರೂ ಅಂತಿಮವಾಗಿ ಯಂತ್ರ ಅದನ್ನು ಅರ್ಥಮಾಡಿಕೊಳ್ಳುವುದು ಸೊನ್ನೆ ಮತ್ತು ಒಂದರ ಮೂಲಕವಷ್ಟೇ. ಮನುಷ್ಯರು ಬಳಸುವ ಭಾಷೆಯನ್ನು ನೇರವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಯಂತ್ರಗಳಿಗೆ ಇಲ್ಲ' ಎಂದು ಹೇಳಿಕೊಡಲಾಗುತ್ತಿತ್ತು. ಮೊದಲೆಲ್ಲ ಯಂತ್ರಗಳ ಭಾಷೆಯೆಂದೇ ಪರಿಗಣಿಸಲ್ಪಟ್ಟಿದ್ದ ಬೈನರಿ ಭಾಷೆ ಇಂದು ಮನುಷ್ಯರದ್ದೂ ಆಗಿದೆಯೇ ಎನ್ನುವ ಅನುಮಾನ ಮೂಡದಿರದು.

ಮನುಷ್ಯರನ್ನು ಅರ್ಥಮಾಡಿಕೊಳ್ಳಲು ನಾವು ಇಂದು ಯಥೇಚ್ಛವಾಗಿ ಬಳಸುತ್ತಿರುವುದು ಕೂಡ ಬೈನರಿ ಧೋರಣೆಯನ್ನೇ ಎನ್ನಲು ಸಕಾರಣಗಳಿವೆ. ಸಾರ್ವಜನಿಕ ಸಂವಾದಗಳಲ್ಲಿ ಹಾಗೂ ವೈಯಕ್ತಿಕ ಮಾತುಕತೆಗಳಲ್ಲಿ ಪದೇ ಪದೇ ಎದುರಾಗುವ 'ಇದಲ್ಲ-ದಿದ್ದರೆ ಅದೇ ಆಗಿರಬೇಕು' ಎನ್ನುವಂತಹ ಧೋರಣೆ ಮನುಷ್ಯರನ್ನು ಮನುಷ್ಯರ ಭಾಷೆಯಲ್ಲಿ ಅರ್ಥ-ಮಾಡಿಕೊಳ್ಳಬೇಕು ಎಂಬ ವಿವೇಕವನ್ನು ನೇಪಥ್ಯಕ್ಕೆ ಸರಿಸುತ್ತಿರುವ ಹಾಗೆ ಭಾಸವಾಗುತ್ತಿದೆ.

ಕೆಲ ದಿನಗಳ ಹಿಂದೆ ಆತ್ಮೀಯರೊಬ್ಬರು ಪರಿಚಿತ ಹುಡುಗನ ಫೋಟೊ ಕಳಿಸಿ, 'ಈ ಹುಡುಗ ನಿಮಗೆ ಗೊತ್ತಂತೆ... ಹುಡುಗ ಹೇಗೆ? ನಮ್ಮ ಸ್ನೇಹಿತನ ತಂಗಿಗೆ ಮದುವೆ ಪ್ರಪೋಸಲ್ ಬಂದಿದೆಯಂತೆ' ಎಂದು ವಿಚಾರಿಸಿದರು. 'ಹುಡುಗ ಹೇಗೆ ಎಂದು ಹೇಳುವಷ್ಟು ಅವನ ಬಗ್ಗೆ ನನಗೆ ಗೊತ್ತಿಲ್ಲ. ಅವನು ವಿದ್ಯಾರ್ಥಿಯಾಗಿ ಮಾತ್ರ ನನಗೆ ಗೊತ್ತಿರೋದು' ಅಂತ ತಿಳಿಸಿದೆ. 'ಜನರಲ್ಲಾಗಿ ಹೇಳಿ ಪರವಾಗಿಲ್ಲ' ಅಂದ್ರು. ಏನು ಹೇಳಬೇಕೋ ತೋಚದೆ ಸುಮ್ಮನಾದೆ.

ಬಹುತೇಕ ಸಂದರ್ಭಗಳಲ್ಲಿ ಇಂತಹ ಪ್ರಶ್ನೆಗಳನ್ನು ಕೇಳುವವರು ನಿರೀಕ್ಷಿಸುವುದು 'ಒಳ್ಳೆಯವನು' ಅಥವಾ 'ಸರಿಯಿಲ್ಲ' ಎಂಬ ಎರಡು ಉತ್ತರಗಳ ಪೈಕಿ ಒಂದನ್ನು. ವ್ಯಕ್ತಿಯೊಬ್ಬರು ಒಳ್ಳೆಯವರೋ ಕೆಟ್ಟವರೋ, ಸಂಭಾವಿತರೋ ದುಷ್ಟರೋ ಎಂದು ಸರಳವಾಗಿ ಹೇಳಲು ಸಾಧ್ಯವೇ? ಮನುಷ್ಯನ ವ್ಯಕ್ತಿತ್ವ ಹಲವಾರು ವಿರೋಧಾಭಾಸಗಳು, ಭಿನ್ನ ಮುಖಗಳನ್ನು ಹೊಂದಿರುವ ಸಂಕೀರ್ಣ ಸಂಗತಿಯಲ್ಲವೇ? ಹೀಗಿರುವಾಗ ಮನುಷ್ಯರನ್ನು ಅಳೆಯಲು 'ಇದಲ್ಲದಿದ್ದರೆ ಅದೇ?' ಎನ್ನುವ ಬೈನರಿ ಧೋರಣೆ ಬಳಸುವುದು ಸೂಕ್ತವೇ?

ನಾಯಕ-ಖಳನಾಯಕ, ಒಳ್ಳೆಯವರು-ಕೆಟ್ಟವರು ಎಂಬ ಕಪ್ಪು-ಬಿಳುಪಿನ ಪಾತ್ರಗಳನ್ನೇ ನೋಡುತ್ತಾ, ಸಂಭ್ರಮಿಸುತ್ತಾ, ಮೆರೆಸುತ್ತಾ ಬಂದಿರುವ ನಮಗೆ, ಮನುಷ್ಯರನ್ನು ಅರ್ಥಮಾಡಿಕೊಳ್ಳಲು ಇದಷ್ಟೇ ಸಾಕೆನಿಸುವುದು ಅಚ್ಚರಿ ತರುವ ಸಂಗತಿಯೇನಲ್ಲ. ಒಂದು ದಶಕದಿಂದೀಚೆಗೆ ದೇಶದ ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬಂದಿರುವ ಬೈನರಿ ಧೋರಣೆ ಕೂಡ ನಮ್ಮ ದೃಷ್ಟಿಕೋನಕ್ಕೆ ಸಂಕುಚಿತತೆಯ ಮುಸುಕು ತೊಡಿಸುವಲ್ಲಿ ಸಫಲವಾಗಿರುವುದನ್ನು ಅಲ್ಲಗಳೆಯ-ಲಾದೀತೆ? ರಾಜಕೀಯ ನಾಯಕರೊಬ್ಬರನ್ನು ಎಲ್ಲ ಗೊತ್ತಿರುವ 'ವಿಶ್ವಗುರು'ವಾಗಿ ಬಿಂಬಿಸುವ, ಮತ್ತೊಬ್ಬ-ರನ್ನು ಏನೂ ಅರಿಯದ 'ಪಪ್ಪು' ಎಂದು ಹೀಗಳೆಯುವ ಕಾರ್ಯಸೂಚಿ ಅಳವಡಿಸಿಕೊಂಡಿದ್ದು ಕೂಡ ಬೈನರಿ ಧೋರಣೆಯನ್ನೇ ಅಲ್ಲವೆ?

ವ್ಯಕ್ತಿಗಳ ಕುರಿತು ತಿಳಿದುಕೊಳ್ಳುವ ಸಂಯಮ ಇರದಿದ್ದರೂ, ಅವರು ನಾಯಕರೋ ಖಳನಾಯಕರೋ ಎಂಬ ನಿರ್ಧಾರಕ್ಕೆ ಬರಲು ತುದಿಗಾಲಲ್ಲಿ ನಿಲ್ಲುವ ನಮ್ಮ ಮನಃಸ್ಥಿತಿಯನ್ನೇ ಬಂಡವಾಳವನ್ನಾಗಿಸಿಕೊಂಡು ಹಬ್ಬಿಸಲಾಗುತ್ತಿರುವ ತಪ್ಪು ಮಾಹಿತಿ, ಬಿತ್ತಲಾಗುತ್ತಿರುವ ದ್ವೇಷದ ನಂಜಿಗೆ ಸಮಾಜದ ಸ್ವಾಸ್ಥ್ಯವೂ ಬಲಿಯಾಗು-ವುದಿಲ್ಲವೇ? ನಾವು ಇದುವರೆಗೂ ಗೌರವಿಸಿಕೊಂಡು ಬಂದ ವ್ಯಕ್ತಿಗಳ ಕುರಿತು ನಮಗಿರುವ ಅಭಿಮಾನವನ್ನು ಅಳಿಸಿ, ಅವರಿಂದಾಗಿಯೇ ದೇಶ ಹಾಳಾಯಿತು ಎನ್ನುವ ಅಸಮಾಧಾನ ಮೂಡುವ ಹಾಗೆ ನೋಡಿಕೊಳ್ಳುವ ಕಾರ್ಯಸೂಚಿ ಜಾರಿಯಲ್ಲಿರುವುದು ಕಣ್ಣೆದುರಿಗಿನ ವಾಸ್ತವ.

ಜನಮಾನಸದಲ್ಲಿ ನಾಯಕರಾಗಿ ನೆಲೆನಿಂತಿರುವವರನ್ನು ಖಳನಾಯಕರ ಸಾಲಿಗೆ ನೂಕುವ ಸಲುವಾಗಿ ಕೆಲವರ ಹೆಸರುಗಳನ್ನು ಮುನ್ನೆಲೆಗೆ ತರುತ್ತಿರುವುದು ಗುಟ್ಟಿನ ವಿಚಾರವೇನಲ್ಲ. ಯಾವುದೇ ವ್ಯಕ್ತಿ ಅಥವಾ ವಿಚಾರಧಾರೆಯ ಕುರಿತೇ ಆದರೂ ನಮ್ಮದೇ ಆದ ಅಭಿಪ್ರಾಯ ಹೊಂದಲು ನಾವೆಲ್ಲರೂ ಸ್ವತಂತ್ರರು. ಆದರೆ, ಯಾವುದೇ ವ್ಯಕ್ತಿತ್ವದ ವಿಮರ್ಶೆಗೆ ಇಳಿಯುವ ಮುನ್ನ ಅವರ ಕುರಿತು ಸಮಗ್ರವಾಗಿ ತಿಳಿದುಕೊಳ್ಳುವ ಉತ್ಸಾಹವನ್ನೂ ತೋರಬೇಕಲ್ಲವೇ?

ತಪ್ಪು ಮಾಹಿತಿ ಹರಡಲೆಂದೇ ಬಳಸಿಕೊಳ್ಳ-ಲಾಗುತ್ತಿರುವ ವಿವಿಧ ಮಾಧ್ಯಮಗಳ ಮೂಲಕ ಪ್ರಸಾರವಾಗುವ ಒಂದೆರಡು ಚಿತ್ರಗಳು, ವಿಡಿಯೊಗಳು, ನಾಲ್ಕಾರು ಸಾಲುಗಳ ಬರಹಗಳ ಆಧಾರದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಹಾಗೂ ಸ್ವಾತಂತ್ರ್ಯದ ನಂತರ ದೇಶ ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ ನಾಯಕರನ್ನು ಖಳನಾಯಕರೆಂದು ಹೀಗಳೆಯಬಹುದೇ? ವಿಶ್ವಾಸಾರ್ಹವಲ್ಲದ ಮಾಹಿತಿ ಮೂಲಗಳು ಹರಡುವ ಸುಳ್ಳುಗಳನ್ನೇ ಇತಿಹಾಸವೆಂದು ಭಾವಿಸಿ, 'ಬೈನರಿ' ಕನ್ನಡಕದಲ್ಲಿ ಜಗತ್ತನ್ನು ನೋಡಲು ಹೊರಡುವುದರಿಂದ ಕುಬ್ಜಗೊಳ್ಳುವುದು ನಮ್ಮದೇ ವ್ಯಕ್ತಿತ್ವ ಮತ್ತು ರೋಗಗ್ರಸ್ತವಾಗುವುದು ನಮ್ಮದೇ ಮನಸ್ಸು ಎಂಬ ಸತ್ಯವನ್ನಾದರೂ ಒಪ್ಪಿಕೊಳ್ಳಬೇಕಲ್ಲವೇ?

ಭಿನ್ನಾಭಿಪ್ರಾಯಗಳಿಗೆ ಬೆನ್ನು ತೋರಿ ಕಟ್ಟಿಕೊಳ್ಳುವ ವಿವೇಕದ ಸೌಧದ ತಳಪಾಯವೇ ಸಡಿಲವಾಗಿರುವ ಸಾಧ್ಯತೆಯೇ ಹೆಚ್ಚು. ಆದರೆ, ಇಂತಹ ಸಡಿಲ ತಳಪಾಯಗಳತ್ತ ನಮ್ಮ ದೃಷ್ಟಿ ಹಾಯಲು, ನಾವು ಅಪ್ಪಿಕೊಳ್ಳಲು ಹೊರಟಿರುವ ಬೈನರಿ ಧೋರಣೆ ಅನುವು ಮಾಡಿಕೊಡಲಾರದು.

ವಾಚಕರ ವಾಣಿ

ಆಗಲೇ ಅಗತ್ಯವಿತ್ತೆ ಶುದ್ಧೀಕರಣ?

ಐವತ್ತು ವರ್ಷಗಳ ಹಿಂದೆಯೇ ಕಾಂಗ್ರೆಸ್ ಮಲಿನಗೊಂಡಿತ್ತೇ? 'ಪ್ರಜಾವಾಣಿ'ಯ '50 ವರ್ಷಗಳ ಹಿಂದೆ' ಅಂಕಣ (ಅ.1) ಗಮನಿಸಿದಾಗ ಈ ಮಾತು ನಿಜ ಅನಿಸುತ್ತದೆ. ಅಂದು ಕೆಂಗಲ್ ಹನುಮಂತಯ್ಯ ಅವರು ಕಾಂಗ್ರೆಸ್ ಶುದ್ಧೀಕರಣಕ್ಕೆಂದು ಮೂರು ವಾರಗಳ ಕಾಲ ಅಜ್ಞಾತವಾಸದಲ್ಲಿದ್ದು ಧ್ಯಾನಕ್ಕೆ ಕುಳಿತುಕೊಂಡ ವಿಚಾರ ಪ್ರಸ್ತುತದಲ್ಲಿ ಸಮಯೋಚಿತ. ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ' ಯಾತ್ರೆಯನ್ನು ಕೂಡ ಕಾಂಗ್ರೆಸ್ ಶುದ್ಧೀಕರಣದ ಮತ್ತೊಂದು ಮಜಲು ಎಂದು ಭಾವಿಸಬಹುದು. ಆ ಪಕ್ಷ ಪರಿಶುದ್ಧಗೊಂಡು ಪುನಃ ಅಧಿಕಾರ ವಹಿಸಿಕೊಳ್ಳುವುದೇ? ಕಾಯ್ದು ನೋಡಬೇಕಿದೆ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಅಡಿಕೆ ಆಮದು ಆತಂಕಕಾರಿ

ಕೇಂದ್ರ ಸರ್ಕಾರವು ಭೂತಾನ್‌ನಿಂದ 17,000 ಟನ್ ಅಡಿಕೆ ಆಮದು ಮಾಡಿಕೊಳ್ಳಲು ನಿರ್ಧರಿಸಿರುವುದು ಅಡಿಕೆ ಬೆಳೆಗಾರರಿಗೆ ತುಂಬಾ ಆತಂಕಕಾರಿ ಸಂಗತಿ. ನಮ್ಮ ದೇಶದಲ್ಲಿ ಒಂದು ಕೋಟಿಗೂ ಹೆಚ್ಚು ಅಡಿಕೆ ಬೆಳೆಗಾರರ ಕುಟುಂಬಗಳಿವೆ ಎಂದು ಅಂದಾಜಿಸಲಾಗಿದೆ. ಅಡಿಕೆ ಕೃಷಿ ಮತ್ತು ಅಡಿಕೆಗೆ ಸಂಬಂಧಿಸಿದ ಉದ್ಯಮದ ಮೇಲೆ ಅವಲಂಬಿತರು ಸುಮಾರು ಹತ್ತು ಕೋಟಿಗೂ ಅಧಿಕ ಎನ್ನಲಾಗಿದೆ. ಹೀಗಿರುವಾಗ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಹಿಂದೆಂದೂ ಇಲ್ಲದಷ್ಟು ಅಡಿಕೆ ಆಮದು ಏಕೆ ಎಂಬುದೇ ದೊಡ್ಡ ಪ್ರಶ್ನೆ. ಅದರಲ್ಲೂ ಕರ್ನಾಟಕದಲ್ಲಿ ಅಡಿಕೆ ಬೆಳೆಗಾರರ ಸಂಖ್ಯೆ ಅಧಿಕ.

ಕೊರೊನಾ ಸಾಂಕ್ರಾಮಿಕದ ನಡುವೆಯೂ ಅಡಿಕೆಯು ಬೆಲೆ ಕಾಯ್ದುಕೊಂಡು ಬೆಳೆಗಾರರ ಕೈ ಹಿಡಿದಿದೆ. ಅಡಿಕೆ ಬೆಳೆಗಾರರ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರ ಸರ್ಕಾರವು ಅಡಿಕೆ ಆಮದು ನಿರ್ಧಾರವನ್ನು ಕೈಬಿಡಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಸತ್ಯ- ನಿತ್ಯ

ಅಳವಡಿಸಿಕೊಂಡಿದ್ದಕ್ಕೆ
ಹರಿಶ್ಚಂದ್ರನ ಸತ್ಯ
ಬಾಪೂಜಿಗೆ ದಕ್ಕಿತು
ಅಮರತ್ವವು ನಿತ್ಯ.

ಹರೀಶ್ ಕುಮಾರ್
ಪ.ನಾ.ಹಳ್ಳಿ

ಲಂಚಕ್ಕೆ ದಾಖಲೆ ಒದಗಿಸಲಾದೀತೆ?

ರಾಜ್ಯ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ಅವರು ಆಧಾರರಹಿತ ಆರೋಪ ಮಾಡುವುದು ಸರಿಯಲ್ಲ, ಶೇಕಡ 40ರ ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ. ಯಾರಾದರೂ ಲಂಚಕ್ಕೆ ದಾಖಲೆ ಒದಗಿಸಲು, ಸಾಕ್ಷ್ಯ ನೀಡಲು ಸಾಧ್ಯವೇ? ಬೊಫೋರ್ಸ್ ಹಗರಣದಲ್ಲಿ ಲಂಚ ಪಡೆಯಲಾಗಿದೆ ಎಂದು ಆರೋಪಿಸಲಾಗಿದೆ. ಆದರೆ ಮೂರು ದಶಕಗಳು ಕಳೆದರೂ ಲಂಚ ಪಡೆದಿರುವುದು ಸಾಬೀತಾಗಿಲ್ಲ. ಬಹುಪಾಲು ರಾಜಕಾರಣಿಗಳು ಲಂಚಕೋರರೇ ಎಂಬುದು ಪ್ರಜೆಗಳಿಗೆ ತಿಳಿದಿದೆ. ಇದಕ್ಕೆ ಪಕ್ಷಭೇದ ಇಲ್ಲ ಎಂಬುದೂ ಗೊತ್ತಿರುವ ಸಂಗತಿ. ಆದರೂ ಜನ ಅಸಹಾಯಕರಾಗಿದ್ದಾರೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಶಿಕ್ಷಕ ವೃತ್ತಿ ಎಂಬ ಅಮೂಲ್ಯ ಸೇವೆ

ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಶಾಲೆಯಲ್ಲಿ ನಿವೃತ್ತರಾದ ಶಿಕ್ಷಕರೊಬ್ಬರಿಗೆ ಗ್ರಾಮಸ್ಥರು, ಸಂಘ ಸಂಸ್ಥೆಗಳು, ಹಳೆಯ ವಿದ್ಯಾರ್ಥಿಗಳು ಸೇರಿ ಭರ್ಜರಿ ಉಡುಗೊರೆಗಳು, ಲಕ್ಷಾಂತರ ರೂಪಾಯಿ ಕಾಣಿಕೆಯೊಂದಿಗೆ ಊರಿನಲ್ಲಿ ಭವ್ಯ ಮೆರವಣಿಗೆ ಮಾಡಿ, ಬಹಳ ಭಾವನಾತ್ಮಕವಾಗಿ ಬೀಳ್ಕೊಟ್ಟಿದ್ದಾರೆ. ಇದನ್ನು ಮೂರು-ನಾಲ್ಕು ಬಾರಿ ಓದಿದೆ. ಕಣ್ಣಾಲಿಗಳು ಸಂತೋಷದಿಂದ ತೇವಗೊಂಡವು.

ತನ್ನ ಜೀವಿತಾವಧಿಯಲ್ಲಿ ಈ ಶಿಕ್ಷಕ ಎಷ್ಟು ಮಂದಿ ವಿದ್ಯಾರ್ಥಿಗಳ ಸುಂದರ ಭವಿಷ್ಯವನ್ನು ರೂಪಿಸಿರಬಹುದು ಎಂಬುದನ್ನು ಇದರಿಂದ ಕಲ್ಪಿಸಿಕೊಳ್ಳಬಹುದು. ಶಿಕ್ಷಕ ವೃತ್ತಿ ಎನ್ನುವುದು ಎಂತಹ ಅಮೂಲ್ಯ ಸೇವೆ ಎಂದು ಮತ್ತೊಮ್ಮೆ ಸಾಬೀತಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹ ಶಿಕ್ಷಕರು ಲಕ್ಷಕ್ಕೆ ಒಬ್ಬರು, ಇಬ್ಬರು ಇರಬಹುದು. ಈಗಂತೂ ಗುರು- ಶಿಷ್ಯರ ನಡುವೆ ಅನ್ಯೋನ್ಯ ಸಂಬಂಧ ಇಲ್ಲವೇ ಇಲ್ಲವೆಂಬಂತೆ ಆಗಿದೆ. ತಮಗೆ ವಿದ್ಯೆ ಕಲಿಸಿ ಭವಿಷ್ಯವನ್ನು ರೂಪಿಸಿಕೊಳ್ಳಲು ಮಹತ್ತರ ಕಾಣಿಕೆ ನೀಡಿದ ಗುರುವನ್ನು ಸದಾ ಗೌರವಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಹಾಗೆಯೇ ತನ್ನಲ್ಲಿಗೆ ಬಂದ ಪ್ರತೀ ವಿದ್ಯಾರ್ಥಿಯನ್ನು ತಿದ್ದಿ ತೀಡಿ ವಿದ್ಯೆ ಕಲಿಸಿ, ಸೂಕ್ತ ಮಾರ್ಗದರ್ಶನ ನೀಡಿ ಈ ದೇಶದ ಉತ್ತಮ ಪ್ರಜೆಯಾಗಿ ರೂಪಿಸುವುದು ಗುರುವಿನ ಕರ್ತವ್ಯ. ವಿದ್ಯಾರ್ಥಿಗಳಿಗೆ ಬರೀ ಅಂಕ ಗಳಿಕೆಯ ತವಕ, ಶಿಕ್ಷಕರಿಗೆ ಪಾಠ ಮಾಡುವುದನ್ನು ಬಿಟ್ಟು ಸಂಘ, ವೇತನ, ಚೀಟಿ, ಸ್ಕೀಮು, ರಾಜಕೀಯದ ಚಿಂತೆ. ಇದರ ಮಧ್ಯೆ ಸರ್ಕಾರಿ ಶಾಲೆಗಳ ಬಗ್ಗೆ ಆಳುವವರ ನಿರ್ಲಕ್ಷ್ಯ. ಇಂತಹ ಪರಿಸ್ಥಿತಿಯಲ್ಲಿ ಗುರು-ಶಿಷ್ಯರ ನಡುವೆ ಭಾವನಾತ್ಮಕ ಸಂಬಂಧವನ್ನು ನಿರೀಕ್ಷಿಸಬಹುದೇ?

ವಿ.ತಿಪ್ಪೇಸ್ವಾಮಿ, ಹಿರಿಯೂರು

ಇಷ್ಟೊಂದು ಕ್ರೂರವಾಯಿತೇ ಸಮಾಜ?

ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಾಯಿಯನ್ನು ಆಸ್ತಿ ನೋಂದಣಿ ಸಲುವಾಗಿ ಸಹಿ ಮಾಡಿಸಲು ಮಕ್ಕಳು ಆಂಬುಲೆನ್ಸ್‌ನಲ್ಲಿಯೇ ಕಚೇರಿಗೆ ಕರೆತಂದ ಸುದ್ದಿ (ಪ್ರ.ವಾ., ಅ. 2) ಓದಿ ದಿಗ್ಭ್ರಾಂತನಾದೆ. ನಿತ್ರಾಣ ಸ್ಥಿತಿಯಲ್ಲಿದ್ದ ಆ ವೃದ್ಧೆಯ ಪ್ರಾಣವನ್ನು ಪಣಕ್ಕಿಟ್ಟು ಆಸ್ತಿಯನ್ನು ನೊಂದಣಿ ಮಾಡಿಸಿಕೊಳ್ಳುವಷ್ಟು ಕ್ರೂರವಾಯಿತೇ ಸಮಾಜ?

₹ 1,000 ಶುಲ್ಕ ತುಂಬಿದ್ದರೆ, ಅನಾರೋಗ್ಯಕ್ಕೆ ಒಳಗಾದವರ ಸಹಿಗಾಗಿ ಅಧಿಕಾರಿಗಳು ಸ್ಥಳಕ್ಕೇ ಹೋಗಲು ಅವಕಾಶ ಇತ್ತು. ಆದರೂ ಕುಟುಂಬದವರು ಹಾಗೆ ಮಾಡದಿರುವುದು ನಿಜವಾಗಿಯೂ ದುಃಖದ ಸಂಗತಿ.

ಪವನ್ ಕುಮಾರ್ ಎಸ್., ಭೋಗನಹಳ್ಳಿ, ಚಳ್ಳಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

• ಗಿರೀಶ ದೊಡ್ಡಮನಿ

ಬೌಲರ್ ಖಾತೆಗೆ ವಿಕೆಟ್ ಸೇರ್ಪಡೆಯಾಗಬೇಕೆ?

ಮಂಕಡಿಂಗ್ ರನೌಟ್ ಆದರಷ್ಟೇ ಸಾಕೇ?

ಕ್ರಿಕೆಟ್‌ನಲ್ಲಿ ಬ್ಯಾಟರ್ ಮುನ್ನುಗ್ಗಿ ಹೊಡೆಯಲು ಹೋಗಿ ಬೀಟ್ ಆದಾಗ ಚೆಂಡನ್ನು ನಿಯಂತ್ರಣಕ್ಕೆ ಪಡೆಯುವ ವಿಕೆಟ್‌ಕೀಪರ್ ಬೇಲ್ಸ್ ಹಾರಿಸುತ್ತಾರೆ. ಆಗ ಅದು ಸ್ಟಂಪ್ಡ್‌ಔಟ್ ಆಗಿ ವಿಕೆಟ್‌ಕೀಪರ್ ಹಾಗೂ ಬೌಲರ್ ಖಾತೆ ಸೇರುತ್ತದೆ. ಆದರೆ ಇತ್ತೀಚೆಗೆ ಪರಿಷ್ಕರಣೆಗೊಂಡ 'ಮಂಕಡಿಂಗ್' ನಿಯಮದಲ್ಲಿ ನಾನ್‌ಸ್ಟ್ರೈಕರ್ ಬ್ಯಾಟರ್ ಎಸೆತಕ್ಕೂ ಮುನ್ನವೇ ಕ್ರೀಸ್ ಬಿಟ್ಟಾಗ ಬೌಲರ್ ಔಟ್ ಮಾಡಿದರೆ ರನೌಟ್ ಎಂದು ಘೋಷಣೆಯಾಗುತ್ತದೆ. ಇಲ್ಲಿ ಚಾಕಚಕ್ಯತೆ ತೋರುವ ಬೌಲರ್‌ಗೆ ವಿಕೆಟ್ ಶ್ರೇಯ ಬೇಡವೇ?

ಹೌದು; ಇಂತಹದೊಂದು ಪ್ರಶ್ನೆಯನ್ನು ಈಗ ಎತ್ತಿದವರು ಬೇರೆ ಯಾರೂ ಅಲ್ಲ. ಭಾರತದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್. ಇತ್ತೀಚೆಗಷ್ಟೇ 'ಕ್ರಿಕೆಟ್ ಕಾಶಿ' ಲಾರ್ಡ್ಸ್‌ನಲ್ಲಿ ಮಹಿಳೆಯರ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತದ ದೀಪ್ತಿ ಶರ್ಮಾ ಅವರು ನಾನ್‌ಸ್ಟ್ರೈಕರ್‌ನಲ್ಲಿದ್ದ ಇಂಗ್ಲೆಂಡ್‌ನ ಬ್ಯಾಟರ್ ಚಾರ್ಲಿ ಡೀನ್ ಅವರನ್ನು ರನೌಟ್ ಮಾಡಿದ್ದರು. ಅದರಿಂದಾಗಿ ನಡೆಯುತ್ತಿರುವ ಚರ್ಚೆಯನ್ನು ಮತ್ತೊಂದು ಹಂತಕ್ಕೆ ಒಯ್ಯುವತ್ತ ಅಶ್ವಿನ್ ಮಾತು ದಿಕ್ಸೂಚಿಯಾಗಿದೆ.

ಏಕೆಂದರೆ 'ನ್ಯಾಯಸಮ್ಮತವಲ್ಲದ ಆಟ'ದ ನಿಯಮದಡಿಯಲ್ಲಿ ನೋಡಲಾಗುತ್ತಿದ್ದ 'ಮಂಕಡಿಂಗ್' ಅನ್ನು ಈಚೆಗೆ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಬದಲಾಯಿಸಿದೆ. ಅದನ್ನು ರನೌಟ್ ಎಂದು 'ನ್ಯಾಯಬದ್ಧ'ಗೊಳಿಸಿತು. ಆದ್ದರಿಂದ ಈಗಲೂ ಅದನ್ನು ವಿರೋಧಿಸುತ್ತಿರುವ ಇಂಗ್ಲೆಂಡ್‌ನ ಮಾಜಿ–ಹಾಲಿ ಆಟಗಾರರ ಮಾತಿಗೆ ಕಿವಿಗೊಡದೇ ಮುಂದಿನ ಹಂತದ ಚರ್ಚೆಗೆ ಅಶ್ವಿನ್ ನಾಂದಿ ಹಾಡಿದ್ದಾರೆ.

ಈ ನಿಯಮ ಪರಿಷ್ಕರಣೆಗೊಳ್ಳಲು ಅಶ್ವಿನ್ ಅವರೇ ಕಾರಣವೆಂದರೆ ಅತಿಶಯೋಕ್ತಿಯಲ್ಲ. ಭಾರತದ ದಿಗ್ಗಜ ಕ್ರಿಕೆಟಿಗ ವಿನೂ ಮಂಕಡ್ ಅವರ ಹೆಸರಿನಲ್ಲಿ ಕ್ರಿಕೆಟ್ ಜನಕ 'ಬಿಳಿಯರು' 1947ರಿಂದಲೂ ಮಾಡುತ್ತಿದ್ದ ಗೇಲಿಗೆ ಈಗ ಪೂರ್ಣವಿರಾಮ ಬಿದ್ದಿದೆ. 2019ರಲ್ಲಿ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ಆಗ ಪಂಜಾಬ್ ಕಿಂಗ್ಸ್‌ನಲ್ಲಿದ್ದ ಅಶ್ವಿನ್ ಅವರು ರಾಜಸ್ಥಾನ ರಾಯಲ್ಸ್ ತಂಡದ ಬ್ಯಾಟರ್ ಜಾಸ್ ಬಟ್ಲರ್ ಅವರನ್ನು ಔಟ್ ಮಾಡಿದ್ದರು. ಆಗ ಭುಗಿಲೆದ್ದ ಚರ್ಚೆ ಹಲವು ಆಯಾಮಗಳಲ್ಲಿ ನಡೆದಿತ್ತು. ಇಂಗ್ಲೆಂಡ್‌ನ ಹಲವು ಮಾಜಿ ಹಾಗೂ ಹಾಲಿ ಕ್ರಿಕೆಟಿಗರು ಅಶ್ವಿನ್ ಮೇಲೆ ಟೀಕೆಗಳ ಮಳೆಯನ್ನೇ ಸುರಿಸಿದ್ದರು.

'ಅಶ್ವಿನ್ ಒಬ್ಬ ನಾಯಕನಾಗಿ ಮತ್ತು ಕ್ರೀಡಾಪಟುವಾಗಿ ಈ ರೀತಿ ಮಾಡಿರುವುದು ಬೇಸರ ಮೂಡಿಸಿದೆ. ಕ್ರೀಡಾ ಸ್ಫೂರ್ತಿಯಿಂದ ಆಡುವುದಾಗಿ ಐಪಿಎಲ್ ಗೋಡೆಯ ಮೇಲೆ ಹಸ್ತಾಕ್ಷರ ಮಾಡಿದ್ದಾರೆ. ಇದನ್ನು ಡೆಡ್ ಬಾಲ್ ಎಂದು ಕರೆಯಬಹುದಾಗಿತ್ತು. ಇದು ಐಪಿಎಲ್ ಘನತೆಗೆ ತಕ್ಕುದಲ್ಲ. ಬಿಸಿಸಿಐ ಗಂಭೀರವಾಗಿ ಪರಿಶೀಲಿಸಬೇಕು' ಎಂದು ಆಸ್ಟ್ರೇಲಿಯಾದ ದಿಗ್ಗಜ ಸ್ಪಿನ್ನರ್ ಶೇನ್ ವಾರ್ನ್ ಟೀಕಿಸಿದ್ದರು.

ಬ್ಯಾಟರ್ ಪ್ರಧಾನ ಕ್ರಿಕೆಟ್‌ನ ಕಳಂಕ: ಬ್ಯಾಟರ್ ಪ್ರಧಾನ ಕ್ರಿಕೆಟ್‌ನಲ್ಲಿ ಬೌಲರ್‌ಗಳಿಗೆ ಹೆಚ್ಚು ಸ್ವಾತಂತ್ರ್ಯವಿಲ್ಲ ಎಂಬ ಮಾತಿದೆ. ಅದಕ್ಕೆ ತಕ್ಕಂತೆ ಈ ಮಂಕಡಿಂಗ್ ನಿಯಮವೂ ಒಂದು. ನಾನ್‌ಸ್ಟ್ರೈಕರ್‌ನಲ್ಲಿರುವ ಬ್ಯಾಟರ್‌ಗಳು ಬೌಲರ್ ಕೈಯಿಂದ ಚೆಂಡು ಪ್ರಯೋಗವಾಗುವ ಮುನ್ನವೇ ಕ್ರೀಸ್‌ನಿಂದ ನಾಲ್ಕೈದು ಅಡಿ ಓಡಲು ಅವಕಾಶವಿತ್ತು. ಇದು ಒಂದು ರೀತಿಯಲ್ಲಿ 'ಅಸಮಾನತೆ'ಯ ನಡೆ ಎಂಬ ಟೀಕೆಗಳು ಇದ್ದವು. ಆದರೆ, ಸಭ್ಯರ ಆಟವೆನಿಸಿಕೊಂಡ ಕ್ರಿಕೆಟ್‌ನಲ್ಲಿ ನಾನ್‌ಸ್ಟ್ರೈಕರ್ ಬ್ಯಾಟರ್‌ಗೆ ಇಂತಹ ಸಂದರ್ಭದಲ್ಲಿ ಮೊದಲೇ ಎಚ್ಚರಿಕೆ ನೀಡಬೇಕು. ನಂತರವೂ ಔಟಾದರೆ ಬೌಲರ್ ರಾಜಿ ಮಾಡಿಕೊಳ್ಳಬೇಕು ಎಂಬ ಅಲಿಖಿತ ನಿಯಮವಿತ್ತು.

ಡೀನ್ ಹಾಗೂ ದೀಪ್ತಿ

> ವಿನೂ ಮಂಕಡ್ ಆರಂಭಿಸಿದ್ದ ಅಭಿಯಾನವೊಂದಕ್ಕೆ ಆರ್. ಅಶ್ವಿನ್ ತಾತ್ವಿಕ ಅಂತ್ಯ ಕೊಡಿಸಲು ಮಾಡಿದ ಪ್ರಯತ್ನಕ್ಕೆ ಮಂಕಡಿಂಗ್ ನಿಯಮ ಪರಿಷ್ಕರಣೆಗೊಂಡಿದೆ. ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಈಗ ಕ್ರೀಸ್ ಬಿಟ್ಟು ಮುಂದೆ ಹೆಜ್ಜೆ ಹಾಕಲು ಹಲವು ಬಾರಿ ಯೋಚಿಸಬೇಕಿದೆ. ಕ್ರಿಕೆಟ್‌ನಲ್ಲಿ ಇಂತಹದೊಂದು ಕ್ರಾಂತಿಕಾರಕ ನಿಯಮ ರೂಪುಗೊಳ್ಳಲು ಭಾರತವೇ ಕಾರಣವಾಗಿರುವುದು ಹೆಮ್ಮೆಯ ವಿಷಯ



ವಿನೂ ಮಂಕಡ್

1992–93ರಲ್ಲಿ ನಡೆದ ಘಟನೆ ಇದಕ್ಕೊಂದು ಉತ್ತಮ ನಿದರ್ಶನ. ಪೋರ್ಟ್ ಎಲಿಜಬೆತ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಪೀಟರ್ ಕರ್ಸ್ಟನ್ ಅವರಿಗೆ ಕಪಿಲ್ ದೇವ್ ಮೊದಲ ಬಾರಿಗೆ ಎಚ್ಚರಿಕೆ ಕೊಟ್ಟಿದ್ದರು. ಆದರೆ ಪೀಟರ್ ನಿರ್ಲಕ್ಷ್ಯ ಮಾಡಿದ್ದರು. ಆದರೆ, ಎರಡನೇ ಬಾರಿ ಕಪಿಲ್ ಔಟ್ ಮಾಡಿದರು. ಅಂಪೈರ್‌ಗೆ ವಿಕೆಟ್‌ಗಾಗಿ ಮನವಿಯನ್ನೂ ಮಾಡಿದ್ದರು. ಪೀಟರ್ ಆಕ್ರೋಶ, ಅಸಮಾಧಾನ ವ್ಯಕ್ತಪಡಿಸುತ್ತಲೇ ಪೆವಿಲಿಯನ್‌ನತ್ತ ಹೆಜ್ಜೆಹಾಕಿದ್ದರು. ಆಗಲೂ ಕಪಿಲ್ ಬಗ್ಗೆ ಕೆಲವು ವಿದೇಶಿ ಆಟಗಾರರು ಟೀಕೆಗಳ ಮಳೆ ಸುರಿಸಿದ್ದರು. ಕೆಲವು ವರ್ಷಗಳ ಹಿಂದೆ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಬೌಲಿಂಗ್ ಮಾಡುತ್ತ ಈ ನಿಯಮವನ್ನು ಅಣಕ ಮಾಡಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಈಗಲೂ ನೋಡುಗರಿಗೆ ಅಚ್ಚುಮೆಚ್ಚು.

ಅದು ಆಗಿನ ಮಾತಾಯಿತು. ಆದರೆ ಇದೀಗ ಎಂಸಿಸಿಯೇ ನಿಯಮ ಬದಲಾಯಿಸಿದರೂ ಟೀಕಿಸುವುದನ್ನು ನಿಲ್ಲಿಸಿಲ್ಲ.

'ನಾನು ಇಂತಹ ಔಟ್ ಮಾಡುವ ಅವಕಾಶ ಪಡೆದಿದ್ದರೆ ಬ್ಯಾಟರ್‌ನನ್ನು ಮರಳಿ ಕರೆಯುತ್ತೇನೆ. ಆಟ ಮುಂದುವರಿಸಲು ಅವಕಾಶ ಕೊಡುತ್ತೇನೆ. ಅದು ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯವೇ ಆಗಿರಬಹುದು' ಎಂದು ಇಂಗ್ಲೆಂಡ್‌ನ ಬಟ್ಲರ್ ಈಚೆಗೆ ಹೇಳಿದ್ದಾರೆ. ಅವರಿಗೆ ಮೋಯಿನ್ ಅಲಿ ಕೂಡ ದನಿಗೂಡಿಸಿದ್ದಾರೆ.

'ಕ್ರಿಕೆಟ್‌ನಲ್ಲಿ ಮಾತ್ರವಲ್ಲ, ಯಾವ ಕ್ರೀಡೆಯಲ್ಲೂ ಈ ರೀತಿ ಮಾಡುವುದು ಸ್ವೀಕಾರಾರ್ಹವಲ್ಲ' ಎಂದು ಸ್ಯಾಮ್ ಬಿಲ್ಲಿಂಗ್ಸ್ ಟ್ವೀಟ್ ಮಾಡಿದ್ದರು.

ಇದು ಬ್ಯಾಟರ್‌ಗಳ ಆಟವೆಂಬ ಮನೋಭಾವನೆ ಎಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಬೌಲರ್‌ಗಳಿಗೂ ಸಮಾನ ಗೌರವ ಇರಬೇಕು ಎಂದು ಪ್ರತಿಪಾದಿಸುವವರ ಒಂದು ವರ್ಗವೂ ಇದೆ. ಅವರಿಗೆ ಅಶ್ವಿನ್ ಛಲದ ಹೋರಾಟವು ದನಿ ನೀಡಿದ್ದು ಸುಳ್ಳಲ್ಲ. ಬ್ಯಾಟರ್‌ಗಳು ತಮ್ಮ ಹೊಡೆತಗಳನ್ನು ಪ್ರಯೋಗಿಸಲು '360 ಡಿಗ್ರಿ' ಚಲನೆಯನ್ನೂ ಮಾಡಬಹುದು. ಬಲಗೈ ಅಥವಾ ಎಡಗೈ ಬ್ಯಾಟರ್‌ಗಳು ತಮ್ಮ ಸ್ಟ್ಯಾನ್ಸ್ ಬದಲಿಸಿ, ಸ್ವಿಚ್ ಹಿಟ್, ರಿವರ್ಸ್ ಸ್ವೀಪ್ ಇತ್ಯಾದಿಗಳನ್ನು ಆಡುವ ಸ್ವಾತಂತ್ರ್ಯವಿದೆ. ಆದರೆ ಬೌಲಿಂಗ್‌ನಲ್ಲಿ ಆ ರೀತಿಯಾಗುವುದಿಲ್ಲ. ನೋಬಾಲ್ ಮಾಡಿದರೆ ಬ್ಯಾಟರ್‌ಗೆ ಫ್ರೀಹಿಟ್ ಅವಕಾಶ ಸಿಗುತ್ತದೆ. ಚೆಂಡು ಪ್ಯಾಡ್‌ಗೆ ಬಡಿದು ಅಥವಾ ಬಡಿಯದೇ ಸಾಗಿದರೂ ಇತರೆ ರನ್ ಗಳಿಸುವ ಅವಕಾಶ ಬ್ಯಾಟಿಂಗ್ ತಂಡಕ್ಕೆ ಸಿಗುತ್ತದೆ. ಆದರೆ ಬೌಲರ್‌ಗಳಿಗೆ ಇಂತಹ ಯಾವುದೇ ಅವಕಾಶಗಳಿಲ್ಲ.

ಅದಕ್ಕಾಗಿಯೇ ಅಶ್ವಿನ್ ಈಗ ದನಿಯೆತ್ತಿದ್ದಾರೆ. ನಾನ್‌ಸ್ಟ್ರೈಕರ್ ಕ್ರೀಸ್ ಬಿಟ್ಟರೆ ಔಟ್ ಮಾಡುವ ಬೌಲರ್ ಖಾತೆಗೆ ವಿಕೆಟ್ ದಕ್ಕಬೇಕು ಎಂಬುದು ಅವರ ವಾದ. ವಿನೂ ಮಂಕಡ್ ಅವರು ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಮಾಡಿದ ಪ್ರಯೋಗಕ್ಕೆ ಅಶ್ವಿನ್ ತಾತ್ವಿಕ ಅಂತ್ಯ ಬಯಸಿದ್ದಾರೆ. ಇದಕ್ಕೆ ಐಸಿಸಿ ಹಾಗೂ ಎಂಸಿಸಿ ಯಾವ ರೀತಿ ಸ್ಪಂದಿಸುತ್ತದೆ ಎಂಬುದು ಕುತೂಹಲ ಕೆರಳಿಸಿದೆ.

ಪ್ರಕರಣಗಳು

ಪುರುಷರು

ಸ್ಥಳ	ಬ್ಯಾಟರ್	ಬೌಲರ್	ವರ್ಷ
ಟೆಸ್ಟ್			
ಸಿಡ್ನಿ	ಬಿಲ್ ಬ್ರೌನ್ (ಆಸ್ಟ್ರೇಲಿಯಾ)	ವಿನೂ ಮಂಕಡ್ (ಭಾರತ)	1947-48
ಅಡಿಲೇಡ್	ಇಯಾನ್ ರೆಡ್‌ಪಾತ್ (ಆಸ್ಟ್ರೇಲಿಯಾ)	ಚಾರ್ಲೀ ಗ್ರಿಫಿತ್ (ವೆಸ್ಟ್ ಇಂಡೀಸ್)	1968-69
ಕ್ರೈಸ್ಟ್‌ಚರ್ಚ್	ಡರೆಕ್ ರೆಂಡಲ್ (ಇಂಗ್ಲೆಂಡ್)	ಇವಾನ್ ಚಾಟ್‌ಫೀಲ್ಡ್ (ನ್ಯೂಜಿಲೆಂಡ್)	1977-78
ಪರ್ಥ್	ಸಿಕಂದರ್ ಬಕ್ತ್ (ಪಾಕಿಸ್ತಾನ)	ಅಲನ್ ಹರ್ಸ್ಟ್ (ಆಸ್ಟ್ರೇಲಿಯಾ)	1978-79
ಏಕದಿನ			
ಮೆಲ್ಬರ್ನ್	ಬ್ರಯನ್ ಲುಕರ್ಸ್ಟ್ (ಇಂಗ್ಲೆಂಡ್)	ಗ್ರೆಗ್ ಚಾಪೆಲ್ (ಆಸ್ಟ್ರೇಲಿಯಾ)	1974-75
ಹರಾರೆ	ಗ್ರ್ಯಾಂಟ್ ಫ್ಲಾವರ್ (ಜಿಂಬಾಬ್ವೆ)	ದೀಪಕ್ ಪಟೇಲ್ (ನ್ಯೂಜಿಲೆಂಡ್)	1992-93
ಪೋರ್ಟ್ ಎಲಿಜಬೆತ್	ಪೀಟರ್ ಕರ್ಸ್ಟನ್ (ದಕ್ಷಿಣ ಆಫ್ರಿಕಾ)	ಕಪಿಲ್ ದೇವ್ (ಭಾರತ)	1992-93
ಎಜ್‌ಬಾಸ್ಟನ್	ಜಾಸ್ ಬಟ್ಲರ್ (ಇಂಗ್ಲೆಂಡ್)	ಸುಚಿತ್ರಾ ಸೇನನಾಯಕೆ (ಶ್ರೀಲಂಕಾ)	2014
ಟಿ20			
ಢಾಕಾ	ಮಾರ್ಕ್ ಚಾಪಮನ್ (ಹಾಂಗ್‌ಕಾಂಗ್)	ಅಮೀರ್ ಕಲೀಂ (ಒಮಾನ್)	2016

ಮಹಿಳೆಯರು

ಸ್ಥಳ	ಬ್ಯಾಟರ್	ಬೌಲರ್	ವರ್ಷ
ಏಕದಿನ			
ಲಾರ್ಡ್ಸ್	ಚಾರ್ಲಿ ಡೀನ್ (ಇಂಗ್ಲೆಂಡ್)	ದೀಪ್ತಿ ಶರ್ಮಾ (ಭಾರತ)	2022

ಜಾಸ್ ಬಟ್ಲರ್ ಹಾಗೂ ಅಶ್ವಿನ್

ಚಾಹರ್ 'ಡೆಡ್‌ಬಾಲ್'

ಹೋದ ತಿಂಗಳು ಜಿಂಬಾಬ್ವೆಯಲ್ಲಿ ಇನ್ನೊಂದು ಘಟನೆ ನಡೆದಿತ್ತು. ಹರಾರೆಯಲ್ಲಿ ಜಿಂಬಾಬ್ವೆ ವಿರುದ್ಧ ನಡೆದಿದ್ದ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಭಾರತದ ಬೌಲರ್ ದೀಪಕ್ ಚಾಹರ್, ಮಂಕಡಿಂಗ್ ಮಾಡಿದರೂ ಎದುರಾಳಿ ತಂಡದ ಬ್ಯಾಟರ್‌ಗೆ ಮಗದೊಂದು ಅವಕಾಶ ನೀಡಿದ್ದರು. ಎಸೆತ ಹಾಕುವ ಮುನ್ನವೇ ನಾನ್ ಸ್ಟ್ರೈಕರ್ ಕ್ರೀಸ್ ಬಿಟ್ಟಿದ್ದನ್ನು ಗಮನಿಸಿದ ದೀಪಕ್ ಚಾಹರ್ ಬೇಲ್ಸ್ ಹಾರಿಸಿದರು. ಆದರೆ ಔಟ್‌ಗಾಗಿ ಅಪೀಲ್ ಮಾಡಲಿಲ್ಲ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 240

ಸತಿ ದಾಂಪತ್ಯಕ್ಕೆ ಶಾಸ್ತ್ರ ತೊಡಕು

ಎದುರಿನಲ್ಲಿಯೇ ನಿಂತಿರುವ ತನ್ನ ಸ್ವಾಮಿಯನ್ನು ನೋಡಿ ಗಿರಿಜೆಯ ಮುಖ ಪ್ರೀತಿಯಿಂದ ಅರಳಿತು. ಮನಸ್ಸಿನಲ್ಲಾಗುತ್ತಿದ್ದ ಸಂತೋಷ ತಡೆಯಲಾಗದೆ ಶಿವನಿಗೆ ಹೇಳಿದಳು, 'ಓ ಮಹಾದೇವ, ನೀನು ನನ್ನ ಸ್ವಾಮಿ ಎಂಬುದನ್ನು ಮರೆತುಬಿಟ್ಟಿರುವೆಯಾ? ನನಗಾಗಿಯೇ ನೀನು ದಕ್ಷಬ್ರಹ್ಮನ ಯಾಗವನ್ನು ಹಿಂದೆ ಕೋಪದಿಂದ ನಾಶಮಾಡಿದೆಯಲ್ಲವೇ? ನನ್ನ ಮೇಲೆ ಅಷ್ಟೊಂದು ಪ್ರೀತಿ ಇಟ್ಟುಕೊಂಡಿರುವ ನೀನು ಏಕೆ ಇಷ್ಟೊಂದು ಪರೀಕ್ಷೆ ಮಾಡಿದೆ? ತಾರಕಾಸುರನ ಉಪಟಳದಿಂದ ನೊಂದಿರುವ ದೇವತೆಗಳ ನೋವನ್ನು ನಿವಾರಿಸಿ, ಮತ್ತೆ ಜಗತ್ತಿನಲ್ಲಿ ಶಾಂತಿ-ನೆಮ್ಮದಿ ತರುವ ಕಾರ್ಯಸಿದ್ಧಿಗಾಗಿ ಅವತರಿಸಿದ್ದೇನೆ. ಇದೆಲ್ಲ ನಿನಗೆ ಗೊತ್ತಿದ್ದೂ ಏಕೆ ನನ್ನ ವಿವಾಹವಾಗಲು ವಿಳಂಬಿಸಿದೆ? ಇನ್ನೂ ನನ್ನ ಪರೀಕ್ಷಿಸಬೇಕೆಂದಿದ್ದರೆ ನಿನಗೆ ತೋಚಿದ ಪರೀಕ್ಷೆ ಮಾಡು. ನೀನು ನನ್ನಲ್ಲಿ ಪ್ರಸನ್ನನಾಗಿ ಅನುಗ್ರಹವನ್ನು ಮಾಡಬೇಕೆಂದಿದ್ದರೆ, ನೀನು ನನ್ನ ವಿವಾಹವಾಗು. ನೀನು ನನ್ನ ಪತಿಯಾಗಬೇಕೆಂದು ಹಗಲು-ಇರುಳು ಎನ್ನದೆ, ಮಳೆ-ಬಿಸಿಲು ಅಂತ ಅಳುಕದೆ, ಕಾಡು-ಮೇಡು ಎಂದು ನೋಡದೆ ಕಠಿಣ ತಪಸ್ಸು ಮಾಡಿದ್ದೇನೆ. ನನ್ನ ತಪೋವಿಧಿಯಲ್ಲಿ ಯಾವುದಾದರೂ ಲೋಪವಿದ್ದರೆ ತಿಳಿಸು, ಮತ್ತೆ ಮೂರು ಸಾವಿರ ವರ್ಷ ತಪೋನಿರತಳಾಗುತ್ತೇನೆ. ಏಕೆಂದರೆ, ನಿನ್ನ ಪಡೆಯುವುದಕ್ಕಿಂತ ಮತ್ತೊಂದು ಆಸೆ ನನ್ನ ಜೀವನದಲ್ಲಿಲ್ಲ. ಲೀಲಾಮಯನಾದ ಓ ಸ್ವಾಮಿಯೇ, ನನ್ನ ಮದುವೆಯಾಗಲು ನಿನಗೆ ಇಚ್ಛೆ ಇದ್ದರೆ, ಈಗಲೇ ನನ್ನ ತಂದೆ ಹಿಮವಂತನ ಮನೆಗೆ ಹೋಗು. ಅಲ್ಲಿ ನನ್ನ ಪಾಣಿಗ್ರಹಣಕ್ಕಾಗಿ ತಂದೆಯ ಅನುಮತಿಯನ್ನು ಪಡೆದುಕೋ. ನಿನ್ನ ಬೇಡಿಕೆಯನ್ನು ನನ್ನ ತಂದೆ ಖಂಡಿತ ಈಡೇರಿಸುತ್ತಾರೆಂಬ ನಂಬಿಕೆ ನನಗಿದೆ. ನಮ್ಮ ವಿವಾಹದಿಂದ ನನ್ನ ತಂದೆಯ ಗೃಹಸ್ಥಾಶ್ರಮವನ್ನು ಸಾರ್ಥಕಗೊಳಿಸಬೇಕು. ಏಕೆಂದರೆ, ಸೂಕ್ತ ವರನೊಂದಿಗೆ ನನ್ನ ವಿವಾಹ ಮಾಡಿ, ತಂದೆಯಾಗಿ ತಮ್ಮ ಕರ್ತವ್ಯ ಪೂರ್ಣಗೊಳಿಸಲು ಕಾಯುತ್ತಿದ್ದಾರೆ. ನಮ್ಮ ಮದುವೆ ವಿಷಯ ತಿಳಿದರೆ ನನ್ನ ತಂದೆಗೆ ಸಂತೋಷವಾಗುತ್ತದೆ. ಅವರು ಕೂಡಲೇ, ಋಷಿಗಳು ಮತ್ತು ಬಂಧುಗಳೊಂದಿಗೆ ಚರ್ಚಿಸಿ, ನಮ್ಮ ವಿವಾಹ ಮಹೋತ್ಸವಕ್ಕೆ ಸಿದ್ಧತೆ ಮಾಡುತ್ತಾರೆ.

'ತಾಯಿ ಮೇನಾದೇವಿ ನನ್ನ ಮದುವೆಯ ಚಿಂತೆಯಲ್ಲೇ ಕಾಲ ಕಳೆಯುತ್ತಿದ್ದಾರೆ. ಸೋದರ ಮೈನಾಕ, ಬಂಧುಗಳಾದ ಸಹ್ಯಾದ್ರಿ, ಮಂದರಗಿರಿ, ಮೇರುಗಿರಿ, ಕ್ರೌಂಚ ಮುಂತಾದವರು ನನ್ನ ವಿವಾಹಕ್ಕಾಗಿ ಕಾತರಿಸುತ್ತಿದ್ದಾರೆ. ಅವರಿಗೆ ನಾನು ಇಷ್ಟಪಟ್ಟ ಶಿವನೊಂದಿಗೆ ಮದುವೆಯಾಗುವ ವಿಷಯ ತಿಳಿದರೆ, ಸಂತೋಷದಿಂದ ಸಂಭ್ರಮಿಸುತ್ತಾರೆ. ಮಹಾದೇವ, ನಿನ್ನ ಮದುವೆಯಾಗಲು ನನ್ನದೊಂದು ಕೋರಿಕೆ ಇದೆ. ನಮ್ಮ ವಿವಾಹ ವಿಧಿವತ್ತಾಗಿ ನಡೆಯಬೇಕು. ಹಿಂದಿನ ಜನ್ಮದಲ್ಲಿ ನಮ್ಮ ವಿವಾಹ ವಿಧಿವತ್ತಾಗಿ ನಡೆಯಲಿಲ್ಲ. ಇದರಿಂದ ನಮ್ಮ ದಾಂಪತ್ಯ ಅರ್ಧಕ್ಕೆ ಅಂತ್ಯವಾಯಿತು. ನನ್ನ ತಂದೆ ದಕ್ಷಬ್ರಹ್ಮ ವಿವಾಹ ಮಾಡುವಾಗ ಗ್ರಹಗಳನ್ನು ಪೂಜಿಸಲೇ ಇಲ್ಲ. ಇದರಿಂದ ಉಂಟಾದ ಮಹತ್ತಾದ ಗ್ರಹದೋಷದಿಂದ ನಮ್ಮ ದಾಂಪತ್ಯಜೀವನಕ್ಕೆ ತೊಡಕಾಯಿತು. ಆದುದರಿಂದ ಓ ಮಹಾದೇವ, ವಿಧಿವತ್ತಾಗಿಯೇ ನನ್ನನ್ನು ನೀನು ಮದುವೆಯಾಗಬೇಕು. ಅದರಿಂದ ದೇವಕಾರ್ಯಸಿದ್ಧಿಯೂ ಆಗುವುದು. ಇದಕ್ಕಾಗಿ ವಿವಾಹಕಾರ್ಯದಲ್ಲಿ ಯಾವ ಯಾವ ನಿಯಮಗಳಿರುವುವೋ ಅವುಗಳನ್ನೆಲ್ಲ ಮಾಡಬೇಕು' ಎಂದಳು. •

ನಿಯಮ ಬದಲಾವಣೆ ಬೇಕಿತ್ತಾ?

ಇವತ್ತು ಕ್ರಿಕೆಟ್ ಪ್ರಮುಖ ವಾಣಿಜ್ಯ ಚಟುವಟಿಕೆಯಾಗಿ ಬೆಳೆದಿದೆ. ಸಾವಿರಾರು ಕೋಟಿ ರೂಪಾಯಿಯ ವ್ಯವಹಾರ ಇದಾಗಿದೆ. 'ಫೇರ್ ಪ್ಲೇ' ಎಂಬುದು ಹಿಂದೆಂದಿಗಿಂತಲೂ ಇಂದು ಮುಖ್ಯವಾಗಿದೆ. ಆದ್ದರಿಂದ ಕಾಲಕಾಲಕ್ಕೆ ನಿಯಮಗಳಲ್ಲಿ ಬದಲಾವಣೆಗಳು ಅಗತ್ಯವಾಗಿ ಆಗುತ್ತಿವೆ. ಒಂದು ಸಮಯದಲ್ಲಿ ಅಂಪೈರ್ ನಿರ್ಣಯವೇ ಅಂತಿಮ ಎನ್ನುವ ಮಾತಿತ್ತು. ಆದರೆ ಈಗ ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್‌ಎಸ್) ಜಾರಿಯಾಗಿದೆ. ಟಿ20 ಕ್ರಿಕೆಟ್ ಕಾಲಘಟ್ಟದಲ್ಲಿ ಪ್ರತಿಯೊಂದು ರನ್ ಅಥವಾ ಎಸೆತ ಫಲಿತಾಂಶದ ಮೇಲೆ ಪರಿಣಾಮ ಬೀರಬಲ್ಲವು. ಇಂತಹ ಪರಿಸ್ಥಿತಿಯಲ್ಲಿ ಬೌಲರ್ ಎಸೆತ ಹಾಕುವ ಮುನ್ನವೇ ನಾನ್‌ಸ್ಟ್ರೈಕರ್ ಬ್ಯಾಟರ್ ಕಾಲು ಭಾಗ ಪಿಚ್ ದಾಟಿ ಓಡಿದ್ದರೆ, ಅತ್ತಣಿಂದ ಬ್ಯಾಟರ್ ಚೆಂಡನ್ನು ಹೊಡೆದು ಓಡಿದಾಗ ಒಂದು ರನ್ ಪಡೆಯುವುದು ಸುಲಭ. ನಾನ್‌ಸ್ಟ್ರೈಕರ್ ಓಡುವ ದಿಕ್ಕು ಯಾವಾಗಲೂ ಸುರಕ್ಷಿತ ವಲಯವೇ ಆಗಿರುವುದು ಹೆಚ್ಚು. ಆದ್ದರಿಂದ ಮಂಕಡಿಂಗ್ ನಿಯಮದಲ್ಲಿ ಬದಲಾವಣೆ ಅಪೇಕ್ಷಣಿಯವೇ ಆಗಿತ್ತು. ಆದರೆ ಇಂಗ್ಲೆಂಡ್ ತಂಡದ ಆಟಗಾರರೇ ಇದಕ್ಕೆ ಹೆಚ್ಚು ವಿರೋಧ ವ್ಯಕ್ತಪಡಿಸುವುದು ಬ್ಯಾಟರ್‌ಗಳ ಪ್ರತಿಷ್ಠೆಯೂ ಕಾರಣವಾಗಿರಬಹುದು. ಆದರೆ, ಆಟದಲ್ಲಿ ಆರೋಗ್ಯಕರ ಸ್ಪರ್ಧೆ ಇರುವಂತೆ ನೋಡಿಕೊಳ್ಳುವ ಎಂಸಿಸಿ ನಿಯಮಗಳನ್ನು ಪರಿಷ್ಕರಿಸಲು ಹಿಂಜರಿದಿಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಮ್ಮು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಶ್ರೀನಗರದಲ್ಲಿ ಚಿತ್ರಮಂದಿರವೊಂದನ್ನು ಸೆ.20ರಂದು ಉದ್ಘಾಟಿಸಿದರು. 'ಸ್ವಾತಂತ್ರ್ಯಾನಂತರ ಜಮ್ಮು ಕಾಶ್ಮೀರದಲ್ಲಿ ಇದೇ ಮೊದಲ ಬಾರಿಗೆ ಚಿತ್ರಮಂದಿರಗಳು ಕಾರ್ಯಾರಂಭ ಮಾಡಿವೆ. ಆರ್‌ಆರ್‌ಆರ್ ಚಿತ್ರವು ಕಾಶ್ಮೀರದಲ್ಲಿ ಪ್ರದರ್ಶನಗೊಂಡ ಮೊದಲ ಚಿತ್ರ' ಎಂಬ ಮಾಹಿತಿ ಇರುವ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಪೋಸ್ಟರ್‌ನಲ್ಲಿರುವ ಮಾಹಿತಿ ತಪ್ಪಾಗಿದ್ದು, 1932ರಿಂದಲೂ ಕಾಶ್ಮೀರದಲ್ಲಿ ಚಿತ್ರಮಂದಿರಗಳು ಇದ್ದವು ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 1980ರ ದಶಕದಲ್ಲಿ ಶ್ರೀನಗರದಲ್ಲಿ ರೀಗಲ್, ನೀಲಂ ಮೊದಲಾದ 9 ಚಿತ್ರಮಂದಿರಗಳಿದ್ದವು. ಕಾಶ್ಮೀರದಲ್ಲಿ ಒಟ್ಟು 15 ಸಿನಿಮಾ ಮಂದಿರಗಳಿದ್ದವು. ಆದರೆ, 90ರ ದಶಕದಲ್ಲಿ ಕಣಿವೆಯಲ್ಲಿ ಭಯೋತ್ಪಾದಕರ ದಾಳಿ ಹೆಚ್ಚಿತ್ತು. ಚಿತ್ರಮಂದಿರಗಳ ಮೇಲೆ ಗ್ರೆನೇಡ್ ದಾಳಿ ನಡೆದಿದ್ದರಿಂದ ಅವು ಬಂದ್ ಆಗಿದ್ದವು. ಫಸ್ಟ್‌ಪೋಸ್ಟ್, ಹಿಂದೂಸ್ತಾನ್ ಟೈಮ್ಸ್ ಸೇರಿ ವಿವಿಧ ಪತ್ರಿಕೆಗಳಲ್ಲಿ ಇದನ್ನು ಪುಷ್ಟೀಕರಿಸುವ ಲೇಖನಗಳು ಪ್ರಕಟವಾಗಿವೆ. ಈಗ ಚಿತ್ರಮಂದಿರಗಳಿಗೆ ಮರು ಚಾಲನೆ ಸಿಕ್ಕಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಓಲೆಕಾರನ ನಿರ್ಲಿಪ್ತತೆ

ಓಲೆಕಾರನಿಗೇಕೆ ಬರೆದ ಸುದ್ದಿಯ ಚಿಂತೆ? |
ಓಲೆಗಳನವರವರಿಗೈದಿಸಿರೆ ಸಾಕು ||
ಸಾಲಗಳೊ, ಶೂಲಗಳೊ, ನೋವುಗಳೊ,
ನಗುವುಗಳೊ! |
ಕಾಲೋಟವವನೂಟ – ಮಂಕುತಿಮ್ಮ || 727

|ಪದ-ಅರ್ಥ: ಓಲೆಕಾರನಿಗೇಕೆ = ಓಲೆಕಾರನಿಗೆ (ಅಂಚೆ ಹಂಚುವವನಿಗೆ) + ಏಕೆ, ಓಲೆಗಳನವರವರಿಗೈದಿಸಿರೆ = ಓಲೆಗಳನ್ನು + ಅವರವರಿಗೆ + ಐದಿಸಿರೆ(ತಲುಪಿಸಿದರೆ), ಕಾಲೋಟವವನೂಟ = ಕಾಲೋಟವು + ಅವನ + ಊಟ.

ವಾಚ್ಯಾರ್ಥ: ಅಂಚೆಯಾಳಿಗೆ, ಪತ್ರದ ಸುದ್ದಿಯ ಚಿಂತೆ ಏಕೆ? ಅವರವರ ಪತ್ರಗಳನ್ನು ಅವರಿಗೆ ತಲುಪಿಸಿದರೆ ಸಾಕು. ಪತ್ರದಲ್ಲಿರುವ ಸಾಲುಗಳು, ಶೂಲಗಳು, ನೋವುಗಳು, ನಗುವುಗಳು, ಇವುಗಳ ವಿಷಯ ಅವನಿಗೆ ಸಂಬಂಧಿಸಿದ್ದಲ್ಲ. ಅವನು ನಡೆನಡೆದು ತಲುಪಿಸಿದ್ದರಿಂದಲೇ ಅವನಿಗೆ ಊಟ.

ವಿವರಣೆ: ಈ ಕಗ್ಗದಲ್ಲಿ ಒಂದು ಸುಂದರ ರೂಪಕ ತಳೆದು ನಿಂತಿದೆ. ಇಲ್ಲೊಂದು ದೃಶ್ಯ. ಅಂಚೆಯಾಳು ಮನೆಯಿಂದ ಮನೆಗೆ ಪತ್ರಗಳನ್ನು ತೆಗೆದುಕೊಂಡು ಹೋಗಿ ಹಂಚುತ್ತಿದ್ದಾನೆ. ಅವನಿಗೆ ಸಂಬಂಧಪಟ್ಟದ್ದು ಓಲೆಯ ಮೇಲೆ ಬರೆದ ವಿಳಾಸವಷ್ಟೆ. ಪತ್ರದೊಳಗಿದ್ದ ವಿಷಯಗಳ ಬಗ್ಗೆ ಅವನೇಕೆ ಚಿಂತಿಸುತ್ತಾನೆ? ವಿಳಾಸವಿದ್ದವರ ಪತ್ರಗಳನ್ನು ಅವರಿಗೆ ತಲುಪಿಸುವುದು ಅವನ ಧರ್ಮ. ಪತ್ರದಲ್ಲಿ ಸಾಲದ ವಿಷಯವಿದೆಯೋ, ನೋವಿದೆಯೋ, ಸಂತೋಷದ ಸುದ್ದಿ ಇದೆಯೋ ಎಂದು ಅವನು ಯೋಚಿಸಲು ಹೋಗುವುದಿಲ್ಲ. ಅವನ ಕೆಲಸ, ಇಡಿ ದಿನ ನಡೆದು ಪತ್ರಗಳನ್ನು ಮುಟ್ಟಿಸುವುದು. ಅದರಿಂದ ಅವನಿಗೆ ಸಂಬಳ, ಊಟ. ಇದು ಮೇಲ್ನೋಟಕ್ಕೆ ಕಾಣುವ ಚಿತ್ರ. ಈ ಚಿತ್ರದ ಹಿಂದೆ ಒಂದು ಬಹುದೊಡ್ಡ ತತ್ವವಿದೆ. ಪತ್ರಗಳನ್ನು ಜನರಿಗೆ ಹಂಚುವುದೆಂದರೆ ಒಬ್ಬ ವ್ಯಕ್ತಿ ಸಮಾಜದಲ್ಲಿ ಅನೇಕರೊಡನೆ ಸಂವಹನ ಮಾಡುವುದು. ಆಗ ಕೆಲವು ಸಂತೋಷದ, ನೋವಿನ ಘಟನೆಗಳು ನಡೆಯಬಹುದು. ಆಗ ನಾವು ಹೇಗೆ ನಡೆದುಕೊಳ್ಳಬೇಕು? ಇದಕ್ಕೆ ನಮ್ಮ ಭಾರತೀಯ ಚಿಂತನೆಯಲ್ಲಿ ಸಾಕ್ಷೀಭಾವ ಎನ್ನುತ್ತಾರೆ. ಬದುಕಿನಲ್ಲಿ ನಡೆಯುವ ಘಟನೆಗಳಿಂದ ನಮ್ಮನ್ನು ಪ್ರತ್ಯೇಕಿಸಿಕೊಂಡು, ಅವುಗಳನ್ನು ಸಾಕ್ಷಿಯಂತೆ ನೋಡತೊಡಗಿದರೆ, ಅವು ನಮ್ಮ ಮೇಲೆ ಅತಿಯಾದ ಪರಿಣಾಮಗಳನ್ನು ಮಾಡಲಾರವು. ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಭಾವೋದ್ವೇಗಗಳು ಬರುತ್ತವೆ. ಅವುಗಳೊಡನೆ ನಾವು ತಾದಾತ್ಮ್ಯ ಹೊಂದಿದಾಗ ಅವು ಮತ್ತಷ್ಟು ಪ್ರಬಲವಾಗುತ್ತವೆ. ನಮ್ಮಲ್ಲಿ ಯಾವಾಗ ಎಂತೆಂಥ ಆಲೋಚನೆಗಳು ಬರುತ್ತವೆ, ಯಾವ ಭಾವವಿಕಾರಗಳು ಏಳುತ್ತವೆ ಎಂಬುದರ ಅರಿವೇ ಇರುವುದಿಲ್ಲ. ಭಾವಪ್ರವಾಹದಲ್ಲಿ ಇರುವವರೆಗೆ ನಮಗೆ ಪ್ರವಾಹದ ದಿಶೆ, ವೇಗ ತಿಳಿಯಲಾರದು. ಪ್ರವಾಹದಿಂದ ಹೊರಗೆ ಬಂದು ನಿಂತಾಗ, ಅದರ ಗತಿಯನ್ನು ನೋಡುವುದರೊಂದಿಗೆ, ಅದರ ಪರಿಣಾಮದಿಂದ ತಪ್ಪಿಸಿಕೊಳ್ಳಬಹುದು. ಇದೇ ಸಾಕ್ಷೀಭಾವ. ನಾವು ಘಟನೆಗಳಲ್ಲಿ ಪಾತ್ರವಾಗದೆ, ಸಾಕ್ಷಿಯಂತೆ ನಿಂತು ನೋಡಿದಾಗ ಮನಸ್ಸಿನ ಕುಣಿದಾಟ ಕಡಿಮೆಯಾಗಿ ಅದು ಶಾಂತವಾಗುತ್ತದೆ. ಹೀಗೆ ಬದುಕಿನ ಘಟನೆಗಳಲ್ಲಿ ಸಾಕ್ಷಿಯಾಗುವುದು ತುಂಬ ಸುಲಭವೇನಲ್ಲ. ಅದಕ್ಕೆ ಧೃಡವಾದ ಮನಸ್ಸು ಮತ್ತು ಪ್ರಯತ್ನ ಬೇಕು. ಅದು ಸಾಧಿಸಿದಾಗ, ನಾವು ಅಂಚೆಯವನಂತೆ, ಪತ್ರದ ವಿವರಗಳನ್ನೋದದೆ, ಅಂದರೆ ಘಟನೆಗಳಿಂದ ಭಾವೋದ್ರೇಕಗೊಳ್ಳದೆ, ಪತ್ರವನ್ನು ತಲುಪಿಸುವುದು, ಅಂದರೆ ಕಾರ್ಯಮಾಡುವುದು, ಸಾಧ್ಯವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಅಷ್ಟಮಿ ಗಂ. 16-38 ನಕ್ಷತ್ರ: ಪೂರ್ವಾಷಾಢ ಗಂ. 24-25 ಯೋಗ: ಶೋಭನ ಗಂ. 14-21, ಕರಣ: ಬವ ಗಂ. 16-38, ಕನ್ಯಾ ಮಾಸದ 16 ನೇ ದಿನ. ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 06-23 ಸೂರ್ಯಾಸ್ತ : 06-16 ಮುಸ್ಲಿಂ ದಿನಾಂಕ : 06 ರಬೀಉಲ್ಲಾವಲ್
ದಿನ ವಿಶೇಷ : ದುರ್ಗಾಷ್ಟಮಿ
ಅದೃಷ್ಟ ಸಂಖ್ಯೆ : 4, 10

ಮೇಷ: ವ್ಯವಹಾರದ ಒತ್ತಡವಿದ್ದರೂ ರೀತಿ-ನೀತಿಗಳನ್ನು ಅನುಸರಿಸಿದರೆ ಸಫಲರಾಗುವಿರಿ. ಹಳೆಯ ಕೆಲಸ ಪೂರ್ಣಗೊಳಿಸಿಕೊಂಡು ಹೊಸ ಕೆಲಸಗಳಿಗೆ ಕೈ ಹಾಕುವ ಯೋಚನೆಯನ್ನು ಮಾಡಿ. ವಿದೇಶ ಪ್ರಯಾಣ ಅವಕಾಶ ಸಿಗಲಿದೆ.

ವೃಷಭ: ರೇಷ್ಮೆ ವ್ಯವಹಾರದಲ್ಲಿ ಹೆಚ್ಚಿನ ಆದಾಯವಿದ್ದು ವ್ಯವಹಾರವನ್ನು ವಿಸ್ತರಿಸುವ ಬಗ್ಗೆ ಯೋಚಿಸುವಿರಿ. ಕಾರ್ಮಿಕರು ಕೊಡುವ ಸಲಹೆಯಿಂದ ನಿಮಗೆ ಅನುಕೂಲವಾಗುವಂತಹ ಸನ್ನಿವೇಶ ಒದಗಿ ಬರಲಿದೆ.

ಮಿಥುನ: ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡ ಬೇಕಾದ ಸಂದರ್ಭ ಬರುವುದು. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಗಮನಿಸಿ. ಅಬಕಾರಿ ಗುತ್ತಿಗೆದಾರರಿಗೆ ಉತ್ತಮವಾದ ಆದಾಯವಿರುವುದು.

ಕರ್ಕಾಟಕ: ಕೆಲಸದಲ್ಲಿ ಬಹಳ ಅವಸರ ತೋರುವ ನಿಮ್ಮ ಸ್ವಭಾವದಿಂದ ಇತರರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿ. ಇನ್ನೊಬ್ಬರನ್ನು ಅವಹೇಳನೆ ಮಾಡುವ ನಿಮ್ಮ ಮನಸ್ಥಿತಿಯನ್ನು ಸರಿಪಡಿಸಿಕೊಳ್ಳಿ.

ಸಿಂಹ: ಒಂದೆಡೆ ಉಳಿತಾಯಕ್ಕೆ ಯತ್ನಿಸುತ್ತಿದ್ದರೆ ಮತ್ತೊಂದು ಕಡೆಯಲ್ಲಿ ಖರ್ಚು ಹೆಚ್ಚಾದಂತಾಗಲಿದೆ. ಈ ದಿನ ಯಾರಲ್ಲಿಯೂ ಸಾಲ ಮಾಡುವುದು ಸರಿಯಲ್ಲ. ಸಾಕು ಪ್ರಾಣಿಗಳಿಂದ ಸಣ್ಣ-ಪುಟ್ಟ ತೊಂದರೆಗಳು ಸಂಭವಿಸಬಹುದು.

ಕನ್ಯಾ: ಮಂಗಳ ಕಾರ್ಯದ ಸಲುವಾಗಿ ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯುವುದು. ಕೆಲವೊಂದು ಅನಿರೀಕ್ಷಿತ ಹಾಗೂ ಉತ್ತಮ ಘಟನೆಗಳು ಈ ದಿನ ನಿಮ್ಮ ಬದುಕಿನಲ್ಲಿ ನಡೆಯಲಿದೆ.

ತುಲಾ: ಇನ್ನೊಬ್ಬರಿಗೆ ಸಾಮರ್ಥ್ಯಕ್ಕೆ ತಕ್ಕಂತೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ. ವೃತ್ತಿಯಲ್ಲಿ ವೇತನ ಕಡಿಮೆ ಇದ್ದರೂ ಹೊಂದಾಣಿಕೆ ಸರಿಯಾದ ಮಾರ್ಗವೆಂದು ಅನಿಸಲಿದೆ. ಜವಳೀ ವ್ಯಾಪಾರಿಗಳಿಗೆ ಲಾಭವಾಗುವುದು.

ವೃಶ್ಚಿಕ: ಕಾಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಾಳಿನಲ್ಲಿ ಅನಿವಾರ್ಯವಾಗುತ್ತದೆ. ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ನಂತರದಲ್ಲಿ ನೀವು ಗೌರವವನ್ನು ಅಪೇಕ್ಷಿಸಬಹುದು. ಮನದ ಇಚ್ಛೆಗಳು ಇಂದು ಈಡೇರಲಿದೆ.

ಧನು: ಆಸ್ತಿ ಖರೀದಿ ಮಾಡುವ ಬಗ್ಗೆ ಯೋಚನೆ ಮಾಡಬಹುದು. ಅದಕ್ಕೆ ಬೇಕಾದ ಆರ್ಥಿಕ ನೆರವು ತಾನಾಗಿಯೇ ಒದಗಿಬರಲಿದೆ. ಯಾವುದೇ ವಿಚಾರದ ಬಗ್ಗೆ ಆಲೋಚಿಸಿ ತೀರ್ಮಾನ ಕೈಗೊಂಡಲ್ಲಿ ಜಯ ಸಂಪಾದಿಸುವಿರಿ.

ಮಕರ: ಉನ್ನತ ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭ್ಯವಾಗುತ್ತದೆ. ಹಿರಿಯರ ಮಾತಿನಂತೆ ನಡೆಯುವುದು ಶ್ರೇಯಸ್ಕರ. ಮನೆ ಕಡೆಗೆ ಹೆಚ್ಚಿನ ಗಮನಹರಿಸಿ. ವಾಣಿಜ್ಯ ವ್ಯವಹಾರಗಳು ಲಾಭ ತರಲಿವೆ.

ಕುಂಭ: ನೀವು ಈ ದಿನ ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ. ನಿಮ್ಮ ಯಾಂತ್ರಿಕ ಬದುಕಿನಿಂದ ತುಸು ವಿರಾಮ ಪಡೆಯಲು ಸಾಧ್ಯವಾಗುತ್ತದೆ.

ಮೀನ: ದ್ವಿಚಕ್ರ ವಾಹನಗಳ ಮಾರಾಟಗಾರರು ಜೋರಿನ ವಹಿವಾಟು ನಡೆಸುವರು. ಕಾನೂನು ವ್ಯಾಸಂಗ ವಿದ್ಯಾರ್ಥಿಗಳಿಗೆ ಉತ್ತಮ ಅನುಭವ ಸಿಗಲಿದೆ. ಕಾರ್ಯ ಸಾಧಿಸಲು ಸ್ವಲ್ಪ ಶ್ರಮ ವಹಿಸಬೇಕಾಗುವುದು.

ಪದಬಂಧ 5098 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸುಂಕ ಕೊಡುವಾಗ ಮಾಡಿರುವ ಕೂಡುವ ಲೆಕ್ಕ (4)
2. ಗತಿಯಲ್ಲಿ ಕೊನೆಗೊಂಡಿರುವ ಏಳಿಗೆ (3)
4. ಕಲೆಸಿದ ಗೋಧಿ ಹಿಟ್ಟು (3)
6. ದರ ಹೇಳುತ್ತ ತೋರಿಸಿದ ಹೊಟ್ಟೆ (3)
7. ನಾಮ ಧರಿಸಿದವನ ಹೆಸರಿಡುವ ಶಾಸ್ತ್ರ (5)
10. ಕಣದಲ್ಲಿ ನಡೆದ ಲಗ್ನ (3)
11. ಶರ ಬಿದ್ದಿರುವ ಸಮುದ್ರ (3)
13. ವಿಷ್ಣುವಿನ ವಾಹನವಿದು (3)
14. ಪರಾಕು ಹೇಳಿದವ ಕೆನ್ನೆಗೆ ನೀಡಿದ ಏಟು! (4)

ಮೇಲಿಂದ ಕೆಳಕ್ಕೆ

1. ಸಂಧಿಯಲ್ಲಿಟ್ಟಿರುವ ಕಬ್ಬಿಣದ ಭಾರೀ ಪೆಟ್ಟಿಗೆ (3)
2. ಕೊನೆಗೆ ಚಾರನಿದ್ದದಕ್ಕೇ ಹರಡುವಿಕೆ! (3)
3. ಮನಸ್ಸಿಗೆ ಬಂದಂತೆ ನಡೆಯುವುದು (3)
5. ನಾವೆ ನಡೆಸುವವ ತಿರುಗಿದ್ದಾನಲ್ಲಾ? (3)
6. ಕರದಲ್ಲಿಟ್ಟುಕೊಂಡಿರುವ ಸಾಧನ! (5)
8. ಶರ ಹಿಡಿದಿರುವ ಶೈವ ಭಕ್ತ ತಿರುಗಿದ್ದಾನಲ್ಲಾ? (3)
9. ನೆಲ ಅಥವಾ ಬೆಟ್ಟದಲ್ಲಿ ಕೊರೆದು ಮಾಡಿರುವ ದಾರಿ (3)
10. ಕಸ್ತೂರಿ ಕಂಪುಳ್ಳ ಕನ್ನಡಿಗರ ಭಾಷೆ (3)
12. ಸೊಕ್ಕು ಹೀಗೆ ಬಂದಿದೆ (3)



5097ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರಮಾನ 3.ವನ್ಯಮೃಗ
5.ದುರಾಸೆ 6.ರವಾನೆ
8.ನೂಪುರ 10.ಮಂಕರಿ
11.ಕುರುಕು 13.ಕಳಸ
15.ಸಹೋದರಿ 16.ಪರದಾಟ

ಮೇಲಿಂದ ಕೆಳಕ್ಕೆ
1.ವನಚರ 2.ನಗದು
3.ವರಸೆ 4.ಗಡಿಯಾರ
7.ವಾದಕ 9.ಪುಕಾರು
10.ಮಂದಹಾಸ 12.ಕುಡಿನೋಟ
13.ಕಮರಿ 14.ಸಲ್ಲಾಪ

ಸುಡೊಕು 5484

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5483 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಯುಬಿಎಸ್ ಸೆಕ್ಯುರಿಟೀಸ್ ಇಂಡಿಯಾ ವರದಿ

ಖರೀದಿ ಭರಾಟೆಯಲ್ಲಿ ಸ್ಥಿತಿವಂತರ ಪಾಲು ಹೆಚ್ಚು

ಮುಂಬೈ (ಪಿಟಿಐ): ತೀರಾ ಅಗತ್ಯವಲ್ಲದ ಹಾಗೂ ಐಷಾರಾಮಿ ಉತ್ಪನ್ನಗಳನ್ನು ಹೆಚ್ಚು ಖರೀದಿಸುತ್ತಿರುವುದು ಒಟ್ಟು ಜನಸಂಖ್ಯೆಯ ಶೇಕಡ 20ರಷ್ಟು ಮಂದಿ ಮಾತ್ರ ಎಂದು ಯುಬಿಎಸ್ ಸೆಕ್ಯುರಿಟೀಸ್ ಇಂಡಿಯಾ ನಡೆಸಿದ ಅಧ್ಯಯನವು ಹೇಳಿದೆ. ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾದರು ಎಂಬ ವಾದಕ್ಕೆ ಈ ಅಧ್ಯಯನವು ಪುಷ್ಟಿ ನೀಡುವಂತಿದೆ.

ಪ್ರಾತಿನಿಧಿಕ ಚಿತ್ರ

ಮುಖ್ಯಾಂಶಗಳು
- ಸ್ಥಿತಿವಂತರ ಆದಾಯ ಸ್ಥಿರ
- ಶೇ 70ರಷ್ಟು ಮಂದಿಗೆ ಆದಾಯ ಹೆಚ್ಚುವ ನಿರೀಕ್ಷೆ
- ಆಗಸ್ಟ್‌ನಲ್ಲಿ ನಡೆದಿರುವ ಅಧ್ಯಯನ

ಐಷಾರಾಮಿ ಹಾಗೂ ತೀರಾ ಅವಶ್ಯಕವಲ್ಲದ ಉತ್ಪನ್ನಗಳನ್ನು ಖರೀದಿಸುವಲ್ಲಿ ಹೆಚ್ಚಿನ ಪಾಲು ಇರುವುದು ಸ್ಥಿತಿವಂತ ವರ್ಗಗಳದ್ದು. ಇದು ಈ ವರ್ಗಗಳ ಆದಾಯದ ಮೇಲೆ ಸಾಂಕ್ರಾಮಿಕವು ಪರಿಣಾಮ ಬೀರಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದೆ ಎಂದು ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ತಾನ್ವಿ ಗುಪ್ತ–ಜೈನ್ ಅಧ್ಯಯನ ವರದಿಯಲ್ಲಿ ಹೇಳಿದ್ದಾರೆ.

ಅಧ್ಯಯನವನ್ನು ಆಗಸ್ಟ್‌ನಲ್ಲಿ ನಡೆಸಲಾಗಿದೆ. ಹೆಚ್ಚಿನ ಆದಾಯ ಹೊಂದಿರುವ ಒಟ್ಟು 1,500 ಜನರಿಂದ ಪ್ರತಿಕ್ರಿಯೆ ಪಡೆಯಲಾಗಿದೆ. ಆಗಸ್ಟ್‌ಗೂ ಮೊದಲಿನ ಮೂರು ತಿಂಗಳುಗಳಲ್ಲಿ ಇವರಲ್ಲಿ ಶೇಕಡ 50ಕ್ಕೂ ಹೆಚ್ಚಿನ ಪ್ರಮಾಣದ ಜನ ತಾವು ಅಂದುಕೊಂಡ ರೀತಿಯಲ್ಲಿ ಚಿನ್ನ, ಚಿನ್ನಾಭರಣ ಖರೀದಿಸಿದ್ದಾರೆ. ಶೇಕಡ 50ಕ್ಕಿಂತ ಹೆಚ್ಚಿನ ಪ್ರಮಾಣದ ಜನ ಮುಂದಿನ ಎರಡು ವರ್ಷಗಳಲ್ಲಿ ಆಸ್ತಿಯ ಮೇಲೆ ಹೂಡಿಕೆ ಮಾಡುವ, ಕಾರು ಅಥವಾ ದ್ವಿಚಕ್ರ ವಾಹನ ಖರೀದಿಸುವ ಉದ್ದೇಶ ಹೊಂದಿದ್ದಾರೆ.

2023ರಲ್ಲಿ ತಮ್ಮ ಆದಾಯವು ಇನ್ನಷ್ಟು ಹೆಚ್ಚಾಗಲಿದೆ ಎಂಬ ನಿರೀಕ್ಷೆಯು ಶೇ 70ರಷ್ಟು ಮಂದಿಯಲ್ಲಿ ಇದೆ. ಅಂದರೆ, ಶ್ರೀಮಂತ ವರ್ಗಗಳಿಗೆ ಸೇರಿದವರು ಉತ್ಪನ್ನಗಳ ಖರೀದಿಯ ಚಾಲಕ ಶಕ್ತಿಯಾಗಿ ಇರಲಿದ್ದಾರೆ. ಶೇ 55ರಷ್ಟು ಮಂದಿ ಹೊಸ ಕಾರು ಅಥವಾ ದ್ವಿಚಕ್ರ ವಾಹನ ಖರೀದಿಸುವ ಉದ್ದೇಶ ಹೊಂದಿದ್ದಾರೆ. ಶೇ 50ರಷ್ಟು ಮಂದಿ ಎರಡು ವರ್ಷಗಳಲ್ಲಿ ಮನೆ ಅಥವಾ ಆಸ್ತಿ ಖರೀದಿಸುವ ಉದ್ದೇಶ ಇರಿಸಿಕೊಂಡಿದ್ದಾರೆ.

ಸಾಂಕ್ರಾಮಿಕದ ಅವಧಿಯಲ್ಲಿ ಸಂಘಟಿತ ವಲಯವು ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲನ್ನು ಪಡೆದುಕೊಂಡಿತು. ಅಸಂಘಟಿತ ವಲಯದ ಪಾಲು ಕಡಿಮೆಯಾಯಿತು. ಶ್ರೀಮಂತರು ಬ್ರ್ಯಾಂಡೆಡ್ ಉತ್ಪನ್ನಗಳ ಮೇಲೆ ವೆಚ್ಚ ಮಾಡುವುದನ್ನು ಮುಂದುವರಿಸಿದರು ಎಂದು ಅಧ್ಯಯನ ಹೇಳಿದೆ.

ಅಡುಗೆ ಎಣ್ಣೆ: ಸುಂಕ ವಿನಾಯಿತಿ ಮುಂದುವರಿಕೆ

ನವದೆಹಲಿ (ಪಿಟಿಐ): ಕೆಲವು ಅಡುಗೆ ಎಣ್ಣೆಗಳ ಆಮದು ಸುಂಕಕ್ಕೆ ನೀಡಿರುವ ವಿನಾಯಿತಿಯು ಮಾರ್ಚ್ 31ರವರೆಗೂ ಮುಂದುವರಿಯಲಿದೆ ಎಂದು ಕೇಂದ್ರ ಆಹಾರ ಸಚಿವಾಲಯ ಭಾನುವಾರ ತಿಳಿಸಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸುವ, ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯು ಹೆಚ್ಚು ಲಭ್ಯವಾಗಬೇಕು ಎಂಬ ಉದ್ದೇಶದಿಂದ ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಮಂಡಳಿಯು ಆಮದು ಸುಂಕಕ್ಕೆ ರಿಯಾಯಿತಿ ನೀಡುವ ತೀರ್ಮಾನವನ್ನು ಆಗಸ್ಟ್ 31ರಂದು ಕೈಗೊಂಡಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆ ಇಳಿಕೆ ಹಾಗೂ ಕಡಿಮೆ ಆಮದು ಸುಂಕದ ಕಾರಣದಿಂದಾಗಿ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಇವುಗಳ ಬೆಲೆಯು ಗಣನೀಯವಾಗಿ ತಗ್ಗಿದೆ ಎಂದು ಸಚಿವಾಲಯ ಹೇಳಿದೆ.

ಈಗ ಕಚ್ಚಾ ತಾಳೆ ಎಣ್ಣೆ, ಕಚ್ಚಾ ಸೋಯಾ ಎಣ್ಣೆ, ರಿಫೈನ್ಡ್ ಸೋಯಾ ಎಣ್ಣೆ, ಕಚ್ಚಾ ಸೂರ್ಯಕಾಂತಿ ಎಣ್ಣೆ ಮತ್ತು ರಿಫೈನ್ಡ್ ಸೂರ್ಯಕಾಂತಿ ಎಣ್ಣೆಗೆ ಆಮದು ಸುಂಕ ಇಲ್ಲ. ಆದರೆ ಶೇಕಡ 5ರಷ್ಟು ಕೃಷಿ ಸೆಸ್ ಹಾಗೂ ಶೇ 10ರಷ್ಟು ಸಮಾಜ ಕಲ್ಯಾಣ ಸೆಸ್ ವಿಧಿಸಲಾಗುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹432

‘ಆರ್ಥಿಕ ಬೆಳವಣಿಗೆಗೆ ತೆರಿಗೆ ಕಡಿತ ಅನಿವಾರ್ಯ’

ಬರ್ಮಿಂಗ್‌ಹ್ಯಾಮ್ (ಎಎಫ್‌ಪಿ): ‘ನಾವು ತೆರಿಗೆ ಕಡಿತದ ಕುರಿತು ಕೈಗೊಂಡಿರುವ ನಿರ್ಣಯವನ್ನು ಕೆಲವರು ಟೀಕಿಸಿದ್ದಾರೆ. ಆದರೆ ದೇಶವನ್ನು ಮತ್ತೆ ಆರ್ಥಿಕ ಬೆಳವಣಿಗೆಯತ್ತ ಕೊಂಡೊಯ್ಯಲು ಇಂತಹ ನಿರ್ಣಯಗಳು ಅನಿವಾರ್ಯ’ ಎಂದು ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ಭಾನುವಾರ ಹೇಳಿದ್ದಾರೆ.

‘ಇಂಧನ ಬಿಕ್ಕಟ್ಟು ಮತ್ತು ಹಣದುಬ್ಬರ ನಿಭಾಯಿಸಲು ನಾವು ಸ್ಪಷ್ಟ ಯೋಜನೆ ಹೊಂದಿದ್ದೇವೆ. ದೇಶದ ಆರ್ಥಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಯೋಜನೆ ರೂಪಿಸಿದ್ದೇವೆ’ ಎಂದು ಬಿಬಿಸಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಆದ್ಯತೆ: ಸಾಲ ಮರುಪಾವತಿಗೋ, ಹೂಡಿಕೆಗೋ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಪ್ರತಿ ವ್ಯಕ್ತಿಯೂ ಜೀವನದಲ್ಲಿ ಒಂದಲ್ಲ ಒಂದು ಹಂತದಲ್ಲಿ ಸಾಲದ ಮೊರೆ ಹೋಗಬೇಕಾಗುತ್ತದೆ. ಗೃಹ ಸಾಲ, ವಾಹನ ಸಾಲ, ಶಿಕ್ಷಣಕ್ಕಾಗಿ ಸಾಲ, ವೈಯಕ್ತಿಕ ಸಾಲ ಸೇರಿದಂತೆ ಯಾವುದೇ ಸಾಲ ಪಡೆದಾಗ ಇಎಂಐ, ಅಂದರೆ ಮಾಸಿಕ ಕಂತು ಪಾವತಿ ಜೀವನದ ಭಾಗವೇ ಆಗಿಬಿಡುತ್ತದೆ.

ತಿಂಗಳ ಆದಾಯದಲ್ಲಿ ಇಎಂಐಗೆ ಎಂದೇ ಶೇಕಡ 35ರಿಂದ ಶೇ 45ರಷ್ಟು ಹಣ ಮೀಸಲಿಡಬೇಕಾದ ಸಂದರ್ಭವೂ ಬರಬಹುದು.

ಪರಿಸ್ಥಿತಿ ಹೀಗಿದ್ದಾಗ, ನಮಗೆ ಹೆಚ್ಚುವರಿ ಹಣ ಸಿಕ್ಕರೆ ಅದನ್ನು ಬಳಸಿ ಸಾಲ ತೀರಿಸಲು ಮುಂದಾಗಬೇಕೋ, ಹೂಡಿಕೆ ಮಾಡುವುದಕ್ಕೆ ಆದ್ಯತೆ ನೀಡಬೇಕೋ ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಉತ್ತರ ಕಂಡುಕೊಳ್ಳಲು ಕೆಲವು ಲೆಕ್ಕಾಚಾರಗಳನ್ನು ಮಾಡಬೇಕಾಗುತ್ತದೆ. ಆ ಲೆಕ್ಕಾಚಾರಗಳ ಮೂಲಕ ಉತ್ತರ ಹುಡುಕೋಣ.

ಯಾವುದಕ್ಕೆ ಯಾವಾಗ ಆದ್ಯತೆ?: ನೀವು ಸಾಲಕ್ಕೆ ಕಟ್ಟುವ ಬಡ್ಡಿಗಿಂತ ಹೆಚ್ಚು ಮೊತ್ತದ ಲಾಭವನ್ನು ಹೂಡಿಕೆ ಮಾಡುವುದರಿಂದ ಗಳಿಸಬಹುದು ಎಂದಾದಲ್ಲಿ, ಸಾಲವನ್ನು ಮುಂಚಿತವಾಗಿ ತೀರಿಸುವುದಕ್ಕಿಂತ ಹೂಡಿಕೆ ಮಾಡುವುದು ಹೆಚ್ಚು ಉತ್ತಮ ನಿರ್ಧಾರವಾಗುತ್ತದೆ. ಒಂದೊಮ್ಮೆ ಸಾಲಕ್ಕೆ ಕಟ್ಟುತ್ತಿರುವ ಬಡ್ಡಿಗಿಂತ ಹೂಡಿಕೆ ಹಣದಿಂದ ಕಡಿಮೆ ಲಾಭ ಗಳಿಸುತ್ತಿದ್ದರೆ ಸಾಲ ತೀರಿಸಲು ಆ ಹಣ ಬಳಸಿಕೊಳ್ಳುವುದು ಸೂಕ್ತ ತೀರ್ಮಾನವಾಗುತ್ತದೆ.

ಉದಾಹರಣೆಗೆ, ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವಂತೆ ವ್ಯಕ್ತಿಯೊಬ್ಬ ₹ 20 ಲಕ್ಷ ಗೃಹ ಸಾಲವನ್ನು 15 ವರ್ಷಗಳಿಗೆ ಪಡೆದಿದ್ದು ಶೇ 8.5ರಷ್ಟು ಬಡ್ಡಿ ಪಾವತಿಸುತ್ತಿದ್ದಾನೆ ಎಂದುಕೊಳ್ಳೋಣ. ಆ ವ್ಯಕ್ತಿಗೆ ಬೋನಸ್ ರೂಪದಲ್ಲಿ ₹ 1 ಲಕ್ಷ ಹಣ ಸಿಕ್ಕಿದ್ದು, ಆಗ ಸಾಲದ ಬಾಬ್ತಿಗೆ ಅದನ್ನು ಕಟ್ಟಬೇಕೋ, ಹೂಡಿಕೆಗೆ ಆದ್ಯತೆ ಕೊಡಬೇಕೋ ಎನ್ನುವ ಪ್ರಶ್ನೆ ಎದುರಾಗಬಹುದು. ₹ 1 ಲಕ್ಷವನ್ನು ಎಫ್.ಡಿ (ನಿಶ್ಚಿತ ಠೇವಣಿಯಲ್ಲಿ) ಇರಿಸಿದರೆ ಶೇ 5.5ರಿಂದ ಶೇ 6ರಷ್ಟು ಬಡ್ಡಿ ಸಿಗುತ್ತದೆ. ಆದರೆ ಆತ ಶೇ 8.5ರಷ್ಟು ಬಡ್ಡಿಯನ್ನು ಸಾಲಕ್ಕೆ ಕಟ್ಟುತ್ತಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚುವರಿ ಹಣವನ್ನು ಎಫ್.ಡಿ.ಯಲ್ಲಿ ಹೂಡಿಕೆ ಮಾಡುವುದಕ್ಕಿಂತ ಸಾಲ ಮರುಪಾವತಿಗೆ ಬಳಸಿಕೊಳ್ಳುವುದು ಸೂಕ್ತ.

ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಲಾಭ ಶೇ 6ರ ಆಸುಪಾಸಿನಲ್ಲಿರುವುದರಿಂದ ₹ 1 ಲಕ್ಷವನ್ನು ಅವುಗಳಲ್ಲಿ ಹೂಡಿಕೆ ಮಾಡುವುದಕ್ಕಿಂತ ಸಾಲ ಮರುಪಾವತಿಗೆ ಬಳಸಿಕೊಳ್ಳುವುದು ಉತ್ತಮ ನಿರ್ಧಾರವಾಗುತ್ತದೆ. ಪಿಪಿಎಫ್‌ನಲ್ಲಿ ಸಿಗುವ ಬಡ್ಡಿ ಲಾಭ ಶೇ 7.1 ಮತ್ತು ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಸಿಗುವ ಬಡ್ಡಿ ಲಾಭ ಶೇ 7.6 ಆಗಿರುವುದರಿಂದ ಆ ಹಣವನ್ನು ಸಾಲದ ಬಾಬ್ತಿಗೆ ಹೊಂದಿಸಿಕೊಳ್ಳುವುದು ಸರಿಯಾದ ತೀರ್ಮಾನವಾಗುತ್ತದೆ.

ಆದರೆ ಅದೇ ₹ 1 ಲಕ್ಷವನ್ನು ನೀವು ದೀರ್ಘಾವಧಿ ಹೂಡಿಕೆಗಳಾದ ಈಕ್ವಿಟಿ ಮ್ಯೂಚುವಲ್ ಫಂಡ್, ಇಂಡೆಕ್ಸ್ ಫಂಡ್ ಅಥವಾ ಷೇರು ಮಾರುಕಟ್ಟೆಯಲ್ಲಿ ತೊಡಗಿಸಿದರೆ, ನೀವು ಸಾಲ ತೀರಿಸುವುದಕ್ಕಿಂತ ಹೂಡಿಕೆ ಮಾಡುವುದರಲ್ಲಿ ಹೆಚ್ಚು ಲಾಭವಿದೆ. ಏಕೆಂದರೆ, ಈಕ್ವಿಟಿ ಮ್ಯೂಚುವಲ್ ಫಂಡ್, ಇಂಡೆಕ್ಸ್ ಫಂಡ್ ಮತ್ತು ಷೇರು ಮಾರುಕಟ್ಟೆ ಹೂಡಿಕೆಗಳು ದೀರ್ಘಾವಧಿಯಲ್ಲಿ ಶೇ 12ರಿಂದ ಶೇ 16ರವರೆಗೂ ಲಾಭ ಕೊಡುವ ಶಕ್ತಿ ಹೊಂದಿವೆ. ಆದರೆ ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವಾಗ ಹೂಡಿಕೆ ರಿಸ್ಕ್ ಇರುತ್ತದೆ ಎನ್ನುವುದು ತಿಳಿದಿರಬೇಕು. ಉತ್ತಮ ಷೇರುಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ ಎನ್ನುವುದು ಗೊತ್ತಿರಬೇಕು.

ಕೆಲವು ಮಿತಿಗಳು: ಮೇಲಿನ ನಿಯಮಗಳನ್ನು ಅಳವಡಿಸಿಕೊಳ್ಳುವಾಗ ಕೆಲವು ವಿಚಾರಗಳನ್ನು ಗಮನಿಸಬೇಕಾಗುತ್ತದೆ. ನೀವು ನಿವೃತ್ತಿಗೆ ಸಮೀಪದಲ್ಲಿದ್ದರೆ ಸಾಲ ತೀರಿಸಲು ಗಮನಕೊಡಿ. ಷೇರು ಹೂಡಿಕೆ, ಮ್ಯೂಚುವಲ್ ಫಂಡ್ ಲಾಭ ಎಂದು ಕಾಯುತ್ತಾ ಕೂರಬೇಡಿ. ಎನ್‌ಬಿಎಫ್‌ಸಿ – ಅಂದರೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳು – ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದರೆ ಸಾಲ ತೀರಿಸಲು ಆದ್ಯತೆ ಕೊಡಿ. ಏಕೆಂದರೆ ಇಲ್ಲಿ ಬಡ್ಡಿ ದರ ಜಾಸ್ತಿ ಇರುತ್ತದೆ.

ಅವಧಿಪೂರ್ವ ಪಾವತಿಗೆ ಶುಲ್ಕ: ಅವಧಿಗೂ ಮುನ್ನ ಗೃಹ ಸಾಲ ಮರುಪಾವತಿ ಮಾಡಿದರೆ ಯಾವುದೇ ಶುಲ್ಕ ವಿಧಿಸಬಾರದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ. ಆದರೆ ಅವಧಿಗೆ ಮುನ್ನ ವೈಯಕ್ತಿಕ ಸಾಲ, ವಾಹನ ಸಾಲ ಮರುಪಾವತಿಗೆ ಒಂದಿಷ್ಟು ಶುಲ್ಕ ಕಟ್ಟಬೇಕಾಗುತ್ತದೆ. ಸಾಲ ಮಂಜೂರಾತಿ ದಾಖಲೆ ಪರಿಶೀಲಿಸಿದರೆ ಅವಧಿಗೂ ಮುನ್ನ ಸಾಲ ಮರುಪಾವತಿಗೆ ಶುಲ್ಕ ಇದೆಯೋ ಇಲ್ಲವೋ ಗೊತ್ತಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಸಾಲ ಮರುಪಾವತಿಯೋ, ಹೂಡಿಕೆಯೋ? ಆದ್ಯತೆ ಯಾವುದಕ್ಕೆ?

ಪಡೆದ ಸಾಲ(₹)	ಸಾಲದ ಅವಧಿ	ಸಾಲಕ್ಕೆ ಬಡ್ಡಿ	ಹೂಡಿಕೆ ಉತ್ಪನ್ನ	ನಿರೀಕ್ಷಿತ ಲಾಭಾಂಶ
20 ಲಕ್ಷ	15 ವರ್ಷ	ಶೇ 8.5	ಎಫ್.ಡಿ.	ಶೇ 5.5ರಿಂದ ಶೇ 6
20 ಲಕ್ಷ	15 ವರ್ಷ	ಶೇ 8.5	ಡೆಟ್‌ಮ್ಯೂಚುವಲ್‌ಫಂಡ್	ಶೇ 6
20 ಲಕ್ಷ	15 ವರ್ಷ	ಶೇ 8.5	ಪಿಪಿಎಫ್	ಶೇ 7.10
20 ಲಕ್ಷ	15 ವರ್ಷ	ಶೇ 8.5	ಸುಕನ್ಯಾಸಮೃದ್ಧಿಯೋಜನೆ	ಶೇ 7.60
20 ಲಕ್ಷ	15 ವರ್ಷ	ಶೇ 8.5	ಈಕ್ವಿಟಿಮ್ಯೂಚುವಲ್‌ಫಂಡ್	ಶೇ 12ರಿಂದ ಶೇ 14
20 ಲಕ್ಷ	15 ವರ್ಷ	ಶೇ 8.5	ಇಂಡೆಕ್ಸ್‌ಫಂಡ್	ಶೇ 12ರಿಂದ ಶೇ 14
20 ಲಕ್ಷ	15 ವರ್ಷ	ಶೇ 8.5	ಷೇರುಗಳಲ್ಲಿ ನೇರ ಹೂಡಿಕೆ	ಶೇ 16

ಮಾರಾಟದ ಒತ್ತಡಕ್ಕೆ ಸಿಲುಕಿದ ಷೇರುಪೇಟೆ

ಸೆಪ್ಟೆಂಬರ್ 30ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 57,426 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.16ರಷ್ಟು ಇಳಿಕೆ ದಾಖಲಿಸಿದೆ. 17,094 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.34ರಷ್ಟು ತಗ್ಗಿದೆ. ಹಣದುಬ್ಬರ ಹೆಚ್ಚಳದ ಆತಂಕ, ಆರ್ಥಿಕ ಚಟುವಟಿಕೆಗಳು ಕೋವಿಡ್ ಪೂರ್ವದ ಸ್ಥಿತಿ ತಲುಪಿಲ್ಲ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೀಡಿರುವ ವರದಿ, ರೂಪಾಯಿ ಮೌಲ್ಯ ಕುಸಿತ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ಆರ್‌ಬಿಐ ರೆಪೊ ದರ ಹೆಚ್ಚಿಸಿದ ದಿನ (ಶುಕ್ರವಾರ) ದೇಶದ ಷೇರುಪೇಟೆಗಳು ದೊಡ್ಡ ಜಿಗಿತ ಕಂಡವು. ಇದಕ್ಕೆ ಕಾರಣಗಳಿವೆ. ರೆಪೊ ದರ ಹೆಚ್ಚಾಗಿ, ಸಾಲದ ಮೇಲಿನ ಬಡ್ಡಿ ದರ ಜಾಸ್ತಿಯಾದಾಗ ಬ್ಯಾಂಕ್‌ಗಳ ವರಮಾನ ಹೆಚ್ಚಾಗುತ್ತದೆ. ಬ್ಯಾಂಕ್‌ಗಳ ಲಾಭ ಜಾಸ್ತಿಯಾಗುತ್ತದೆ. ಹೀಗಾಗಿ, ಶುಕ್ರವಾರ ಬ್ಯಾಂಕಿಂಗ್ ವಲಯದ ಸೂಚ್ಯಂಕಗಳು ಏರಿಕೆ ಕಂಡವು. ಎಫ್.ಡಿ. ದರ ಹೆಚ್ಚಾಗಬಹುದು, ಜನ ಬ್ಯಾಂಕ್‌ಗಳಲ್ಲಿ ಹೆಚ್ಚು ಹಣ ತೊಡಗಿಸಬಹುದು ಎಂಬ ನಿರೀಕ್ಷೆಯಿಂದಲೂ ಬ್ಯಾಂಕಿಂಗ್ ವಲಯದ ಷೇರುಗಳು ಜಿಗಿತ ಕಂಡವು. ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಆರ್‌ಬಿಐ, ದೇಶದ ಅರ್ಥ ವ್ಯವಸ್ಥೆಯನ್ನು ಹೊರಗಿನ ಪ್ರಭಾವಗಳಿಂದ ರಕ್ಷಿಸಲು ಎಲ್ಲ ಕ್ರಮ ಕೈಗೊಳ್ಳುವ ಭರವಸೆ ನೀಡಿದೆ. ಈ ಭರವಸೆ ಕೂಡ ಮಾರುಕಟ್ಟೆಯ ಓಟಕ್ಕೆ ಒಂದು ಕಾರಣ. ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ತುಸು ಬಲಗೊಂಡಿದ್ದು ಸೂಚ್ಯಂಕಗಳ ನೆರವಿಗೆ ಬಂತು.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 4.3ರಷ್ಟು, ಎನರ್ಜಿ ಸೂಚ್ಯಂಕ ಶೇ 3.4ರಷ್ಟು ಹಾಗೂ ನಿಫ್ಟಿ ಆಟೊ ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕಗಳು ತಲಾ ಶೇ 3ರಷ್ಟು ಕುಸಿತ ಕಂಡಿವೆ. ನಿಫ್ಟಿ ಫಾರ್ಮಾ ಶೇ 3ರಷ್ಟು ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.5ರಷ್ಟು ಜಿಗಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 15,862.48 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 15,988.29 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿ 50 ಸೂಚ್ಯಂಕದ 15ಕ್ಕೂ ಹೆಚ್ಚು ಕಂಪನಿಗಳು ಗಳಿಕೆ ದಾಖಲಿಸಿವೆ. ಪವರ್ ಗ್ರಿಡ್ ಶೇ 4.7ರಷ್ಟು, ಡಾ ರೆಡ್ಡೀಸ್ ಲ್ಯಾಬೊರೇಟರಿ ಶೇ 4.7ರಷ್ಟು, ಸಿಪ್ಲಾ ಶೇ 4.4ರಷ್ಟು, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 4.1ರಷ್ಟು, ಭಾರ್ತಿ ಏರ್‌ಟೆಲ್ ಶೇ 3.7ರಷ್ಟು, ಇನ್ಫೊಸಿಸ್ ಶೇ 3.5ರಷ್ಟು ಗಳಿಸಿಕೊಂಡಿವೆ.

ಅದಾನಿ ಪೋರ್ಟ್ಸ್, ಹಿರೋ ಮೋಟೊ ಕಾರ್ಪ್, ಮಾರುತಿ ಸುಜುಕಿ ಕ್ರಮವಾಗಿ ಶೇ 10.1, ಶೇ 7.7 ಮತ್ತು ಶೇ 5.6ರಷ್ಟು ಕುಸಿದಿವೆ.

ಮುನ್ನೋಟ: ಅಕ್ಟೋಬಅರ್ 3ರಂದು ಉತ್ಪಾದನಾ ದತ್ತಾಂಶ ಲಭಿಸಲಿದೆ. ಅಕ್ಟೋಬರ್ 6ರಂದು ಗ್ಲೋಬಲ್ ಸರ್ವಿಸಸ್ ಪಿಎಂಐ ಅಂಕಿ-ಅಂಶಗಳು ಸಿಗಲಿವೆ. ವಾಹನ ಮತ್ತು ಸಿಮೆಂಟ್ ಕಂಪನಿಗಳ ಮಾರಾಟ ದತ್ತಾಂಶ ಸಿಗಲಿದ್ದು ಅದಕ್ಕೆ ನಿರ್ದಿಷ್ಟ ಕಂಪನಿಗಳ ಷೇರುಗಳು ಪ್ರತಿಕ್ರಿಯಿಸಲಿವೆ.

ಅಕ್ಟೋಬರ್ 4ಕ್ಕೆ ಎಲೆಕ್ಟ್ರಾನಿಕ್ಸ್ ಮಾರ್ಟ್ ಐಪಿಒ ನಡೆಯಲಿದೆ. ಇದಲ್ಲದೆ ದೇಶಿಯ ಬೆಳವಣಿಗೆಗಳು ಮತ್ತು ಜಾಗತಿಕ ವಿದ್ಯಮಾನಗಳಿಗೆ ಸೂಚ್ಯಂಕಗಳು ಪ್ರತಿಕ್ರಿಯಿಸಲಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್, ಪಂಡಿತ್. ಕೃಷ್ಣಪ್ರಸಾದ್: ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಪ್ರವಾಸ

Travel

AC ಬಸ್ಸಿನಲ್ಲಿ ಊಟ, ರೂಂ ವಸತಿಯೊಂದಿಗೆ 5.10.2022 5 ದಿನಗಳು ಮಂತ್ರಾಲಯ ಶ್ರೀಶೈಲಂ, ಮಹಾನಂದಿ, ಅಹೋಬಲಂ, ನವನಾರಸಿಂಹ, ಯಾಗಂಟಿ, ಬೇಲಂಗುಹೆ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500

ದೆಹಲಿ ಮಥುರ ಅಲಹಾಬಾದ್ ಕಾಶಿ, ಗಯಾ, ಅಯೋಧ್ಯ ನೈಮಿಶಾರಣ್ಯ 29.10.2022 ರಿಂದ 13/10 ದಿನಗಳು. ಸೋಮನಾಥ್ ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಮಾತೃಗಯಾ ಅಷ್ಟ ಜ್ಯೋತಿರ್ಲಿಂಗಗಳು 20.11.2022 28.11.2022 ರಿಂದ 15/10 ದಿನಗಳು. ವೈಷ್ಣೋದೇವಿ ಅಮೃತ್ಸರ್ ಕುಲು, ಮನಾಲಿ, ಶಕ್ತಿಪೀಠಗಳು ಕುರುಕ್ಷೇತ್ರ 18.11.2022 ರಿಂದ 12 ದಿನಗಳು. ಗೌಹಾಟಿ ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ, ಪುರಿ ಕೊನಾರ್ಕ್ ಭುವನೇಶ್ವರ್ 25.11.2022 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

16.11.2022 16ದಿನಗಳು ಮಧ್ಯಪ್ರದೇಶ ಗುಜರಾತ್ ರಾಜಸ್ಥಾನ 4ಜ್ಯೋತಿರ್ಲಿಂಗ ಪಂಚದ್ವಾರಕ ಜೋದ್‌ಪುರ, ಪುಷ್ಕರ್‌ಉದಯಪುರ ಜೈಸಲ್ಮೇರ್ ಅಹಮದಾಬಾದ್. ಶ್ರೀಗಂಗಾ ಟೂರಿಸ್ಟ್. ಬೆಂಗಳೂರು: 9480253807, 8105522123

ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346 28.10.2022 12ದಿನ ಈಶಾನ್ಯ ರಾಜ್ಯಗಳು ಅಸ್ಸಾಂ, ಮೇಘಾಲಯ ಅರುಣಾಚಲಪ್ರದೇಶ 18.12.2022 7ದಿನ ಕೇರಳ ಪ್ರವಾಸ

16.11.2022 11.01.2023 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 ದುಬೈ 5 ದಿನಗಳು. 27.11.2022 ನೇಪಾಳ 8 ದಿನಗಳು. 06.10.2022 06.11.2022 09.12.2022 ಕಾಶಿ, ಗಯಾ, ಅಯೋಧ್ಯ 7 ದಿನಗಳು. 13.10.2022 12.11.2022 12.12.2022 ಗುಜರಾತ್ 8 ದಿನಗಳು. 06.11.2022 05.12.2022 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-3 9448402248 7022547922

08.10.2022, 2 ದಿನಗಳು ಈಶಫೌಂಡೇಶನ್, 112 ಅಡಿಆದಿಯೋಗಿ, ಪ್ರತ್ಯಂಗಿರದೇವಿ ಇತ್ಯಾದಿ. 15.10.2022, 2 ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಹೆಬ್ಬೆಫಾಲ್ಸ್, ಬಾಬಾಬುಡನಗಿರಿ ಇತ್ಯಾದಿ. 9481433157.

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 9901641752
9845114560 9886213331 080 - 45557163 / 164
Email: dhclassifieds@deccanherald.co.in

ಸ್ವರ್ಣ ರಥೋತ್ಸವ ತಿರುಪತಿಯ ತಿರುಮಲದಲ್ಲಿ ನವರಾತ್ರಿ ಬ್ರಹ್ಮೋತ್ಸವದ ಪ್ರಯುಕ್ತ ಭಾನುವಾರ ನಡೆದ ಸ್ವರ್ಣ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕ್ರಿವಿ ರಿಹ್ ಮೇಲೆ ರಷ್ಯಾ ಆತ್ಮಾಹುತಿ ಡ್ರೋನ್ ದಾಳಿ

ಲೈಮನ್ ನಗರ ಮರಳಿ ಉಕ್ರೇನ್‌ಗೆ

ಕೀವ್ (ಎಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಹುಟ್ಟೂರು ಕ್ರಿವಿ ರಿಹ್ ಮೇಲೆ ರಷ್ಯಾ ಭಾನುವಾರ ನಸುಕಿನಲ್ಲಿ ಆತ್ಮಾಹುತಿ ಡ್ರೋನ್ ದಾಳಿ ನಡೆಸಿದೆ.

ಇದೇ ವೇಳೆ ಕಾರ್ಯತಂತ್ರದ, ಸರಕು ಮತ್ತು ಸಾಗಣೆಯ ತಾಣ ಲೈಮನ್ ನಗರವನ್ನು ಉಕ್ರೇನ್ ಮರು ನಿಯಂತ್ರಣಕ್ಕೆ ಪಡೆದಿದ್ದು, ರಷ್ಯಾಕ್ಕೆ ಹಿನ್ನಡೆ ಆಗಿದೆ. ಆತ್ಮಾಹುತಿ ಡ್ರೋನ್ ದಾಳಿಯಲ್ಲಿ ಕ್ರಿವಿ ರಿಹ್‌ನ ಶಾಲೆಯೊಂದು ಮತ್ತು ಎರಡು ಕಟ್ಟಡಗಳು ಧ್ವಂಸಗೊಂಡಿವೆ ಎಂದು ನಿಪ್ರೊಪೆಟ್ರೊವ್‌ಸ್ಕ್ ಪ್ರದೇಶದ ಗವರ್ನರ್ ವ್ಯಾಲೆಂಟಿನ್ ರೆಜ್ನಿಶೆಂಕೊ ತಿಳಿಸಿದ್ದಾರೆ. ಸಾವು–ನೋವಿನ ಬಗ್ಗೆ ವರದಿಯಾಗಿಲ್ಲ.

ಉಕ್ರೇನ್‌ಗೆ 16 ಹೋವಿಟ್ಜರ್: ಸ್ಲೊವಾಕಿಯಾ ನಿರ್ಮಿತ 16 ಚಕ್ರಗಳ ಶಸ್ತ್ರಸಜ್ಜಿತ ಜುಜಾನ ಹೋವಿಟ್ಜರ್‌ಗಳನ್ನು ಮುಂದಿನ ವರ್ಷ ಉಕ್ರೇನ್‌ಗೆ ನೀಡುವುದಾಗಿ ಜರ್ಮನಿ ರಕ್ಷಣಾ ಸಚಿವ ಕ್ರಿಸ್ಟಿನ್ ಲ್ಯಾಂಬ್ರೆಕ್ಟ್ ಭಾನುವಾರ ಘೋಷಿಸಿದರು. ಉಕ್ರೇನ್‌ಗೆ ನೀಡಲಾಗುವ 90 ದಶಲಕ್ಷ ಡಾಲರ್ ಮೊತ್ತದ ಜುಜಾನ ಹೋವಿಟ್ಜರ್‌ಗಳಿಗೆ ಡೆನ್ಮಾರ್ಕ್, ನಾರ್ವೆ ಮತ್ತು ಜರ್ಮನಿ ಹಣಕಾಸು ನೆರವು ಒದಗಿಸಲಿವೆ.

ಯುದ್ಧ ನಿಲ್ಲಿಸಲು ಪೋಪ್ ಕರೆ: ಉಕ್ರೇನ್‌ನಲ್ಲಿ ನಡೆಸುತ್ತಿರುವ ಹಿಂಸಾಚಾರ ಮತ್ತು ಹತ್ಯೆಗಳನ್ನು ಕೊನೆಗೊಳಿಸುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಪೋಪ್ ಫ್ರಾನ್ಸಿಸ್ ಭಾನುವಾರ ಮನವಿ ಮಾಡಿದ್ದಾರೆ.

ಇಮ್ರಾನ್ ವಿರುದ್ಧ ಕಾನೂನು ಕ್ರಮಕ್ಕೆ ಅನುಮೋದನೆ

ಇಸ್ಲಾಮಾಬಾದ್: ಆಡಿಯೊ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಪಾಕಿಸ್ತಾನದ ಸಚಿವ ಸಂಪುಟ ಭಾನುವಾರ ಔಪಚಾರಿಕವಾಗಿ ಅನುಮೋದನೆ ನೀಡಿದೆ.

ಆಡಿಯೊ ಸೋರಿಕೆಗೆ ಬಗ್ಗೆ ಪರಿಶೀಲನೆ ನಡೆಸಲು ಈಚೆಗೆ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ಇಮ್ರಾನ್ ವಿರುದ್ಧ ಕಾನೂನು ಕ್ರಮಕ್ಕೆ ಶಿಫಾರಸು ಮಾಡಿತ್ತು.

‘ಈ ವಿಚಾರವು ರಾಷ್ಟ್ರದ ಭದ್ರತೆಗೆ ಸಂಬಂಧಿಸಿದ್ದಾಗಿದ್ದು, ಕಾನೂನು ಕ್ರಮ ಅಗತ್ಯ’ ಎಂದು ಸಮಿತಿ ಹೇಳಿದೆ. ಇಮ್ರಾನ್ ಖಾನ್, ಮಾಜಿ ಸಚಿವ ಅಸಾದ್ ಉಮರ್ ಮತ್ತು ಮುಖ್ಯ ಕಾರ್ಯದರ್ಶಿ ಆಜಂ ಖಾನ್ ಅವರು ಅಮೆರಿಕದ ಪತ್ರದ ಬಗ್ಗೆ ಚರ್ಚಿಸುತ್ತಿರುವ ಎರಡು ಆಡಿಯೊಗಳು ಸೋರಿಕೆಯಾಗಿದ್ದವು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಎಫ್‌ಕೆಸಿಸಿಐ ಅಧ್ಯಕ್ಷರಾಗಿ ರೆಡ್ಡಿ ಅಧಿಕಾರ ಸ್ವೀಕಾರ

ಬಿ.ವಿ. ಗೋಪಾಲ ರೆಡ್ಡಿ

ರಮೇಶ್ ಚಂದ್ರ ಲಹೋಟಿ


ಎಂ.ಜಿ. ಬಾಲಕೃಷ್ಣ

ಬೆಂಗಳೂರು: ಉದ್ಯಮಿ ಬಿ.ವಿ. ಗೋಪಾಲ ರೆಡ್ಡಿ ಅವರು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ರೆಡ್ಡಿ ಅವರ ಬೆಂಗಳೂರಿನ ಮಾರ್ಷಲ್ ಮೋಟರ್ಸ್ ಪ್ರೈ.ಲಿ. ಕಂಪನಿಯ ಅಧ್ಯಕ್ಷ.

ರೆಡ್ಡಿ ಅವರು ಎಫ್‌ಕೆಸಿಸಿಐ ಜೊತೆ ಎರಡು ದಶಕಗಳಿಗೂ ಹೆಚ್ಚಿನ ಅವಧಿಯಿಂದ ಗುರುತಿಸಿಕೊಂಡಿದ್ದಾರೆ. ಹಿಂದೆ ಎಫ್‌ಕೆಸಿಸಿಐ ಉಪಾಧ್ಯಕ್ಷರಾಗಿ, ಹಿರಿಯ ಉಪಾಧ್ಯಕ್ಷರಾಗಿ ಅವರು ಕರ್ತವ್ಯ ನಿಭಾಯಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಮೇಶ್ ಚಂದ್ರ ಲಹೋಟಿ ಅವರು ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷರಾಗಿ, ಎಂ.ಜಿ. ಬಾಲಕೃಷ್ಣ ಅವರು ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

‘1984 ಆಧುನಿಕ ಭಾರತಕ್ಕೆ ಕರಾಳ ವರ್ಷ’

ಪ್ಯಾಟ್ ಟೂಮಿ

ವಾಷಿಂಗ್ಟನ್ (ಪಿಟಿಐ): ಸಿಖ್ ವಿರೋಧಿ ದಂಗೆ ನಡೆದ 1984, ಆಧುನಿಕ ಭಾರತದ ‘ಕರಾಳ ವರ್ಷ’ವಾಗಿದೆ ಎಂದು ಅಮೆರಿಕ ಸಂಸದ ಪ್ಯಾಟ್ ಟೂಮಿ ಅವರು ಅಮೆರಿಕ ಸಂಸತ್ತಿನಲ್ಲಿ ಹೇಳಿದ್ದಾರೆ. ಸಿಖ್ ಸಮುದಾಯದ ಮೇಲೆ ನಡೆದ ದೌರ್ಜನ್ಯಗಳನ್ನು ನೆನಪಿಸಿಕೊಳ್ಳುವ ಅವಶ್ಯಕತೆ ಇದೆ ಮತ್ತು ದೌರ್ಜನ್ಯ ಎಸಗಿದವರಿಗೆ ಶಿಕ್ಷೆಯಾಗಬೇಕು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

‘ಭಾರತದಲ್ಲಿ ಎರಡು ಸಮುದಾಯಗಳ ವಿರುದ್ಧ ಹಲವಾರು ಹಿಂಸಾತ್ಮಕ ಘಟನೆಗಳು ನಡೆದಿವೆ. ಆದರೆ, ಇವುಗಳಲ್ಲಿ ಸಿಖ್ಖರನ್ನು ಗುರಿಯಾಗಿಸಿ ಹಲವು ಹಿಂಸಾತ್ಮಕ ಘಟನೆಗಳು ನಡೆದಿವೆ’ ಎಂದರು.

‘ಸಿಖ್ ಧರ್ಮಕ್ಕೆ ಸುಮಾರು 600 ವರ್ಷಗಳ ಇತಿಹಾಸ ಇದೆ. ವಿಶ್ವದಲ್ಲಿ 3 ಕೋಟಿ ಜನರು ಸಿಖ್ ಧರ್ಮವನ್ನು ಪಾಲಿಸುತ್ತಿದ್ದಾರೆ. ಅಮೆರಿಕದಲ್ಲಿ 7 ಲಕ್ಷ ಜನರಿದ್ದಾರೆ’ ಎಂದ ಅವರು, ಕೋವಿಡ್ ಸಮಯದಲ್ಲಿ ಸಿಖ್ಖರು ಅಮೆರಿಕದಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು.

ಟಿ20 ಕ್ರಿಕೆಟ್: ದಕ್ಷಿಣ ಆಫ್ರಿಕಾ ಎದುರು ಭಾರತಕ್ಕೆ 16 ರನ್ ಗೆಲುವು; ಮಿಲ್ಲರ್ ಶತಕ ವ್ಯರ್ಥ

ಸೂರ್ಯ ಪ್ರತಾಪ; ರಾಹುಲ್ ಆರ್ಭಟ

ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಗುವಾಹಟಿ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಮುಂಬೈಕರ್ ಸೂರ್ಯಕುಮಾರ್ ಯಾದವ್ ಮತ್ತೊಮ್ಮೆ ಆರ್ಭಟಿಸಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಭಾರತ 16 ರನ್‌ಗಳ ಗೆಲುವು ಪಡೆಯಿತು. ಡೇವಿಡ್ ಮಿಲ್ಲರ್ ಅವರ ಅಬ್ಬರದ ಶತಕ ವ್ಯರ್ಥವಾಯಿತು.

ಬರ್ಸಾಪರದ ಡಾ.ಭೂಪೆನ್ ಹಜಾರಿಕಾ ಕ್ರೀಡಾಂಗಣದಲ್ಲಿ ಭಾನುವಾರ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳಿಗೆ ಭಾರತದ ಬ್ಯಾಟಿಂಗ್ ಪಡೆ ಭರ್ಜರಿ ಮನರಂಜನೆ ನೀಡಿತು.

ರಾಹುಲ್ (57; 28ಎ) ಹಾಗೂ ಸೂರ್ಯ (61; 22ಎ) ಅವರ ಅರ್ಧಶತಕಗಳ ಬಲದಿಂದ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 237 ರನ್ ಗಳಿಸಿತು. ನಾಯಕ ರೋಹಿತ್ ಶರ್ಮಾ (43; 37ಎ) ಹಾಗೂ ವಿರಾಟ್ ಕೊಹ್ಲಿ (ಔಟಾಗದೆ 49, 28ಎ) ಕೂಡ ಮಹತ್ವದ ಕಾಣಿಕೆ ನೀಡಿದರು.

ಸವಾಲಿನ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಅರ್ಷದೀಪ್ ಸಿಂಗ್ (62ಕ್ಕೆ 2)) ಅವರ ದಾಳಿಗೆ ಆರಂಭಿಕ ಆಘಾತ ಅನುಭವಿಸಿತು. ಒಂದು ರನ್ ಆಗುವಷ್ಟರಲ್ಲಿ ಎರಡು ವಿಕೆಟ್‌ಗಳು ಬಿದ್ದವು. ಏಡನ್ ಮರ್ಕರಂ ರೂಪದಲ್ಲಿ ಮೂರನೇ ವಿಕೆಟ್‌ಗೆ ಬಿದ್ದಾಗ ತಂಡದ ಮೊತ್ತ 47.

ಈ ವೇಳೆ ಜತೆಯಾದ ಡೇವಿಡ್ ಮಿಲ್ಲರ್ (ಅಜೇಯ 106 ರನ್, 47 ಎ) ಮತ್ತು ಕ್ವಿಂಟನ್ ಡಿ ಕಾಕ್ (ಔಟಾಗದೆ 69, 48 ಎ.) ಅದ್ಭುತ ಮರುಹೋರಾಟ ನಡೆಸಿದರು. ಇವರು ನಾಲ್ಕನೇ ವಿಕೆಟ್‌ಗೆ 13.4 ಓವರ್‌ಗಳಲ್ಲಿ 174 ರನ್ ಸೇರಿಸಿದರು. ಆದರೆ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ವಿಫಲರಾದರು. ಪ್ರವಾಸಿ ತಂಡ 3 ವಿಕೆಟ್‌ಗೆ 221 ರನ್ ಗಳಿಸಿತು.

ಭಾರತದ ಎಲ್ಲ ಬೌಲರ್‌ಗಳನ್ನು ದಂಡಿಸಿದ ಮಿಲ್ಲರ್ 8 ಬೌಂಡರಿ ಮತ್ತು 7 ಸಿಕ್ಸರ್ ಹೊಡೆದರು. ಈ ಗೆಲುವಿನ ಮೂಲಕ ರೋಹಿತ್ ಶರ್ಮಾ ಬಳಗ ಮೂರು ಪಂದ್ಯಗಳ ಸರಣಿಯಲ್ಲಿ 2–0 ರಲ್ಲಿ ಮುನ್ನಡೆ ಗಳಿಸಿತು.

ಅಮೋಘ ಆರಂಭ: ಇದಕ್ಕೂ ಮುನ್ನ ರಾಹುಲ್ ಹಾಗೂ ರೋಹಿತ್ ಭಾರತಕ್ಕೆ ಅಮೋಘ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಅದರಲ್ಲಿ ರಾಹುಲ್ ಆಟ ಭರ್ಜರಿಯಾಗಿತ್ತು.

ಸೂರ್ಯ ಪ್ರತಾಪ: ರಾಹುಲ್ ನಿರ್ಗಮನದ ನಂತರ ಕ್ರೀಸ್‌ನಲ್ಲಿ ಜೊತೆಗೂಡಿದ ಕೊಹ್ಲಿ ಹಾಗೂ ಸೂರ್ಯ ಮೆರೆದರು. ಕಳೆದ ಪಂದ್ಯದಲ್ಲಿಯೂ ಅಬ್ಬರಿಸಿದ್ದ ಮುಂಬೈಕರ್ ಆಟಕ್ಕೇ ಹೆಚ್ಚು ಅನುವು ಮಾಡಿಕೊಟ್ಟ ಕೊಹ್ಲಿ ತಾಳ್ಮೆಯಿಂದ ಆಡಿದರು. ಆದರೆ ಸೂರ್ಯಕುಮಾರ್ ಪ್ರತಾಪಕ್ಕೆ ಬೌಲರ್‌ಗಳು ಬಸವಳಿದರು.

ಐದು ಬೌಂಡರಿ ಹಾಗೂ ಅಷ್ಟೇ ಸಂಖ್ಯೆಯ ಸಿಕ್ಸರ್ ಸಿಡಿಸಿದರು. ಇದೇ ಸಂದರ್ಭದಲ್ಲಿ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಒಂದು ಸಾವಿರ ರನ್‌ಗಳ ಗಡಿ ದಾಟಿದರು. ಕೊಹ್ಲಿ ಹಾಗೂ ಸೂರ್ಯ ಮೂರನೇ ವಿಕೆಟ್‌ಗೆ 102 ರನ್ ಸೇರಿಸಿದರು.

ಕ್ರೀಡಾಂಗಣಕ್ಕೆ ಬಂದ ಹಾವು: ಈ ಪಂದ್ಯದಲ್ಲಿ ಎರಡು ಸಲ ಆಟಕ್ಕೆ ಅಡ್ಡಿ ಉಂಟಾದ ಪ್ರಸಂಗ ನಡೆಯಿತು. ಭಾರತದ ಇನಿಂಗ್ಸ್ ವೇಳೆ ಅಂಗಳದಲ್ಲಿ ಹಾವೊಂದು ಕಾಣಿಸಿದ್ದರಿಂದ ಸುಮಾರು ಐದು ನಿಮಿಷ ಆಟ ನಿಂತಿತ್ತು. ದಕ್ಷಿಣ ಆಫ್ರಿಕಾ ಇನಿಂಗ್ಸ್ ವೇಳೆ ಫ್ಲಡ್‌ಲೈಟ್ ಕೈಕೊಟ್ಟದರಿಂದ ಕೆಲವು ನಿಮಿಷ ಆಟ ಸ್ಥಗಿತಗೊಂಡಿತು.

ಸ್ಕೋರ್ ಕಾರ್ಡ್

ಭಾರತ 3ಕ್ಕೆ 237 (20 ಓವರ್)
ರಾಹುಲ್ ಎಲ್‌ಬಿಡಬ್ಲ್ಯು ಬಿ ಮಹಾರಾಜ್ 57 (28ಎ, 4X5, 6X4), ರೋಹಿತ್ ಸಿ ಸ್ಟಬ್ಸ್ ಬಿ ಮಹಾರಾಜ್ 43 (37ಎ, 4X7, 6X1), ವಿರಾಟ್ ಔಟಾಗದೆ 49 (28ಎ, 4X7, 6X1), ಸೂರ್ಯಕುಮಾರ್ ರನೌಟ್ (ಬವುಮಾ/ನಾಕಿಯಾ) 61 (22ಎ, 4X5, 6X5), ದಿನೇಶ್ ಔಟಾಗದೆ 17 (7ಎ, 4X1, 6X2)
ಇತರೆ: 10 (ಬೈ 1, ಲೆಗ್‌ಬೈ 3, ನೋಬಾಲ್ 2, ವೈಡ್ 4)
ವಿಕೆಟ್ ಪತನ: 1-96 (ರೋಹಿತ್ ಶರ್ಮಾ, 9.5), 2-107 (ಕೆ. ಎಲ್. ರಾಹುಲ್, 11.3), 3-209 (ಸೂರ್ಯಕುಮಾರ್ ಯಾದವ್, 18.1)
ಬೌಲಿಂಗ್: ಕಗಿಸೊ ರಬಾಡ 4–0–57–0, ವೇಯ್ನ್ ಪಾರ್ನೆಲ್ 4–0–54–0, ಲುಂಗಿ ಗಿಡಿ 4–0–49–0, ಕೇಶವ್ ಮಹಾರಾಜ್ 4–0–23–2, ಆ್ಯನ್ರಿಚ್ ನಾಕಿಯಾ 3–0–41–0, ಏಡನ್ ಮರ್ಕರಂ 1–0–9–0

ದಕ್ಷಿಣ ಆಫ್ರಿಕಾ 3ಕ್ಕೆ 221 (20 ಓವರ್)
ಬವುಮಾ ಸಿ ವಿರಾಟ್ ಬಿ ಅರ್ಷದೀಪ್ 0 (7ಎ), ಡಿಕಾಕ್ ಔಟಾಗದೆ 69 (48ಎ, 4X3, 6X4), ರೊಸೊವ್ ಸಿ ದಿನೇಶ್ ಬಿ ಅರ್ಷದೀಪ್ 0 (2ಎ), ಮರ್ಕರಂ ಬಿ ಅಕ್ಷರ್ 33 (19ಎ, 4X4, 6X1), ಮಿಲ್ಲರ್ ಔಟಾಗದೆ 106 (47ಎ, 4X8, 6X7)
ಇತರೆ: 13 (ನೋಬಾಲ್ 3, ವೈಡ್ 10)
ವಿಕೆಟ್ ಪತನ: 1-1 (ತೆಂಬಾ ಬವುಮಾ, 1.2), 2-1 (ರಿಲಿ ರೊಸೊವ್, 1.4), 3-47 (ಏಡನ್ ಮರ್ಕರಂ, 6.2)
ಬೌಲಿಂಗ್: ದೀಪಕ್ ಚಾಹರ್ 4–1–24–0, ಅರ್ಷದೀಪ್ ಸಿಂಗ್ 4-0-62-2, ರವಿಚಂದ್ರನ್ ಅಶ್ವಿನ್ 4–0–37–0, ಅಕ್ಷರ್ ಪಟೇಲ್ 4-0-53-1, ಹರ್ಷಲ್ ಪಟೇಲ್ 4–0–45–0

ಫಲಿತಾಂಶ: ಭಾರತಕ್ಕೆ 16 ರನ್ ಗೆಲುವು

ಕ್ರಿಕೆಟ್: ಸೌರಭ್ ಆಲ್‌ರೌಂಡ್ ಆಟ

ಸೌರಭ್ ಕುಮಾರ್

ರಾಜ್‌ಕೋಟ್ (ಪಿಟಿಐ): ಸರ್ಫರಾಜ್ ಖಾನ್ ಶತಕ ಹಾಗೂ ಸೌರಭ್ ಕುಮಾರ್ ಆಲ್‌ರೌಂಡ್ ಆಟದ ಬಲದಿಂದ ರೆಸ್ಟ್ ಆಫ್ ಇಂಡಿಯಾ ತಂಡವು ಇರಾನಿ ಟ್ರೋಫಿ ಕ್ರಿಕೆಟ್ ಫೈನಲ್‌ನಲ್ಲಿ ಸೌರಾಷ್ಟ್ರದ ಎದುರು ಉತ್ತಮ ಮುನ್ನಡೆ ಗಳಿಸಿತು.

ಇಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಭಾನುವಾರ ರೆಸ್ಟ್ ಆಫ್ ಇಂಡಿಯಾ ತಂಡವು 110 ಓವರ್‌ಗಳಲ್ಲಿ 374 ರನ್ ಗಳಿಸಿತು. ಸರ್ಫರಾಜ್ ಖಾನ್ (138) ಶತಕ ಹಾಗೂ ಸೌರಭ್ ಕುಮಾರ್ (55, 78ಎ, 4X10) ಅರ್ಧಶತಕ ಗಳಿಸಿದರು. ನಂತರ ಬೌಲಿಂಗ್‌ನಲ್ಲಿಯೂ ಮಿಂಚಿದ ಸೌರಭ್ ಎರಡು ಓವರ್‌ನಲ್ಲಿ ಒಂದೂ ರನ್ ನೀಡದೇ ಎರಡು ವಿಕೆಟ್ ಗಳಿಸಿದರು.

ಇದರಿಂದಾಗಿ ದಿನದಾಟದ ಕೊನೆಗೆ ಸೌರಾಷ್ಟ್ರ ತಂಡವು 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 49 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಸೌರಾಷ್ಟ್ರ: 98, ರೆಸ್ಟ್ ಆಫ್ ಇಂಡಿಯಾ: 110 ಓವರ್‌ಗಳಲ್ಲಿ 374 (ಸರ್ಫರಾಜ್ ಖಾನ್ 138, ಹನುಮವಿಹಾರಿ 82, ಸೌರಭ್ ಕುಮಾರ್ 55, ಜಯಂತ್ ಯಾದವ್ 37, ಚೇತನ್ ಸಕಾರಿಯಾ 93ಕ್ಕೆ5, ಚಿರಾಗ್ ಜಾನಿ 58ಕ್ಕೆ2, ಜಯದೇವ್ ಉನದ್ಕತ್ 100ಕ್ಕೆ2) ಎರಡನೇ ಇನಿಂಗ್ಸ್; ಸೌರಾಷ್ಟ್ರ: 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 49 (ಹಾರ್ವಿಕ್ ದೇಸಾಯಿ 20, ಸ್ನೆಲ್ ಪಟೇಲ್ 16, ಸೌರಭ್ ಕುಮಾರ್ ರನ್ ನೀಡದೇ 2 ವಿಕೆಟ್)

ಶಿವಪಾಲ್‌ಗೆ ನಾಲ್ಕು ವರ್ಷ ನಿಷೇಧ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಅಥ್ಲೀಟ್ ಶಿವಪಾಲ್ ಸಿಂಗ್ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿದೆ. ಹೀಗಾಗಿ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ (ನಾಡಾ) ಆ್ಯಂಟಿ ಡೋಪಿಂಗ್ ಡಿಸಿಪ್ಲಿನರಿ ಪೆನಲ್ ನಾಲ್ಕು ವರ್ಷಗಳ ನಿಷೇಧ ಶಿಕ್ಷೆ ವಿಧಿಸಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಶಿವಪಾಲ್ ಅವರಿಗೆ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ತಾತ್ಕಾಲಿಕವಾಗಿ ನಿಷೇಧ ಹೇರಲಾಗಿತ್ತು.

ಟೋಕಿಯೊ ಒಲಿಂಪಿಕ್ಸ್ ಬಳಿಕ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲಾಗಿತ್ತು. ಅವರ ನಿಷೇಧದ ಅವಧಿ ಅ. 21ರಿಂದ ಆರಂಭವಾಗಿದ್ದು, 2025ರ ಅಕ್ಟೋಬರ್‌ವರೆಗೆ ಇರಲಿದೆ.

ಶಿವಪಾಲ್ ಅವರು 2019ರಲ್ಲಿ ದೋಹಾದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಕ್ರಿಕೆಟ್: ಏಕದಿನ ತಂಡದಲ್ಲಿ ಮುಕೇಶ್, ರಜತ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಬಂಗಾಳದ ವೇಗದ ಬೌಲರ್ ಮುಕೇಶ್ ಕುಮಾರ್ ಮತ್ತು ಮಧ್ಯಪ್ರದೇಶದ ಬ್ಯಾಟರ್ ರಜತ್ ಪಾಟೀದಾರ್ ಅವರು ದಕ್ಷಿಣ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ದೇಸಿ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿರುವುದರಿಂದ ಇವರಿಗೆ ಇದೇ ಮೊದಲ ಬಾರಿಗೆ ರಾಷ್ಟ್ರೀಯ ತಂಡದಲ್ಲಿ ಅವಕಾಶ ಲಭಿಸಿದೆ. ದಕ್ಷಿಣ ಆಫ್ರಿಕಾ ವಿರುದ್ದದ ಸರಣಿಗೆ ಶಿಖರ್ ಧವನ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

ನ್ಯೂಜಿಲೆಂಡ್ ‘ಎ’ ಎದುರಿನ ಸರಣಿಯಲ್ಲಿ ಮಿಂಚಿದ್ದ ಮುಕೇಶ್ ಅವರು, ಇರಾನಿ ಟ್ರೋಫಿ ಪಂದ್ಯದಲ್ಲೂ ತಮ್ಮ ಸಾಮರ್ಥ್ಯ ತೋರಿದ್ದರು. ಪಾಟೀದಾರ್ ಅವರು ರಣಜಿ ಟ್ರೋಫಿ ಫೈನಲ್ ಮತ್ತು ನ್ಯೂಜಿಲೆಂಡ್ ‘ಎ’ ಎದುರಿನ ಟೆಸ್ಟ್ ಪಂದ್ಯದಲ್ಲಿ ಶತಕ ಗಳಿಸಿದ್ದರು.

ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಏಕದಿನ ಪಂದ್ಯ ಅ.6 ರಂದು ಲಖನೌದಲ್ಲಿ ನಡೆಯಲಿದೆ. ಎರಡು ಮತ್ತು ಮೂರನೇ ಪಂದ್ಯ ಅ.9 ಮತ್ತು 11 ರಂದು ಕ್ರಮವಾಗಿ ರಾಂಚಿ ಹಾಗೂ ದೆಹಲಿಯಲ್ಲಿ ಆಯೋಜನೆಯಾಗಿವೆ.

ತಂಡ: ಶಿಖರ್ ಧವನ್ (ನಾಯಕ), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ರಜತ್ ಪಾಟೀದಾರ್, ರಾಹುಲ್ ತ್ರಿಪಾಠಿ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್, ಶಹಬಾಜ್ ಅಹ್ಮದ್, ಶಾರ್ದೂಲ್ ಠಾಕೂರ್, ಕುಲದೀಪ್ ಯಾದವ್, ರವಿ ಬಿಷ್ಣೋಯಿ, ಮುಕೇಶ್ ಕುಮಾರ್, ಆವೇಶ್ ಖಾನ್, ಮೊಹಮ್ಮದ್ ಸಿರಾಜ್, ದೀಪಕ್ ಚಾಹರ್

ಮೈಸೂರಿಗೆ ಸಮಗ್ರ ಪ್ರಶಸ್ತಿ

ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್: ಬೆಂಗಳೂರು ದ್ವಿತೀಯ

• ಮೋಹನ್ ಕುಮಾರ್ ಸಿ.

ಟ್ರಿಪಲ್ ಜಂಪ್‌ನಲ್ಲಿ ದಾಖಲೆ ಬರೆದ ಮೈಸೂರಿನ ಬಿ.ಮಹಂತ್ ಅವರ ಮಿಂಚಿನ ನೆಗೆತ –ಪ್ರಜಾವಾಣಿ ಚಿತ್ರ/ ಹಂಪಾ ನಾಗರಾಜ

ಮೈಸೂರು: ಆತಿಥೇಯ ಮೈಸೂರು ವಲಯ ತಂಡವು ದಸರಾ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯವಾದ ಕ್ರೀಡಾಕೂಟದಲ್ಲಿ ಮೈಸೂರು ವಲಯ ತಂಡವು 203 ಅಂಕಗಳನ್ನು ಗಳಿಸಿ ಅಗ್ರಸ್ಥಾನ ಪಡೆಯಿತು. ಮೈಸೂರಿನ ಮಹಿಳಾ ವಿಭಾಗವು 120 ಅಂಕ ಹಾಗೂ ಪುರುಷರ ವಿಭಾಗ 83 ಅಂಕ ಗಳಿಸಿ ಸಾಧನೆ ಮಾಡಿತು.

ಬೆಂಗಳೂರು ವಲಯ ತಂಡ (ಪುರುಷರು– 59 ಅಂಕ, ಮಹಿಳೆಯರು– 85 ಅಂಕ, ಒಟ್ಟು 114 ಅಂಕ) ದ್ವಿತೀಯ ಸ್ಥಾನ ಪಡೆದರೆ, ಬೆಳಗಾವಿ ವಲಯವು (ಪುರುಷರು– 53 ಅಂಕ, ಮಹಿಳೆಯರು 42 ಅಂಕ, ಒಟ್ಟು– 95 ಅಂಕ) ಮೂರನೇ ಸ್ಥಾನ ಪಡೆಯಿತು.

ಅಂತಿಮ ದಿನ ಮೈಸೂರಿಗರ ದಾಖಲೆ: ಅಥ್ಲೆಟಿಕ್ಸ್‌ನ ಅಂತಿಮ ದಿನದ ಸ್ಪರ್ಧೆಗಳಲ್ಲಿ ಮೈಸೂರು ವಲಯದ ಬಿ.ಮಹಂತ್, ಚೈತ್ರಾ ದೇವಾಡಿಗ ಹಾಗೂ ಜಿ.ಪವಿತ್ರಾ ನೂತನ ದಾಖಲೆ ನಿರ್ಮಿಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರದ ಬಿ.ಮಹಂತ್, ಟ್ರಿಪಲ್‌ಜಂಪ್‌ನಲ್ಲಿ 15.25 ಮೀ. ಜಿಗಿದು 2016ರಲ್ಲಿ ಮೈಸೂರಿನ ಕಾರ್ತಿಕ್ ಬಸಗೊಂಡಪ್ಪ ಐಹೊಳೆ ನಿರ್ಮಿಸಿದ್ದ (15.04 ಮೀ.) ದಾಖಲೆಯನ್ನು ಮುರಿದರು. ಮೈಸೂರಿನ ಸಂದೇಶ್, ಬೆಳಗಾವಿಯ ಜಾಫರ್ ಖಾನ್ ಸರ್ವಾರ್ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.

1500 ಮೀ. ಓಟದಲ್ಲಿ ದಾಖಲೆ ನಿರ್ಮಿಸಿದ್ದ ಮೂಡಬಿದರೆಯ ಆಳ್ವಾಸ್ ಕಾಲೇಜಿನ ಚೈತ್ರಾ ದೇವಾಡಿಗ ಅವರು 3,000 ಮೀ ಓಟದ ಸ್ಪರ್ಧೆಯಲ್ಲೂ ದಾಖಲೆ ಬರೆದರು. 10.05.72 ನಿಮಿಷದಲ್ಲಿ ಗುರಿಮುಟ್ಟಿ, 2012ರಲ್ಲಿ ಮೈಸೂರಿನ ತಿಪ್ಪವ್ವ ಸಣ್ಣಕ್ಕಿ ಹೆಸರಿನಲ್ಲಿದ್ದ (10.22.70 ನಿಮಿಷ) ದಾಖಲೆಯನ್ನು ಮುರಿದರು. ಬೆಂಗಳೂರಿನ ಅರ್ಚನಾ (10.10.75 ನಿ.) ಕೂಡ ದಾಖಲೆ ಬರೆದು ದ್ವಿತೀಯ ಸ್ಥಾನ ಗಳಿಸಿದರು. ಬೆಳಗಾವಿಯ ಟೀನಾ ಜಿ.ವಾಂಖೆಡೆ ಮೂರನೇ ಸ್ಥಾನ ಪಡೆದರು.

ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನ ಜಿ.ಪವಿತ್ರಾ, ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ 12.69 ಮೀಟರ್ ಜಿಗಿದು ಬೆಂಗಳೂರಿನ ಜಾಯ್‌ಲಿನ್ ಲೋಬೋ ಹೆಸರಿನಲ್ಲಿದ್ದ (12.38 ಮೀ.) ದಾಖಲೆಯನ್ನು ಮುರಿದರು. ಮೈಸೂರಿನ ಕೃತಿ ಜಿ. ಶೆಟ್ಟಿ, ಬೆಳಗಾವಿಯ ಸ್ಮಿತಾ ಕಾಕತ್ಕರ್ ಬೆಳ್ಳಿ ಹಾಗೂ ಕಂಚು ಗೆದ್ದರು.

ಸುನಿಲ್ ಪಡತಾರೆ ‘ದಸರಾ ಕಂಠೀರವ’

‘ದಸರಾ ಕಿಶೋರ್’ ಪ್ರಶಸ್ತಿ ಪಡೆದ ರೋಹನ್ ನಾರಾಯಣ್, ‘ದಸರಾ ಕೇಸರಿ’ ಪ್ರಶಸ್ತಿ ಪಡೆದ ಬಾಪುಸಾಹೇಬ ಶಿಂಧೆ, ‘ದಸರಾ ಕಂಠೀರವ’ ಪ್ರಶಸ್ತಿ ಪಡೆದ ಸುನಿಲ್ ಪಡತಾರೆ, ‘ದಸರಾ ಕಿಶೋರಿ’ಪ್ರಶಸ್ತಿ ಪಡೆದ ಪ್ರಿನ್ಸಿತಾ ಪೆದ್ರೋ, ‘ದಸರಾ ಕುಮಾರ್’ ಪ್ರಶಸ್ತಿ ಪಡೆದ ಆರ್‌.ಯಶ್ವಂತ್ ಗೆಲುವಿನ ನಗೆ ಬೀರಿದರು –ಪ್ರಜಾವಾಣಿ ಚಿತ್ರ

ಮೈಸೂರು: ಎರಡು ವರ್ಷಗಳ ನಂತರ ರಂಗೇರಿದ್ದ ದಸರಾ ಕುಸ್ತಿ ಅಖಾಡದಲ್ಲಿ ಕುಸ್ತಿಪ್ರಿಯರ ಶಿಳ್ಳೆ– ಚಪ್ಪಾಳೆಗಳ ನಡುವೆ ಆಕ್ರಮಣಕಾರಿ ಪಟ್ಟುಗಳ ಮೂಲಕ ಪ್ರಾಬಲ್ಯ ಮೆರೆದ ಮುಧೋಳದ ಪೈಲ್ವಾನ ಸುನಿಲ್ ಪಡತಾರೆ ಹಾಗೂ ಬಾಗಲಕೋಟೆಯ ಬಾಪುಸಾಹೇಬ ಶಿಂಧೆ ಕ್ರಮವಾಗಿ ದಸರಾ ಕಂಠೀರವ ಹಾಗೂ ದಸರಾ ಕೇಸರಿ ಪ್ರಶಸ್ತಿ ಗೆದ್ದರು.

ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದ ಅಖಾಡದಲ್ಲಿ ಭಾನುವಾರ ನಡೆದ ದಸರಾ ಕುಸ್ತಿ ಸ್ಪರ್ಧೆಯ ಹಣಾಹಣಿಯಲ್ಲಿ ಸುನಿಲ್ ಅವರು ಮೈಸೂರಿನ ಭೂತಪ್ಪನ ಗರಡಿಯ ಆರ್.ಯಶ್ವಂತ್ ಅವರನ್ನು ಮಣಿಸಿದರು.

ದಸರಾ ಕೇಸರಿ: 74–86 ಕೆ.ಜಿ ವಿಭಾಗದಲ್ಲಿ ಬಾಪುಸಾಹೇಬ ಶಿಂಧೆ ಗೆದ್ದರು. ತಮ್ಮದೇ ಜಿಲ್ಲೆಯ ಪೈಲ್ವಾನ ಹೊಳೆಬಸು ಕುಶಾಲ್ ಅವರನ್ನು 8–4 ಅಂಕಗಳ ಅಂತರದಲ್ಲಿ ಸೋಲಿಸಿದರು.

‘ದಸರಾ ಕುಮಾರ್’ ಪ್ರಶಸ್ತಿಗೆ (74 ಕೆ.ಜಿ) ನಡೆದ 20 ನಿಮಿಷಗಳ ಹೋರಾಟದಲ್ಲಿ ಮೈಸೂರಿನ ಭೂತಪ್ಪನ ಗರಡಿಯ ಆರ್.ಯಶ್ವಂತ್ ಅವರು ತಮ್ಮದೇ ಗರಡಿಯ ದೀಕ್ಷಿತ್ ಕುಮಾರ್ ಅವರನ್ನು 32–0ರಲ್ಲಿ ಮಣಿಸಿದರು.

ಮಹಿಳೆಯರಿಗೆ 2018ರಿಂದ ಆಯೋಜಿಸುತ್ತಿರುವ ‘ದಸರಾ ಕಿಶೋರಿ’ 57– 62 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ ಉತ್ತರಕನ್ನಡದ ಕುಸ್ತಿಪಟುಗಳಾದ ಪ್ರಿನ್ಸಿತಾ ಪೆದ್ರೋ ಹಾಗೂ ಗಾಯತ್ರಿ ರಮೇಶ್ 10 ನಿಮಿಷಗಳ ಹೋರಾಟ ನಡೆಸಿದರು. 3–0 ಅಂತರದಲ್ಲಿ ಗಾಯತ್ರಿ ಅವರನ್ನು ಸೋಲಿಸಿದ ಪ್ರಿನ್ಸಿತಾ ‘ದಸರಾ ಕಿಶೋರಿ’ ಪ್ರಶಸ್ತಿ ಗಳಿಸಿದರು.

ದಸರೆಯಲ್ಲಿ ಇದೇ ಮೊದಲ ಬಾರಿ ಆಯೋಜಿಸಿದ್ದ ‘ದಸರಾ ಕಿಶೋರ’ ಪ್ರಶಸ್ತಿಯನ್ನು ಉತ್ತರ ಕನ್ನಡದ ರೋಹನ್ ನಾರಾಯಣ್ ಪಡೆದರು.

ಸಹಮತದ ಅಭ್ಯರ್ಥಿ: ಖರ್ಗೆ ಒಲವು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರು ಸಹಮತದ ಅಭ್ಯರ್ಥಿ ಆಯ್ಕೆಯ ಬಗ್ಗೆ ಒಲವು ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬ ಅಭ್ಯರ್ಥಿ ಶಶಿ ತರೂರ್ ಇತ್ತೀಚೆಗೆ ಕರೆ ಮಾಡಿದ ಸಂದರ್ಭದಲ್ಲಿ ಖರ್ಗೆ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ. ಆದರೆ ಪ್ರಜಾಸತ್ತಾತ್ಮಕ ಸ್ಪರ್ಧೆ ನಡೆಯಬೇಕು ಎಂದು ತರೂರ್ ಹೇಳಿದ್ದಾರೆ. ತರೂರ್ ಅವರನ್ನು ತಮ್ಮ ಎಂದು ಖರ್ಗೆ ಬಣ್ಣಿಸಿದ್ದಾರೆ.

ನೆಹರೂ–ಗಾಂಧಿ ಕುಟುಂಬ ಮತ್ತು ಜಿ–23 ಗುಂಪಿನ ಹಲವು ಮುಖಂಡರ ಬೆಂಬಲ ಖರ್ಗೆ ಅವರಿಗೆ ಇದೆ. ನೆಹರೂ–ಗಾಂಧಿ ಕುಟುಂಬದ ಸದಸ್ಯರು ಮತ್ತು ಪಕ್ಷದ ಮುಖಂಡರನ್ನು ಭೇಟಿಯಾಗಿ ಸಲಹೆಗಳನ್ನು ಪಡೆದುಕೊಳ್ಳುವುದಾಗಿಯೂ ಖರ್ಗೆ ಹೇಳಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವವರ ನಡುವೆ ಬಹಿರಂಗ ಚರ್ಚೆ ನಡೆಯಬೇಕು ಎಂದು ತರೂರ್ ಹೇಳಿರುವುದರ ಕುರಿತು ಖರ್ಗೆ ಅವರು ಆಸಕ್ತಿ ವ್ಯಕ್ತಪಡಿಸಿಲ್ಲ. ಆದರೆ, ಕೆಲವರಿಗೆ ಚರ್ಚೆಯ ಕುರಿತ ಮೋಹ ಇದೆ ಎಂದು ಹೇಳಿದ್ದಾರೆ.

ಗಾಂಧಿ ಜಯಂತಿಯಂದು ಖರ್ಗೆ ಅವರು ತಮ್ಮ ಪ್ರಚಾರ ಆರಂಭಿಸಿದ್ದಾರೆ. ರಾಜಘಾಟ್‌ನಲ್ಲಿರುವ ಗಾಂಧಿ ಸ್ಮಾರಕಕ್ಕೆ ಭೇಟಿ ನೀಡಿದ್ದಾರೆ. ಯಾರನ್ನಾದರೂ ವಿರೋಧಿಸುವುದು ತಮ್ಮ ಉದ್ದೇಶವಲ್ಲ, ಪಕ್ಷವನ್ನು ಬಲಪಡಿಸುವುದಕ್ಕಾಗಿ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಹಲವು ರಾಜ್ಯಗಳ ಹಿರಿಯ ಮತ್ತು ಕಿರಿಯ ಮುಖಂಡರು ಸ್ಪರ್ಧಿಸುವಂತೆ ತಮ್ಮನ್ನು ಉತ್ತೇಜಿಸಿದ್ದಾರೆ ಎಂದು ಅವರು ಹೇಳಿದ್ದಾರೆ. ಚುನಾವಣೆಯು ಇದೇ 17ರಂದು ನಡೆಯಲಿದೆ.

ಮತದಾನದ ಹಕ್ಕು ಹೊಂದಿರುವ ಪ್ರತಿನಿಧಿಗಳ ಮೊದಲ ಸಭೆಯನ್ನು ಅವರು ಕರ್ನಾಟಕದಲ್ಲಿ ನಡೆಸಲಿದ್ದಾರೆ. ಹೆಚ್ಚಿನ ರಾಜ್ಯಗಳ ರಾಜಧಾನಿಗಳಿಗೆ ಭೇಟಿ ಕೊಟ್ಟು ಅವರು ಪ್ರತಿನಿಧಿಗಳ ಮತ ಯಾಚಿಸಲಿದ್ದಾರೆ. ‘ಭಾರತ ಜೋಡೊ’ ಯಾತ್ರೆಯ ಭಾಗವಾಗಿ ಬಳ್ಳಾರಿಯಲ್ಲಿ ಇದೇ 15ರಂದು ನಡೆಯಲಿರುವ ಭಾರಿ ಕಾರ್ಯಕ್ರಮದಲ್ಲಿಯೂ ಅವರು ಭಾಗವಹಿಸಲಿದ್ದಾರೆ.

ದೀಪೇಂದರ್ ಹೂಡಾ, ಸಯ್ಯದ್ ನಾಸಿರ್ ಹುಸೇನ್ ಮತ್ತು ಗೌರವ್ ವಲ್ಲಭ್ ಅವರೊಂದಿಗೆ ಮಾಧ್ಯಮಗೋಷ್ಠಿ ನಡೆಸಿ ಖರ್ಗೆ ಅವರು ಮಾತನಾಡಿದ್ದಾರೆ. ಹೂಡಾ, ಹುಸೇನ್ ಮತ್ತು ವಲ್ಲಭ್ ಅವರು ಖರ್ಗೆ ಅವರ ಚುನಾವಣಾ ಏಜೆಂಟ್‌ಗಳಾಗಿ ಕೆಲಸ ಮಾಡಲಿದ್ದಾರೆ. ಈ ಮೂವರೂ ಕಾಂಗ್ರೆಸ್ ವಕ್ತಾರ ಹುದ್ದೆ ತ್ಯಜಿಸಿದ್ದಾರೆ. ಖರ್ಗೆ ಅವರಿಗೆ ಮಾಧ್ಯಮಗೋಷ್ಠಿಯಲ್ಲಿ ಹಲವು ಪ್ರಶ್ನೆಗಳು ಎದುರಾದವು. ಆಯ್ಕೆಯಾದರೆ ಖರ್ಗೆ ಅವರು ನೆಹರೂ–ಗಾಂಧಿ ಕುಟುಂಬದ ಕೈಗೊಂಬೆಯಂತೆ ಕೆಲಸ ಮಾಡಲಿದ್ದಾರೆ ಎಂಬ ಭಾವನೆ ಇದೆಯಲ್ಲ ಮತ್ತು ತರೂರ್ ಅವರು ನಾಮಪತ್ರ ವಾಪಸ್ ಪಡೆಯುವಂತೆ ಮನವಿ ಮಾಡುವಿರಾ ಎಂಬ ಪ್ರಶ್ನೆಗಳೂ ಇದ್ದವು.

‘ಅದು (ನಾಮಪತ್ರ ಹಿಂದೆಗೆತ) ಅವರಿಗೆ ಬಿಟ್ಟ ವಿಚಾರ. ನಾನು ಯಾರನ್ನೂ ಬಲವಂತ ಮಾಡುವುದಿಲ್ಲ. ನಾನು ನಾಮಪತ್ರ ಸಲ್ಲಿಸಿದ ಬಳಿಕ ನನಗೆ ಅವರು ಕರೆ ಮಾಡಿದ್ದರು. ಅಧ್ಯಕ್ಷ ಹುದ್ದೆಗೆ ಸಹಮತದಲ್ಲಿ ಆಯ್ಕೆಯಾದರೆ ಉತ್ತಮ ಎಂದು ನಾನು ಹೇಳಿದ್ದೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಪರ್ಧೆ ಇದ್ದರೆ ಉತ್ತಮ ಎಂದು ಅವರು ಹೇಳಿದರು. ಯಾರಾದರೊಬ್ಬರು ಚುನಾವಣೆಗೆ ಸ್ಪರ್ಧಿಸಲು ಬಯಸಿದರೆ ಬೇಡ ಎನ್ನಲು ಸಾಧ್ಯವೇ’ ಎಂದು ಖರ್ಗೆ ಪ್ರಶ್ನಿಸಿದ್ದಾರೆ.

ತಾವು ಬದಲಾವಣೆಯ ಪರವಾದ ಅಭ್ಯರ್ಥಿ, ಖರ್ಗೆ ಅವರು ಯಥಾಸ್ಥಿತಿ ಬಯಸುವ ಅಭ್ಯರ್ಥಿ ಎಂದು ತರೂರ್ ಹೇಳಿದ್ದಕ್ಕೆ ಖರ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಅದು ತರೂರ್ ಅವರ ಅಭಿಪ್ರಾಯ. ಚುನಾವಣೆ ಬಳಿಕ ಸುಧಾರಣೆ ಕುರಿತ ನಿರ್ಧಾರಗಳನ್ನು ಜೊತೆಯಾಗಿ ತೆಗೆದುಕೊಳ್ಳಲಾಗುವುದು. ಇದು ಒಬ್ಬ ವ್ಯಕ್ತಿ ನಿರ್ಧಾರ ಕೈಗೊಳ್ಳುವ ವಿಚಾರ ಅಲ್ಲ ಎಂದರು.

ದಲಿತ ಎಂಬ ಕಾರಣಕ್ಕೆ ಖರ್ಗೆ ಅವರನ್ನು ಆಯ್ಕೆ ಮಾಡಲಾಗಿದೆ ಎಂಬ ಪ್ರಶ್ನೆಗೆ, ‘ನಿಮ್ಮ ಮತ್ತು ನನ್ನ ಮಧ್ಯೆ ಯಾವ ವ್ಯತ್ಯಾಸ ಇದೆ’ ಎಂದು ಅವರು ಪ್ರಶ್ನಿಸಿದರು.



> **ಚಿಂತಕರು, ತಿಳಿದುಕೊಂಡಿರುವವರು ಬಹಳ ಮಂದಿ ಇದ್ದಾರೆ. ಅವರಿಗೆ ಚರ್ಚೆ ಬೇಕಾಗಿರಬಹುದು. ನನಗೆ ಕೆಲಸ ಮಾಡುವುದಷ್ಟೇ ತಿಳಿದಿದೆ. ಕೆಲಸ ಮಾಡಲು ನನಗೊಂದು ಅವಕಾಶ ಕೊಡಿ**
> **ಮಲ್ಲಿಕಾರ್ಜುನ ಖರ್ಗೆ**
> ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

ಬಹಿರಂಗ ಚರ್ಚೆ ಬೇಕು: ತರೂರ್

> **ಬಹಿರಂಗ ಚರ್ಚೆಯು ಕಾಂಗ್ರೆಸ್‌ನತ್ತ ಜನರ ಗಮನ ಸೆಳೆಯುತ್ತದೆ. ನಾಯಕರ ದೃಷ್ಟಿಕೋನ ಏನು, ಅವರಲ್ಲಿ ಇರುವ ಯೋಜನೆಗಳೇನು ಎಂಬುದನ್ನು ಪ್ರತಿನಿಧಿಗಳು ಮತ್ತು ಜನರು ತಿಳಿದುಕೊಳ್ಳಲು ಇದು ಸಹಕಾರಿ**
> **ಶಶಿ ತರೂರ್**
> ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

ನವದೆಹಲಿ (ಪಿಟಿಐ): ಅಭ್ಯರ್ಥಿಗಳ ನಡುವೆ ಬಹಿರಂಗ ಚರ್ಚೆ ನಡೆಸುವುದು ಉತ್ತಮ. ಇದರಿಂದ ಜನರಲ್ಲಿ ಆಸಕ್ತಿ ಹೆಚ್ಚುತ್ತದೆ ಎಂದು ಶಶಿ ತರೂರ್ ಹೇಳಿದ್ದಾರೆ. ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವದ ಸ್ಪರ್ಧೆಯ ಸಂದರ್ಭದಲ್ಲಿ ಇಬ್ಬರು ಅಭ್ಯರ್ಥಿಗಳ ನಡುವೆ ಈ ರೀತಿಯ ಚರ್ಚೆ ನಡೆದಿತ್ತು.

ನೆಹರೂ–ಗಾಂಧಿ ಕುಟುಂಬಕ್ಕೆ ಕಾಂಗ್ರೆಸ್ ಪಕ್ಷದ ಸದಸ್ಯರ ಮನದಲ್ಲಿ ವಿಶೇಷವಾದ ಸ್ಥಾನ ಸದಾ ಇರುತ್ತದೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತರೂರ್ ಹೇಳಿದ್ದಾರೆ.

ಕಾಂಗ್ರೆಸ್ ಈಗ ಎದುರಿಸುತ್ತಿರುವ ಸವಾಲುಗಳಿಗೆ ಪರಿಣಾಮಕಾರಿ ನಾಯಕತ್ವ ಮತ್ತು ಸಂಘಟನಾತ್ಮಕ ಸುಧಾರಣೆಗಳಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಅವರು ಹೇಳಿದ್ದಾರೆ.

ಸಂಘಟನೆಗಳನ್ನು ಅತ್ಯುನ್ನತ ಮಟ್ಟದಲ್ಲಿ ಮುನ್ನಡೆಸಿದ ಅನುಭವ ತಮಗೆ ಇದೆ. ಅದು ವಿಶ್ವಸಂಸ್ಥೆ ಇರಬಹುದು ಅಥವಾ ತೀರಾ ಇತ್ತೀಚೆಗೆ ಆರಂಭವಾದ ಅಖಿಲ ಭಾರತ ವೃತ್ತಿಪರರ ಕಾಂಗ್ರೆಸ್‌ನ ಸ್ಥಾಪಕ ಅಧ್ಯಕ್ಷ ಸ್ಥಾನವೇ ಇರಬಹುದು ಎಂದು ತರೂರ್ ಹೇಳಿದ್ದಾರೆ.

‘ವಿಶ್ವಸಂಸ್ಥೆಯ ಅಧೀನ ಪ್ರಧಾನ ಕಾರ್ಯದರ್ಶಿಯಾಗಿ ಸಾರ್ವಜನಿಕ ಮಾಹಿತಿ ಇಲಾಖೆಯನ್ನು ನಿಭಾಯಿಸಿದ್ದೆ. 800ಕ್ಕೂ ಹೆಚ್ಚು ಸಿಬ್ಬಂದಿ ಇರುವ ವಿಶ್ವಸಂಸ್ಥೆಯ ಅತ್ಯಂತ ದೊಡ್ಡ ವಿಭಾಗವನ್ನು ನಿಭಾಯಿಸಿದ್ದೇನೆ. ಅದರ ಸಂರಚನೆಯಲ್ಲಿ ಸುಧಾರಣೆ ತಂದಿದ್ದೇನೆ. ಪ್ರಯತ್ನಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಿದ್ದೇನೆ, ವೆಚ್ಚವನ್ನು ತಗ್ಗಿಸಿದ್ದೇನೆ. ಈ ಎಲ್ಲದರಿಂದಾಗಿ ವಿಶ್ವಸಂಸ್ಥೆಯ ಮುಖ್ಯಸ್ಥ ಹುದ್ದೆಗೆ ಸ್ಪರ್ಧಿಸಲು ಹಲವರು ನನಗೆ ಒತ್ತಡ ಹೇರಿದ್ದರು’ ಎಂದು ಅವರು ಹೇಳಿದ್ದಾರೆ.

‘ಈಗ ನಮ್ಮ ಪರಿಸ್ಥಿತಿಯು ಶೋಚನೀಯವಾಗಿದೆ. ಇಂತಹ ಸಂದರ್ಭದಲ್ಲಿ, ಬಹುಕಾಲ ಪಕ್ಷದಲ್ಲಿ ಇದ್ದವರು ಎಂಬ ಹಿನ್ನೆಲೆ ಇಲ್ಲದಿರುವುದೇ ಅನುಕೂಲಕರ’ ಎಂದು ಅವರು ವಾದಿಸಿದ್ದಾರೆ.

‘ನಮ್ಮ ನಡುವೆ (ತರೂರ್ ಮತ್ತು ಖರ್ಗೆ) ಸೈದ್ಧಾಂತಿಕ ವ್ಯತ್ಯಾಸಗಳೇನೂ ಇಲ್ಲ. ಆದರೆ, ಒಪ್ಪಿತವಾದ ಉದ್ದೇಶಗಳನ್ನು ಸಾಧಿಸುವುದು ಹೇಗೆ ಎಂಬುದನ್ನು ವಿವರಿಸಬೇಕಿದೆ. ಪಕ್ಷಕ್ಕಾಗಿ ಹೊಂದಿರುವ ರಚನಾತ್ಮಕವಾದ ದೃಷ್ಟಿಕೋನವನ್ನು ವಿವರಿಸಲು ಅಭ್ಯರ್ಥಿಗಳಿಗೆ ವೇದಿಕೆ ಬೇಕಿದೆ’ ಎಂದು ತರೂರ್ ಅವರು ಬಹಿರಂಗ ಚರ್ಚೆಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

‘ಅಭ್ಯರ್ಥಿಗಳ ಯೋಚನೆಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದ ಪಕ್ಷಕ್ಕೂ ಅನುಕೂಲ ಇದೆ. ಉದಾಹರಣೆಗೆ, ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ಅಭ್ಯರ್ಥಿಗಳ ನಡುವಣ ಚರ್ಚೆಯು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿತ್ತು’ ಎಂದು ಅವರು ಹೇಳಿದ್ದಾರೆ. ಅಭ್ಯರ್ಥಿಗಳ ನಡುವೆ ಸಂವಾದ ನಡೆದರೆ ಪಕ್ಷದ ಚುನಾವಣೆಯ ಕುರಿತು ರಾಷ್ಟ್ರ ಮಟ್ಟದಲ್ಲಿ ಆಸಕ್ತಿ ಹೆಚ್ಚಲಿದೆ ಎಂದರು.

ಗುಜರಾತ್‌ನಲ್ಲಿ ಬಿಜೆಪಿ ಸ್ಥಾನ ಭದ್ರ: ಸಿ–ವೋಟರ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹಿಮಾಚಲ ಪ್ರದೇಶದಲ್ಲೂ ಅರಳಲಿದೆ ಕಮಲ
- ಕಾಂಗ್ರೆಸ್‌ಗೆ ಹಿನ್ನಡೆ ಸಾಧ್ಯತೆ

ನವದೆಹಲಿ: ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭೆಗಳಿಗೆ ವರ್ಷಾಂತ್ಯದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಸುಲಭವಾಗಿ ಅಧಿಕಾರ ಹಿಡಿಯಲಿದೆ ಎಂದು ಸಿ-ವೋಟರ್ ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಈ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮತ ಪ್ರಮಾಣ ಇನ್ನಷ್ಟು ಕುಸಿಯಲಿದ್ದು, ಎಎಪಿಯಿಂದ ದೊಡ್ಡ ಬದಲಾವಣೆ ಸಾಧ್ಯವಾಗುವುದಿಲ್ಲ ಎಂದು ಸಮೀಕ್ಷೆ ತಿಳಿಸಿದೆ.

182 ಸದಸ್ಯ ಬಲದ ಗುಜರಾತ್ ವಿಧಾನಸಭೆಯಲ್ಲಿ ಬಿಜೆಪಿ ತನ್ನ ಸಂಖ್ಯಾ ಬಲವನ್ನು ಈಗಿರುವ 99ರಿಂದ 135–143ಕ್ಕೆ ಹೆಚ್ಚಿಸಿಕೊಳ್ಳುವ ಸಾಧ್ಯತೆಯಿದೆ. ಈಗ 77 ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ಬಲ 36–44ಕ್ಕೆ ಕುಸಿಯಲಿದೆ. ಎಎಪಿಯು ಗುಜರಾತ್ ಚುನಾವಣೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಆದರೂ, ಎರಡಕ್ಕಿಂತ ಹೆಚ್ಚು ಸ್ಥಾನ ಸಿಗುವುದಿಲ್ಲ ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿದೆ.

ಆದಾಗ್ಯೂ, ಎಎಪಿ ಶೇ 17.4ರಷ್ಟು ಮತಗಳನ್ನು ಪಡೆಯುವ ಸಾಧ್ಯತೆಯಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ಗಳೆರಡರ ಸ್ವಲ್ಪ ಮತಗಳು ಎಎಪಿಗೆ ಸಿಗಲಿವೆ. ಶೇ 41.4ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್ ಈ ಬಾರಿ 32.3ರಷ್ಟು ಮತಗಳಿಗೆ ತೃಪ್ತಿಪಟ್ಟುಕೊಳ್ಳಲಿದೆ. ಕಳೆದ ಚುನಾವಣೆಯಲ್ಲಿ ಶೇ 49.1ರಷ್ಟು ಮತ ಪ್ರಮಾಣ ಗಳಿಸಿದ್ದ ಬಿಜೆಪಿಗೆ, ಬರುವ ಚುನಾವಣೆಯಲ್ಲಿ ಶೇ 46.4ರಷ್ಟು ಮತಗಳು ಸಿಗುವ ಸಾಧ್ಯತೆಗಳಿವೆ.

68 ಸದಸ್ಯಬಲದ ಹಿಮಾಚಲ ಪ್ರದೇಶ ವಿಧಾನಸಭೆಯಲ್ಲಿ ಬಿಜೆಪಿಯು 37ರಿಂದ 45 ಸೀಟುಗಳನ್ನು ಪಡೆಯುವ ಸಾಧ್ಯತೆಯಿದೆ. ಕಾಂಗ್ರೆಸ್‌ಗೆ 21–29 ಸ್ಥಾನ ಸಿಗಬಹುದು. ಎಎಪಿ ಒಂದೂ ಸ್ಥಾನ ಗಳಿಸದಿದ್ದರೂ, ಶೇ 9.5ರಷ್ಟು ಮತಗಳನ್ನು ಪಡೆಯುವ ಸಾಧ್ಯತೆಯಿದೆ ಎಂದು ಸಮೀಕ್ಷೆ ತಿಳಿಸಿದೆ.

ರೈಲ್ವೆ ಉದ್ಯೋಗಿಗಳಿಗೆ ಬೋನಸ್

ನವದೆಹಲಿ (ಪಿಟಿಐ): 2021-22ರ ಆರ್ಥಿಕ ವರ್ಷದಲ್ಲಿ ಗೆಜೆಟೆಡ್ ಅಲ್ಲದ ಅರ್ಹ ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ವೇತನಕ್ಕೆ ಸರಿಸಮನಾದ ಉತ್ಪಾದಕತೆ ಸಂಬಂಧಿತ ಬೋನಸ್ (ಪ್ರೊಡಕ್ಟಿವಿಟಿ ಲಿಂಕ್ಡ್ ಬೋನಸ್–ಪಿಎಲ್‌ಬಿ) ನೀಡಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಈ ನಿರ್ಧಾರದಿಂದ ಸುಮಾರು 11.27 ಲಕ್ಷ ನಾನ್ ಗೆಜೆಟೆಡ್ ರೈಲ್ವೆ ಉದ್ಯೋಗಿಗಳಿಗೆ ಪ್ರಯೋಜನ ಸಿಗುವ ಸಾಧ್ಯತೆಯಿದೆ. ಆದರೆ, ಈ ಸೌಲಭ್ಯ ಆರ್‌ಪಿಎಫ್, ಆರ್‌ಪಿಎಸ್‌ಎಫ್ ಸಿಬ್ಬಂದಿಗೆ ಅನ್ವಯಿಸದು ಎಂದು ರೈಲ್ವೆಯ ಹೇಳಿಕೆ ತಿಳಿಸಿದೆ.

ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಪಿಎಲ್‌ಬಿ ಪಾವತಿಸಲು ₹1,832.09 ಕೋಟಿ ಬೇಕಾಗಲಿದ್ದು, ಇದಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ಸಿಕ್ಕಿದೆ.

ನಿಗದಿಪಡಿಸಿದ ವೇತನ ಲೆಕ್ಕಾಚಾರದ ಮಿತಿಯಂತೆ ಕನಿಷ್ಠ ₹7,000ದಿಂದ ಗರಿಷ್ಠ ₹17,951 ಪಿಎಲ್‌ಬಿ ಪಾವತಿಸಬೇಕಾಗುತ್ತದೆ. ದಸರೆ/ ಆಯುಧ ಪೂಜೆಗೂ ಮುನ್ನವೇ ಪಿಎಲ್‌ಬಿಯು ಉದ್ಯೋಗಿಗೆ ಪಾವತಿಯಾಗಲಿದೆ.

ರಾಜಸ್ಥಾನ ಬಿಕ್ಕಟ್ಟು: ಮುಖಂಡರಿಂದ ವರಿಷ್ಠರಿಗೆ ಸಲಹೆ

ಸದ್ಯಕ್ಕೆ ಯಾವುದೇ ಕ್ರಮ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನದಲ್ಲಿ ಇತ್ತೀಚೆಗೆ ಉಂಟಾಗಿದ್ದ ಬಿಕ್ಕಟ್ಟಿನ ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳುವ ಆಲೋಚನೆಯಲ್ಲಿ ಕಾಂಗ್ರೆಸ್ ಸದ್ಯಕ್ಕೆ ಇಲ್ಲ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಯತ್ನಿಸುತ್ತಿರುವ ಈ ವೇಳೆಯಲ್ಲಿ, ನಾಯಕತ್ವ ವಿಚಾರದಲ್ಲಿ ಸದ್ಯಕ್ಕೆ ಯಾವುದೇ ಹೆಜ್ಜೆ ಇಡದಿರುವುದೇ ಒಳಿತು ಎಂಬುದಾಗಿ ಪಕ್ಷದ ಮುಖಂಡರು ವರಿಷ್ಠರಿಗೆ ಸಲಹೆ ನೀಡಿದ್ದಾರೆ.

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಎ.ಕೆ. ಆ್ಯಂಟನಿ ಸೇರಿದಂತೆ ಹಲವು ಮುಖಂಡರ ಜೊತೆ ಈ ಸಂಬಂಧ ಸಮಾಲೋಚನೆ ನಡೆಸಿದ್ದಾರೆ. ಈ ಸಮಯದಲ್ಲಿ ಗೆಹಲೋತ್ ವಿರುದ್ಧ ಕ್ರಮಕ್ಕೆ ಮುಂದಾದರೆ ಮತ್ತೆ ಬಿಕ್ಕಟ್ಟು ಸೃಷ್ಟಿಯಾಗುವ ಸಾಧ್ಯತೆಯಿದ್ದು, ಗೊಂದಲ ಸ್ವಲ್ಪ ತಣ್ಣಗಾಗುವವರೆಗೆ ಯಾವುದೇ ಕ್ರಮಕ್ಕೆ ಮುಂದಾಗದಿರುವುದು ಒಳ್ಳೆಯದು ಎಂಬ ಸಲಹೆ ಬಂದಿದೆ ಎನ್ನಲಾಗಿದೆ.

ಗೆಹಲೋತ್ ಗುಂಪಿನ ಶಾಸಕರು ಸೆ.28ರಂದು ಪಕ್ಷದ ಶಾಸಕಾಂಗ ಸಭೆಗೆ ಹಾಜರಾಗದೇ ಪ್ರತ್ಯೇಕ ಸಭೆ ನಡೆಸಿದ ಘಟನೆಗಳಿಗೆ ಮುಖ್ಯಮಂತ್ರಿ ವಿಷಾದ ವ್ಯಕ್ತಪಡಿಸಿದ್ದರು. ಸೋನಿಯಾ ಅವರು ಈ ಬಗ್ಗೆ ಒಂದೆರಡು ದಿನಗಳಲ್ಲಿ ಕ್ರಮ ತೆಗೆದುಕೊಳ್ಳಲಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಹೇಳಿದ್ದರು. ರಾಜ್ಯಕ್ಕೆ ಮತ್ತೆ ವೀಕ್ಷಕರನ್ನು ಕಳುಹಿಸುವ ಬಗ್ಗೆಯೂ ಚರ್ಚೆ ನಡೆದಿತ್ತು. ಆದರೆ ಈ ವಿಚಾರ ಅನಿಶ್ಚಿತವಾಗಿದೆ.

ಮುಖ್ಯಮಂತ್ರಿ ಹುದ್ದೆಯನ್ನು ಆದಷ್ಟು ಬೇಗ ತಮಗೆ ನೀಡಬಹುದು ಎಂಬ ನಿರೀಕ್ಷೆಯಲ್ಲಿ ಸಚಿನ್ ಪೈಲಟ್ ಅವರು ಇದ್ದರೆ, ಪಕ್ಷದ ಮೇಲೆ ಇನ್ನೂ ತಮಗೆ ಬಿಗಿ ಹಿಡಿತವಿದೆ ಎಂಬುದನ್ನು ಗೆಹಲೋತ್ ಸಾಬೀತುಪಡಿಸುತ್ತಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ತ್ಯಜಿಸದೆ ಕಾಂಗ್ರೆಸ್ ಅಧ್ಯಕ್ಷ ಹುದ್ದೆಯನ್ನು ವಹಿಸಿಕೊಳ್ಳುವ ಉದ್ದೇಶದಲ್ಲಿದ್ದ ಗೆಹಲೋತ್ ಅವರನ್ನು 108ರ ಪೈಕಿ 92 ಶಾಸಕರು ಬೆಂಬಲಿಸಿದ್ದರು. ಗೆಹಲೋತ್ ಸ್ಥಾನಕ್ಕೆ ಪೈಲಟ್ ಅವರನ್ನು ನೇಮಿಸಲು ವರಿಷ್ಠರು ಸಿದ್ಧರಾಗಿದ್ದಾರೆ ಎಂದು ಅಂದಾಜಿಸಿದ್ದ ಗೆಹಲೋತ್ ನಿಷ್ಠರು ಸಾಮೂಹಿಕ ರಾಜೀನಾಮೆಗೆ ಮುಂದಾಗಿದ್ದರು. ಬಿಕ್ಕಟ್ಟು ಅರಿತ ಗೆಹಲೋತ್, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂದು ಪ್ರಕಟಿಸಿದ್ದರು.

‘ಹೊಸ ಮುಖ್ಯಮಂತ್ರಿ ಕಾರಣಕ್ಕೆ ಬಿಕ್ಕಟ್ಟು ಸೃಷ್ಟಿ’

ರಾಜ್ಯದಲ್ಲಿ ಹೊಸ ಮುಖ್ಯಮಂತ್ರಿಯ ಆಯ್ಕೆ ವಿಚಾರದಲ್ಲಿ ಶಾಸಕರು ಅಸಮಾಧಾನಗೊಂಡು ಪ್ರತಿಭಟನೆ ನಡೆಸಿದ್ದು ಏಕೆ ಎಂಬ ಆಯಾಮದಲ್ಲಿ ಯೋಚಿಸಬೇಕಿದೆ ಎಂದು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಭಾನುವಾರ ಹೇಳಿದ್ದಾರೆ. ಸಚಿನ್ ಪೈಲಟ್ ಅವರ ಹೆಸರನ್ನು ಉಲ್ಲೇಖಿಸದೇ ಮಾತನಾಡಿದ ಅವರು, ‘ಹೊಸ ಮುಖ್ಯಮಂತ್ರಿ ಆಯ್ಕೆಯಾಗುತ್ತಾರೆ ಎಂಬ ಸಮಯದಲ್ಲಿ ಶೇ 80ರಿಂದ 90ರಷ್ಟು ಶಾಸಕರು ಒಗ್ಗಟ್ಟಾಗಿದ್ದರು. ಹೀಗಾಗಿ ರಾಜಸ್ಥಾನದಲ್ಲಿ ಬದಲಾವಣೆ ಆಗಲಿಲ್ಲ’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ಸಮಯದಲ್ಲಿ, ಬಹುತೇಕ ಶಾಸಕರು ಹೊಸ ಮುಖ್ಯಮಂತ್ರಿಯ ಕಡೆಗೆ ವಾಲುತ್ತಾರೆ. ಇದು ತಪ್ಪು ಎಂದು ನಾನು ಭಾವಿಸುವುದಿಲ್ಲ. ಆದರೆ ರಾಜಸ್ಥಾನದಲ್ಲಿ ಈ ವಿಚಾರ ಬೇರೆಯೇ ಆಗಿತ್ತು. ಹೊಸ ಮುಖ್ಯಮಂತ್ರಿಯ ಹೆಸರಿನ ಕಾರಣಕ್ಕೇ ಶಾಸಕರು ಪ್ರತಿಭಟನೆ ನಡೆಸಿದ್ದರು’ ಎಂದ ಅವರು ಕೊನೆಯ ಉಸಿರಿರುವವರೆಗೂ ರಾಜಸ್ಥಾನದ ಜನರಿಂದ ದೂರ ಉಳಿಯುವುದಿಲ್ಲ ಎಂದು ಹೇಳಿದ್ದಾರೆ.

ಮುಲಾಯಂ ಸಿಂಗ್ ಆರೋಗ್ಯದಲ್ಲಿ ಏರುಪೇರು: ಐಸಿಯುಗೆ ದಾಖಲು

ಗುರುಗ್ರಾಮ (ಪಿಟಿಐ): ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಯಾದವ್ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು ಅವರನ್ನು ಭಾನುವಾರ ಇಲ್ಲಿನ ಮೇದಾಂತ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

82 ವರ್ಷದ ಮುಲಾಯಂ ಅವರಿಗೆ ಗ್ರಂಥಿಶಾಸ್ತ್ರಜ್ಞರಾದ ಡಾ.ನಿತಿನ್ ಸೂದ್ ಮತ್ತು ಡಾ. ಸುಶೀಲ್ ಕಟಾರಿಯಾ ಅವರು ಚಿಕಿತ್ಸೆ ನೀಡುತ್ತಿದ್ದಾರೆ ಎಂದೂ ತಿಳಿಸಿವೆ.

ಮುಲಾಯಂ ಅವರ ಸಹೋದರ ಶಿವಪಾಲ್ ಸಿಂಗ್ ಯಾದವ್ ಹಾಗೂ ಕುಟುಂಬ ಸದಸ್ಯರು ಆಸ್ಪತ್ರೆಗೆ ತಲುಪಿದ್ದಾರೆ. ಮುಲಾಯಂ ಅವರ ಪುತ್ರ ಹಾಗೂ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಲಖನೌನಿಂದ ದೆಹಲಿಗೆ ತೆರಳಿದ್ದಾರೆ’ ಎಂದೂ ಹೇಳಿವೆ. ಆಗಸ್ಟ್ 22ರಿಂದಲೂ ಮುಲಾಯಂ ಅವರು ಈ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯುತ್ತಿದ್ದರು.

ಎಸ್‌ಟಿ ಮೀಸಲಾತಿ ಹೆಚ್ಚಿಸಿದ ಕೆಸಿಆರ್

ಹೈದರಾಬಾದ್: ಸರ್ಕಾರಿ ಶಿಕ್ಷಣ ಸಂಸ್ಥೆ ಮತ್ತು ಉದ್ಯೋಗಗಳಲ್ಲಿ ಪರಿಶಿಷ್ಟ ಪಂಗಡದವರಿಗೆ ನೀಡುತ್ತಿದ್ದ ಮೀಸಲಾತಿಯನ್ನು ಶೇ6 ರಿಂದ ಶೇ 10ಕ್ಕೆ ಏರಿಸಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಆದೇಶ ಹೊರಡಿಸಿದ್ದಾರೆ.

ಮೀಸಲಾತಿಯನ್ನು ಶೇ 10ಕ್ಕೆ ಹೆಚ್ಚಿಸುವ ಮಸೂದೆಗೆ ವಿಧಾನಸಭೆಯಲ್ಲಿ 2017ರಲ್ಲಿ ಅನುಮೋದನೆ ನೀಡಲಾಗಿತ್ತು. ರಾಷ್ಟ್ರಪತಿ ಒಪ್ಪಿಗೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ ಒಪ್ಪಿಗೆ ಸಿಕ್ಕಿಲ್ಲ. ಈ ಕಾರಣಕ್ಕೆ ಮುಖ್ಯಮಂತ್ರಿ ಈ ಆದೇಶ ಹೊರಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಂಡಿಗೋ ವಿಮಾನ ಸ್ಫೋಟಿಸುವ ಬೆದರಿಕೆ

ಮುಂಬೈ (ಪಿಟಿಐ): ಇಂಡಿಗೋ ವಿಮಾನ ಸಂಸ್ಥೆಯ ವಿಮಾನ ಸ್ಫೋಟಿಸುವುದಾಗಿ ಅಪರಿಚಿತ ವ್ಯಕ್ತಿ ಮುಂಬೈ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್‌ಗೆ ಬೆದರಿಕೆ ಹಾಕಿ ಇಮೇಲ್ ಕಳುಹಿಸಿದ ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದೆ ಎಂದು ಮುಂಬೈ ಪೊಲೀಸ್ ಅಧಿಕಾರಿ ಭಾನುವಾರ ತಿಳಿಸಿದ್ದಾರೆ.

ಶನಿವಾರ ರಾತ್ರಿ ಇ ಮೇಲ್ ಬಂದ ಬಳಿಕ, ವಿಮಾನವನ್ನು ಕೂಲಂಕಷವಾಗಿ ತಪಾಸಣೆ ನಡೆಸಿದ ನಂತರ ಅದು ಹುಸಿ ಬೆದರಿಕೆ ಎಂದು ಗೊತ್ತಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ ಎಂದು ಸಹರಾ ಪೊಲೀಸ್ ಠಾಣೆ ಅಧಿಕಾರಿ ಹೇಳಿದ್ದಾರೆ.

‘ಬೆದರಿಕೆಯಿಂದಾಗಿ ಅ.1ರಂದು ಮುಂಬೈನಿಂದ ಅಹಮದಾಬಾದ್‌ಗೆ ಹೊರಟಿದ್ದ ವಿಮಾನ ವಿಳಂಬವಾಯಿತು. ತಪಾಸಣೆ ಪೂರ್ಣಗೊಂಡ ನಂತರ ವಿಮಾನ ಪ್ರಯಾಣ ಬೆಳೆಸಿತು’ ಎಂದು ಇಂಡಿಗೋ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಕ್ರೀಡಾಂಗಣಕ್ಕೆ ನುಗ್ಗಿದ ಪ್ರೇಕ್ಷಕರ ಮೇಲೆ ಪೊಲೀಸರಿಂದ ಅಶ್ರುವಾಯು ಪ್ರಯೋಗ (ಎಡ) ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲು ಕರೆದೊಯ್ಯಲಾಯಿತು– ಎಎಫ್‌ಪಿ ಚಿತ್ರಗಳು

ಇಂಡೊನೇಷ್ಯಾದ ಸ್ಥಳೀಯ ಫುಟ್‌ಬಾಲ್ ಪಂದ್ಯದ ವೇಳೆ ನಡೆದ ಹಿಂಸಾಚಾರ

ದುರಂತಕ್ಕೆ ಸಾಕ್ಷಿಯಾದ ಮಾಲಾಂಗ್

ಮಾಲಾಂಗ್, ಇಂಡೊನೇಷ್ಯಾ (ರಾಯಿಟರ್ಸ್/ಎಎಫ್‌ಪಿ): ಇಲ್ಲಿಯ ಬಿಆರ್‌ಐ ಲೀಗ್‌ನ ಫುಟ್‌ಬಾಲ್ ಪಂದ್ಯವೊಂದು ವಿಶ್ವದ ಪ್ರಮುಖ ಕ್ರೀಡಾ ದುರಂತವೊಂದಕ್ಕೆ ಸಾಕ್ಷಿಯಾಯಿತು. ಕಂಜುರುಹಾನ್ ಕ್ರೀಡಾಂಗಣದಲ್ಲಿ ಸ್ಥಳೀಯ ಅರೆಮಾ ಎಫ್‌ಸಿ ಮತ್ತು ಪೆರ್ಸೆಬಾಯಾ ಸುರಬಯಾ ನಡುವಣ ಪಂದ್ಯದ ಬಳಿಕ ನಡೆದ ಹಿಂಸಾಚಾರ ಮತ್ತು ಕಾಲ್ತುಳಿತದಿಂದಾಗಿ 125 ಜನ ಪ್ರಾಣ ಕಳೆದುಕೊಂಡು 320ಕ್ಕೂ ಅಧಿಕ ಮಂದಿ ಗಾಯಗೊಂಡರು.

'ಕಂಜುರುಹಾನ್ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸ್ಥಳೀಯ ಅರೆಮಾ ಎಫ್‌ಸಿ ತಂಡ 2–3 ಗೋಲುಗಳ ಅಂತರದಿಂದ ಪರಾಭವಗೊಂಡಿತ್ತು. ಇದರಿಂದ ರೊಚ್ಚಿಗೆದ್ದ ತಂಡದ ಅಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಪ್ರಯೋಗ ಮಾಡಿದಾಗ ಉಂಟಾದ ಕಾಲ್ತುಳಿತ ಮತ್ತು ಉಸಿರುಗಟ್ಟುವಿಕೆಯಿಂದಾಗಿ ದುರಂತ ಸಂಭವಿಸಿದೆ' ಎಂದು ಪೂರ್ವ ಜಾವಾ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥ ನಿಕೊ ಅಫಿಂಟಾ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಪರಿಸ್ಥಿತಿ ಅರಾಜಕತೆಗೆ ತಿರುಗಿತ್ತು. ಜನರು ಅಧಿಕಾರಿಗಳ ಮೇಲೆ ದಾಳಿ ನಡೆಸತೊಡಗಿದರು ಮತ್ತು ಕಾರುಗಳನ್ನು ಧ್ವಂಸ ಮಾಡಿದರು. ಅಭಿಮಾನಿಗಳು ನಿರ್ಗಮನ ಗೇಟ್ ಕಡೆ ಓಡತೊಡಗಿದಾಗ ಈ ದುರಂತ ನಡೆಯಿತು' ಎಂದು ನಿಕೊ ಹೇಳಿದ್ದಾರೆ.

'ಘಟನೆಯಿಂದಾಗಿ ಸತ್ತವರ ಸಂಖ್ಯೆ 174 ಎಂದು ಈ ಮೊದಲು ವರದಿಯಾಗಿತ್ತು. ಆದರೆ ಕೆಲವರನ್ನು ಬೇರೊಂದು ಆಸ್ಪತ್ರೆಗೆ ಶಿಫಾರಸು ಮಾಡಿದಾಗ ಅಲ್ಲಿಯೂ ಅವರ ಹೆಸರು ದಾಖಲಾಗಿದ್ದರಿಂದ ಸಾವಿನ ಸಂಖ್ಯೆಯಲ್ಲಿ ವ್ಯತ್ಯಾಸವಾಗಿತ್ತು' ಎಂದು ಪೂರ್ವ ಜಾವಾದ ಡೆಪ್ಯುಟಿ ಗವರ್ನರ್ ಎಮಿಲ್ ದರ್ದಕ್ ಹೇಳಿದ್ದಾರೆ. ಪೊಲೀಸರು 10 ಆಸ್ಪತ್ರೆಗಳಿಂದ ದಾಖಲೆಗಳನ್ನು ಸಂಗ್ರಹಿಸಿ ನೀಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಘಟನೆಯಲ್ಲಿ 320ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಈ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್(ಫಿಫಾ), ಸ್ಥಳೀಯ ಫುಟ್‌ಬಾಲ್ ಸಂಸ್ಥೆಗೆ ತಿಳಿಸಿದೆ.

ಪಂದ್ಯದ ಬಳಿಕ ಅಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗಿದ ವಿಡಿಯೊ ತುಣುಕೊಂದನ್ನು ಸ್ಥಳೀಯ ಸುದ್ದಿ ವಾಹಿನಿಗಳು ಪ್ರಸಾರ ಮಾಡಿವೆ. ಹಿಂಸಾಚಾರ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದ್ದು ಈ ವಿಡಿಯೊಗಳಲ್ಲಿ ದಾಖಲಾಗಿದೆ. ಪ್ರಜ್ಞೆ ಕಳೆದುಕೊಂಡವರನ್ನು ಇನ್ನುಳಿದ ಅಭಿಮಾನಿಗಳು ಹೊತ್ತುಕೊಂಡು ಹೋಗುತ್ತಿರುವುದು ಇದರಲ್ಲಿದೆ.

'ಕೆಲವರ ಮಿದುಳಿಗೆ ಹಾನಿಯಾಗಿದೆ. ಸಾವಿಗೀಡಾದವರಲ್ಲಿ ಐದು ವರ್ಷದ ಮಗುವೂ ಇದೆ' ಎಂದು ಗಾಯಗೊಂಡವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರೊಬ್ಬರು ಮೆಟ್ರೊ ಟಿವಿಗೆ ತಿಳಿಸಿದ್ದಾರೆ.

ಘಟನೆಯ ಕುರಿತು ತನಿಖೆ ಪೂರ್ಣವಾಗುವವರೆಗೂ ದೇಶದ ಪ್ರಮುಖ ಲೀಗ್, ಬಿಆರ್‌ಐನ ಎಲ್ಲ ಪಂದ್ಯಗಳನ್ನು ಸ್ಥಗಿತಗೊಳಿಸಲು ಇಂಡೊನೇಷ್ಯಾ ಫುಟ್‌ಬಾಲ್ ಅಧ್ಯಕ್ಷ ಜೊಕೊವಿ ಹೇಳಿದ್ದಾರೆ.

ಅಶ್ರುವಾಯು ಪ್ರಯೋಗ ನಿಯಮ: ಪಂದ್ಯಗಳ ಸಂದರ್ಭದಲ್ಲಿ ಜನರನ್ನು ನಿಯಂತ್ರಿಸಲು ಅಧಿಕಾರಿಗಳು ಯಾವುದೇ ಬಂದೂಕು ಅಥವಾ ಅಶ್ರುವಾಯು ಪ್ರಯೋಗಿಸಬಾರದು' ಎಂದು ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್‌ನ (ಫಿಫಾ) ನಿಯಮಗಳು ಹೇಳುತ್ತವೆ. ಈ ಕುರಿತ ಪ್ರಶ್ನೆಗೆ ತಕ್ಷಣಕ್ಕೆ ಪ್ರತಿಕ್ರಿಯಿಸಲು ಜಾವಾ ಪೊಲೀಸರು ನಿರಾಕರಿಸಿದ್ದಾರೆ.

ಘಟನೆಯ ಕುರಿತು ವರದಿ ನೀಡುವಂತೆ ಫಿಫಾ, ಇಂಡೊನೇಷ್ಯಾದ ಪಿಎಸ್‌ಎಸ್‌ಐ ಫುಟ್‌ಬಾಲ್ ಸಂಸ್ಥೆಗೆ ಆದೇಶಿಸಿದೆ. ಪಿಎಸ್‌ಎಸ್‌ಐ ತನ್ನ ತನಿಖಾ ತಂಡವನ್ನು ಮಾಲಾಂಗ್‌ಗೆ ಕಳುಹಿಸಿಕೊಟ್ಟಿದೆ. ದೇಶದ ಮಾನವ ಹಕ್ಕುಗಳ ಆಯೋಗವೂ ಅಶ್ರುವಾಯು ಪ್ರಯೋಗದ ಕುರಿತು ತನಿಖೆ ನಡೆಸಲು ಯೋಜಿಸಿದೆ.

ಇಂಡೊನೇಷ್ಯಾದಲ್ಲಿರುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು ಭದ್ರತಾ ಕ್ರಮಗಳನ್ನು ಟೀಕಿಸಿದೆ. ಅಧಿಕಾರಿಗಳ ಇಂತಹ ಬಲಪ್ರಯೋಗ ಸಮರ್ಥಿಸಲು ಸಾಧ್ಯವಿಲ್ಲ ಎಂದಿದೆ.

ಸ್ಪ್ಯಾನಿಶ್ ಫುಟ್‌ಬಾಲ್ ಕ್ಲಬ್, ಭಾನುವಾರ ಪಂದ್ಯಗಳು ಆರಂಭಕ್ಕೂ ಮೊದಲು ಒಂದು ನಿಮಿಷದ ಮೌನಾಚರಣೆ ಮಾಡಿತು.

ಫುಟ್‌ಬಾಲ್ ಅಂಗಣದಲ್ಲಿ ಸಂಭವಿಸಿದ ಪ್ರಮುಖ ದುರಂತ

- 1964, ಮೇ 24: ಲಿಮಾ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆತಿಥೇಯ ಪೆರು ತಂಡವು ಅರ್ಜೆಂಟೀನಾಕ್ಕೆ ಮುಖಾಮುಖಿಯಾಗಿತ್ತು. ಈ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದಲ್ಲಿ 320 ಮಂದಿ ಸಾವಿಗೀಡಾಗಿ, 1000ಕ್ಕೂ ಅಧಿಕ ಮಂದಿ ಗಾಯಗೊಂಡ ವರದಿಯಾಗಿತ್ತು.
- 1982, ಅಕ್ಟೋಬರ್ 20: ರಷ್ಯಾದ ಲುಜ್ನಿಕಿ ಕ್ರೀಡಾಂಗಣದಲ್ಲಿ ಸ್ಪಾರ್ಟಕ್ ಮಾಸ್ಕೊ ಮತ್ತು ನೆದರ್ಲೆಂಡ್ಸ್‌ನ ಹಾರ್ಲೆಮ್ ತಂಡಗಳ ನಡುವಣ ಯುಇಎಫ್‌ಎ ಕಪ್ ಪಂದ್ಯದ ವೇಳೆ ಸಂಭವಿಸಿದ ದುರಂತದಲ್ಲಿ ಸತ್ತವರ ಸಂಖ್ಯೆ 66 ಎಂದು ಹೇಳಲಾಗಿತ್ತು. ಆದರೆ 340ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿತ್ತು.
- 2001, ಮೇ 9: ಘಾನಾದ ಅಕ್ರಾ ಕ್ರೀಡಾಂಗಣದಲ್ಲಿ ಹಾರ್ಟ್ಸ್ ಆಫ್ ಓಕ್ಸ್ ಮತ್ತು ಕುಮಾಸಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ತಮ್ಮ ತಂಡ ಸೋತಿದ್ದಕ್ಕೆ ಕೋಪಗೊಂಡ ಕುಮಾಸಿ ಅಭಿಮಾನಿಗಳು ಹಿಂಸಾಚಾರ ನಡೆಸಿದ್ದರು. ಪೊಲೀಸರು ಅಶ್ರುವಾಯು, ಗ್ರೆನೇಡ್‌ಗಳನ್ನು ಪ್ರಯೋಗಿಸಿದ್ದರಿಂದ ಕಾಲ್ತುಳಿತ ಉಂಟಾಗಿ 126 ಮಂದಿ ಸಾವಿಗೀಡಾಗಿದ್ದರು.

ಸಾಮರ್ಥ್ಯಕ್ಕೂ ಮೀರಿದ ಪ್ರೇಕ್ಷಕರು

ಮಾಲಾಂಗ್‌ನ ಕಂಜುರುಹಾನ್ ಕ್ರೀಡಾಂಗಣದ ಸಾಮರ್ಥ್ಯ 38 ಸಾವಿರ ಇದ್ದು, 42 ಸಾವಿರ ಪ್ರೇಕ್ಷಕರಿಗೆ ಟಿಕೆಟ್‌ಗಳನ್ನು ವಿತರಿಸಲಾಗಿತ್ತು ಎಂದು ಇಂಡೊನೇಷ್ಯಾದ ಮುಖ್ಯ ಭದ್ರತಾ ಸಚಿವ ಮಹಫೂದ್ ಎಂ.ಡಿ. ಹೇಳಿದ್ದಾರೆ.

ಹೆಚ್ಚಿನ ಸಂಖ್ಯೆಯ ಜನರು ಅಶ್ರುವಾಯು ಪೀಡಿತರಾಗಿದ್ದರಿಂದ ಇಲ್ಲಿಯ ಕಂಜುರುಹಾನ್ ಆಸ್ಪತ್ರೆಯಲ್ಲಿ ಆಘಾತ, ಉಸಿರಾಟದ ತೊಂದರೆ ಮತ್ತು ಆಮ್ಲಜನಕದ ಕೊರತೆಯಿಂದ ಬಳಲುತ್ತಿದ್ದರು ಎಂದು ವೈದ್ಯಾಧಿಕಾರಿ ಬೋಬಿ ಪ್ರಬೋವೊ ಹೇಳಿದ್ದಾರೆ.

ಪಂದ್ಯಗಳು ನಡೆಯುವ ಸಂದರ್ಭದಲ್ಲಿ ಅಧಿಕಾರಿಗಳು ಭದ್ರತಾ ವ್ಯವಸ್ಥೆಯನ್ನು ಸೂಕ್ತವಾಗಿ ಪರಿಶೀಲಿಸಲೇಬೇಕು. ದೇಶದಲ್ಲಿ ಫುಟ್‌ಬಾಲ್ ದುರಂತ ಇದೇ ಕೊನೆಯಾಗಲಿ. ಜೊಕೊ ವಿಡೊಡೊ, ಇಂಡೊನೇಷ್ಯಾ ಅಧ್ಯಕ್ಷ

ಫುಟ್‌ಬಾಲ್ ವಲಯಕ್ಕೆ ಇದು ಕರಾಳ ದಿನ. ಗ್ರಹಿಕೆಗೂ ಮೀರಿದ ದುರಂತವಿದು
ಗಿಯಾನಿ ಇನ್ಫ್ಯಾಂಟಿನೊ, ಫಿಫಾ ಅಧ್ಯಕ್ಷ

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕ ಸ್ಪರ್ಧಿಗಳ ಮಿಂಚು

ಈಜುಕೊಳದಲ್ಲಿ ನಾಲ್ಕು ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾನುವಾರ ಮಿಂಚು ಹರಿಸಿದರು.

ರಾಜ್‌ಕೋಟ್‌ನ ಸರ್ದಾರ್ ಪಟೇಲ್ ಈಜು ಕಾಂಪ್ಲೆಕ್ಸ್‌ನಲ್ಲಿ ನಡೆದ ಸ್ಪರ್ಧೆಗಳಲ್ಲಿ ಕರ್ನಾಟಕದ ಸ್ಪರ್ಧಿಗಳು ನಾಲ್ಕು ಕೂಟ ದಾಖಲೆಯೊಂದಿಗೆ, ನಾಲ್ಕು ಚಿನ್ನ, ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗಳಿಸಿದರು.

ಪುರುಷರ 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅನೀಶ್ ಎಸ್. ಗೌಡ 1 ನಿಮಿಷ 51.88 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಜಯಿಸಿದರು. ಇದರೊಂದಿಗೆ ಈ ಹಿಂದೆ ಕೇರಳದ ಆ್ಯರನ್ ಡಿಸೋಜಾ (1 ನಿ. 52.06 ಸೆ.) ನಿರ್ಮಿಸಿದ್ದ ದಾಖಲೆಯನ್ನು ಮೀರಿದರು.

ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಹಷಿಕಾ ರಾಮಚಂದ್ರ 2 ನಿ. 7.8 ಸೆಕೆಂಡುಗಳ ಸಾಧನೆಯೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. ಅವರು ಕೇರಳದ ಶಿವಾನಿ ಕಟಾರಿಯಾ (2 ನಿ. 7.46 ಸೆ.) ಅವರ ದಾಖಲೆಯನ್ನು ಮುರಿದರು. ಈ ವಿಭಾಗದಲ್ಲಿ ಕರ್ನಾಟಕದ ಧೀನಿಧಿ ದೇಸಿಂಗು ಬೆಳ್ಳಿ ಜಯಿಸಿದರು.

ಮಹಿಳೆಯರ 100 ಮೀ. ಬಟರ್‌ಫ್ಲೈನಲ್ಲಿ ಅಸ್ಸಾಂನ ಆಸ್ಥಾ ಚೌಧರಿ (1 ನಿ. 3.37ಸೆ.) ತಮ್ಮ ದಾಖಲೆಯನ್ನು ಉತ್ತಮಪಡಿಸಿಕೊಂಡು ಚಿನ್ನಕ್ಕೆ ಕೊರಳೊಡ್ಡಿದರು. ಕರ್ನಾಟಕದ ತನಿಶಿ ಗುಪ್ತಾ ಮತ್ತು ನೀನಾ ವೆಂಕಟೇಶ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಒಡತಿಯರಾದರು.

ಹಷಿಕಾ ರಾಮಚಂದ್ರ

ಪುರುಷರ 4X100 ಮೀ. ಫ್ರೀಸ್ಟೈಲ್ ಕರ್ನಾಟಕದ ಅನೀಶ್, ಸಂಭವ್ ಆರ್, ಪೃಥ್ವಿ ಎಂ. ಮತ್ತು ಶ್ರೀಹರಿ ನಟರಾಜ್ ಅವರಿದ್ದ ತಂಡ (3 ನಿ. 27.32 ಸೆ.) ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿತು. ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲೂ ರಾಜ್ಯ ತಂಡ ಅಗ್ರಸ್ಥಾನ ಗಳಿಸುವುದರೊಂದಿಗೆ ಕೂಟ ದಾಖಲೆ ಬರೆಯಿತು. ರಿಧಿಮಾ ವೀರೇಂದ್ರ ಕುಮಾರ್, ರುಜುಲಾ ಎಸ್, ಲಿತೇಶಾ ಮಂದಣ್ಣ ಮತ್ತು ನೀನಾ ವೆಂಕಟೇಶ್ ಅವರನ್ನೊಳಗೊಂಡ ತಂಡವು 4 ನಿ. 3.10 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು.

ಅಥ್ಲೆಟಿಕ್ಸ್‌ನಲ್ಲಿ ಕಂಚು: ಅಥ್ಲೆಟಿಕ್ಸ್ ಸ್ಪರ್ಧೆಗಳ ಮಹಿಳೆಯರ 4X400 ಮೀ. ರಿಲೇಯಲ್ಲಿ ಕರ್ನಾಟಕ ಕಂಚು ಜಯಿಸಿತು. ಸಿಂಚಲ್ ಕಾವೇರಮ್ಮ, ಇಂಚರ ಎನ್.ಎಸ್, ವಿಜಯಕುಮಾರಿ ಜಿ.ಕೆ. ಲಿಖಿತಾ ಎಂ ಅವರನ್ನೊಳಗೊಂಡ ತಂಡ 3 ನಿ. 36.50 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಈ ವಿಭಾಗದಲ್ಲಿ ತಮಿಳುನಾಡು ಚಿನ್ನ ಮತ್ತು ಹರಿಯಾಣ ಬೆಳ್ಳಿ ಜಯಿಸಿತು.

ಸೆಮಿಫೈನಲ್‌ಗೆ ಶರ್ಮದಾ– ಪ್ರಜ್ವಲ್: ಕರ್ನಾಟಕದ ಶರ್ಮದಾ ಬಾಲು ಮತ್ತು ಎಸ್.ಡಿ. ಪ್ರಜ್ವಲ್ ದೇವ್ ಜೋಡಿಯು ಮಿಶ್ರ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿತು. ಕ್ವಾರ್ಟರ್‌ಫೈನಲ್‌ನಲ್ಲಿ ಶರ್ಮದಾ– ಪ್ರಜ್ವಲ್ 5-7, 6-3, 10-1ರಿಂದ ದೆಹಲಿಯ ಕಶಿಶ್ ಭಾಟಿಯಾ–ರಿಕಿ ಚೌಹಾರಿ ಎದುರು ಜಯಿಸಿದರು.

ಲಂಡನ್ ಮ್ಯಾರಥಾನ್: ಕಿಪ್ರುಟೊ ಚಾಂಪಿಯನ್

ಲಂಡನ್ (ಎಎಫ್‌ಪಿ): ಕೆನ್ಯಾದ ಅಮೊಸ್ ಕಿಪ್ರುಟೊ ಮತ್ತು ಇಥಿಯೋಪಿಯಾದ ಯಲೆಮ್‌ಜರ್ಫ್ ಯೆಹುಲಾವ್ ಅವರು ಲಂಡನ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಭಾನುವಾರ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಇಲ್ಲಿ ಮೊದಲ ಬಾರಿ ಸ್ಪರ್ಧಿಸಿದ್ದ 30 ವರ್ಷದ ಕಿಪ್ರುಟೊ 2 ತಾಸು, 4 ನಿಮಿಷ 39 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಥಿಯೋಪಿಯಾದವರೇ ಆದ ಲೆಯುಲ್ ಗೇಬ್ರಿಸಿಲೆಸ್ (2 ತಾಸು 5 ನಿ. 12 ಸೆ.) ಮತ್ತು ಬೆಲ್ಜಿಯಂನ ಬಶೀರ್ ಅಬ್ದಿ (2 ತಾಸು 5 ನಿ. 19 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಅಮೊಸ್ ಕಿಪ್ರುಟೊ– ಎಎಫ್‌ಪಿ ಚಿತ್ರ

ಮಹಿಳೆಯರ ವಿಭಾಗದಲ್ಲಿ ಯೆಹುಲಾವ್ 2 ತಾಸು 17 ನಿ. 26 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಹೋದ ಬಾರಿಯ ಚಾಂಪಿಯನ್, ಕೆನ್ಯಾದ ಜಾಯ್‌ಸಿಲಿನ್ ಜೆಪ್‌ಕೊಸ್ಗೆ (2 ತಾಸು 18 ನಿ. 7 ಸೆ.) ಎರಡನೇ ಸ್ಥಾನ ಗಳಿಸಿದರು. ಮೂರನೇ ಸ್ಥಾನವು ಇಥಿಯೋಪಿಯಾದ ಅಲೆಮು ಮೆಗೆರ್ಟು (2 ತಾ. 18 ನಿ. 32 ಸೆ.) ಅವರ ಪಾಲಾಯಿತು.

ಟಿಟಿ: ಭಾರತಕ್ಕೆ ಮಣಿದ ಜರ್ಮನಿ

ಚೆಂಗ್ದು, ಚೀನಾ (ಪಿಟಿಐ): ಜಿ.ಸತ್ಯನ್ ಅವರ ಅಮೋಘ ಆಟದ ನೆರವಿನಿಂದ ಭಾರತ ತಂಡದವರು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಜರ್ಮನಿಗೆ ಆಘಾತ ನೀಡಿದರು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ, ವಿಶ್ವ ರ‍್ಯಾಂಕಿಂಗ್‌ನಲ್ಲಿ 2ನೇ ಸ್ಥಾನದಲ್ಲಿರುವ ಜರ್ಮನಿ ವಿರುದ್ಧ 3–1 ರಲ್ಲಿ ಗೆದ್ದಿತು. ಸತ್ಯನ್ ಅವರು ತಾವಾಡಿದ ಎರಡೂ ಸಿಂಗಲ್ಸ್ ಪಂದ್ಯಗಳಲ್ಲಿ ಗೆದ್ದರು.

ಮೊದಲ ಸಿಂಗಲ್ಸ್‌ನಲ್ಲಿ 11-13, 4-11, 11-8, 11-4, 11-9 ರಲ್ಲಿ ಡುಡಾ ಬೆನೆಡಿಕ್ಟ್ ಅವರನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ 10-12, 7-11, 11-8, 11-8, 11-9 ರಲ್ಲಿ ಡಾಂಗ್ ಕ್ಯು ಅವರನ್ನು ಸೋಲಿಸಿದರು.

ಎರಡನೇ ಸಿಂಗಲ್ಸ್‌ನಲ್ಲಿ ಹರ್ಮೀತ್ ದೇಸಾಯಿ ಅವರು ಡಾಂಗ್ ಕೈಯಲ್ಲಿ ಸೋತರೆ, ಮಾನವ್ ಠಾಕರ್ ರಿಕಾರ್ಡೊ ವಾಲ್ಟೆರ್ ಎದುರು ಗೆದ್ದರು.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.
8006973372
7506062785

ಕ್ಯಾಶ್‌ಬ್ಯಾಕ್ ₹5000# ರವರೆಗೆ
ಜೀರೋ ಡೌನ್ ಪೇಮೆಂಟ್*
ನೋ ಕಾಸ್ಟ್ EMI*
ನೋ ಹೈಪೊಥಿಕೇಶನ್*
HONDA joyclub
ಡೀಲರ್ ವಿವರಗಳಿಗೆ 7230032200 ಗೆ WhatsApp ಅಥವಾ ಮಿಸ್ಡ್ ಕಾಲ್ ಮಾಡಿ ಅಥವಾ QR Code ಸ್ಕ್ಯಾನ್ ಮಾಡಿ
1. ಇಯರ್‌ಫೋನ್ ಕನೆಕ್ಟ್ ಮಾಡಿ
2. QR Code ಸ್ಕ್ಯಾನ್ ಮಾಡಿ
3. ವೀಡಿಯೋ ಆನಂದಿಸಿ

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda2wheelersindia.com

#ಪ್ರಸ್ತಾಪಿಸಿದ ಕ್ಯಾಶ್‌ಬ್ಯಾಕ್ ರೂ. 30000 ವಹಿವಾಟಿನ ಮೇಲೆ ರೂ. 5000 ವರೆಗೆ 5% ಕ್ಯಾಶ್‌ಬ್ಯಾಕ್ ಆಗಿದ್ದು (ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ ರೂ. 40000) ಕೊಡುಗೆ ಅವಧಿಯಲ್ಲಿ ಒಮ್ಮೆ ಪ್ರತಿ ಕಾರ್ಡ್‌ಗೆ ಕಾರ್ಡ್ ವಿತರಕರು/ಬ್ಯಾಂಕ್‌ಗಳ ನೀತಿ ಪ್ರಕಾರ ಆಯ್ದ ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವಹಿವಾಟಿನ ಮೇಲೆ ಮಾತ್ರ ಅನ್ವಯಿಸುತ್ತದೆ. ಕೊಡುಗೆ ಅವಧಿಯು 1 ಜುಲೈ 2022ರಿಂದ 31 ಅಕ್ಟೋಬರ್ 2022ರ ವರೆಗೆ ಮಾತ್ರ ಇರುತ್ತದೆ. *ಹಣಕಾಸು ಸ್ಕೀಮ್‌ಗಳು ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಗ್ರಾಹಕರ ಪ್ರೊಫೈಲ್‌ಗಳಿಗೆ ಆಯ್ದ ಹಣಕಾಸು ಪಾಲುದಾರರ ಮೂಲಕ ಅವರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಅನ್ವಯಿಸುತ್ತದೆ ಮತ್ತು ನಿಜವಾದ ಡೌನ್ ಪೇಮೆಂಟ್ ಹಣಕಾಸು ಕಂಪನಿ ನೀತಿಗೆ ಬದಲಾಗಬಹುದು. ಹಣಕಾಸು ಸ್ಕೀಮ್‌ಗಳು 31 ಅಕ್ಟೋಬರ್ 2022 ರ ವರೆಗೆ ಆಯ್ದ ಡೀಲರ್‌ಶಿಪ್‌ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು ಯಾವುದೇ ಪೂರ್ವ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾಗಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ಕಾಣಿಸುವ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 25320623, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397; Haiku Honda - DOMLUR: 49656565, 9342432156; INDIRANAGAR: 9343796289, 080 - 41133737; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BANNERAGHATTA RD: 08068818881; BTM LAYOUT: 7353252007; KANAKAPURA RD: 08068818881; PUTTENAHALLI: 08068818881; GOTTIGERE: 08068818881; VFM Honda - KR PURAM: 49499299, 9071858885, 9071858881; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 8105597877, 9686573013; GUNJUR: 9606450642, 9606450641; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 9731414444.
For Bulk/Institutional enquiries, please write us at: institutionalsales@honda2wheelersindia.com